24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 50 | ನವದೆಹಲಿ | ಬೆಲೆ ₹10 | ಆಗಸ್ಟ್ 17, 2026 ಸೋಮವಾರ

## ಒಳಪುಟಗಳಲ್ಲಿ


ಬಡತನ, ಅನಕ್ಷರತೆಯಿಂದ ಸ್ವಾತಂತ್ರ್ಯ ಬೇಕಿದೆ ಹಿರಿಯ ಪತ್ರಕರ್ತ ವಿಶ್ವೇಶ್ವರ್ ಭಟ್ ಅಭಿಮತ - ಪು.5

ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ

ಮನುವಾದಿಗಳ ಅತಿರೇಕದ ವರ್ತನೆ ಸಚಿವ ಈಶ್ವರ್ ಖಂಡ್ರೆ ಖಂಡನೆ - ಪು6

ಮಾಡ್ಯುಲರ್ ಕೃತಕ ಕೈ-ಕಾಲಿನ ಅಂಗಗಳ ಅಳವಡಿಕೆಯ ಮಾಪನದ ಉಚಿತ ಶಿಬಿರ- ಲಕ್ಷ್ಮಿಕಾಂತರೆಡ್ಡಿ - ಪು.7


# ಕಾವೇರಿ ವಿಚಾರದಲ್ಲಿ ರೈತರ ಹಿತ ಕಾಯುವುದು ಸರ್ಕಾರದ ಕರ್ತವ್ಯ

**ಮಡಿಕೇರಿ, ಆ.16:** ರಾಜ್ಯದ ಜಲಾಶಯಗಳು ಇನ್ನೂ ಸಂಪೂರ್ಣವಾಗಿ ತುಂಬಿಲ್ಲ. ನಮ್ಮ ರೈತರನ್ನು ಬದುಕಿಸುವ ಸವಾಲಿನ ಜೊತೆಗೆ ಕಾನೂನನ್ನೂ ಕಾಪಾಡಬೇಕು. ಎರಡೂ ಬಹಳ ಮುಖ್ಯ. ಕಾವೇರಿ ವಿಚಾರದಲ್ಲಿ ರೈತರ ಹಿತ ಕಾಯುವುದು ನನ್ನ ಕರ್ತವ್ಯ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಕೊಡಗಿನ ಭಾಗಮಂಡಲದಲ್ಲಿ ಭಗಂಡೇಶ್ವರನ ದರ್ಶನ ಪಡೆದ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಕುಡಿಯುವ ನೀರು, ಕೃಷಿಗೆ ಜಲಾಶಯಗಳಲ್ಲಿನ ನೀರಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡೇ ನಿರ್ಧಾರ ಕೈಗೊಳ್ಳಬೇಕು. ಉತ್ತಮ ಮಳೆಯಾಗಿ ಬೆಳೆ ಸಮೃದ್ಧಿಯಾಗಬೇಕು, ರೈತರಿಗೆ ಅನ್ನ ಸಿಗಬೇಕು ಎಂಬುದು ನಮ್ಮ ಆಶಯ ಎಂದು ತಿಳಿಸಿದರು.

ರಾಜ್ಯದ ಒಳಗೆ ಯಾವುದೇ ಅಣೆಕಟ್ಟು ಕಟ್ಟಲು ಅಭ್ಯಂತರವಿಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಹೇಳಿದೆ. ಕೇಂದ್ರ ಸರ್ಕಾರ ಕೂಡ ತಮಿಳುನಾಡಿನ ಸಂಸದರಿಗೆ ಉತ್ತರ ನೀಡುವಾಗಲೂ ಸ್ಪಷ್ಟಪಡಿಸಿದೆ. ಮೇಕೆದಾಟು ನಿರ್ಮಾಣದಿಂದ ತಮಿಳುನಾಡಿಗೆ ನಿಗದಿಯಾಗಿರುವ 177.25 ಟಿಎಂಸಿ ನೀರಿನ ಹಂಚಿಕೆಗೆ ತೊಂದರೆಯಾಗುವುದಿಲ್ಲ. ಸಂಕಷ್ಟದ ಸಂದರ್ಭದಲ್ಲಿ ನೀರು ಹಂಚಿಕೆಗೆ ಪ್ರತ್ಯೇಕ ನಿಯಮಗಳಿವೆ. ಕಾವೇರಿ ನೀರು



ನಿರ್ವಹಣಾ ಪ್ರಾಧಿಕಾರವೂ ಈ ಬಗ್ಗೆ ಅಗತ್ಯ ನಿರ್ದೇಶನಗಳನ್ನು ನೀಡಿದೆ. ನಮ್ಮ ಡ್ಯಾಮ್‌ಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾದರೆ ಅನಗತ್ಯ ಸಂಕಷ್ಟ ಎದುರಾಗಬಹುದು. ಆ ಪರಿಸ್ಥಿತಿ ಬರಬಾರದು. ನಾವು ಕಾನೂನು ಪಾಲಿಸದಿದ್ದರೆ ಅಣೆಕಟ್ಟು ನಿಯಂತ್ರಣವನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದರು.

### ಯಾವ ಸಂಘಟನೆಯಾದರೂ ಕಾನೂನು ಪಾಲಿಸಬೇಕು

ಸರ್ಕಾರಿ ಜಾಗಗಳಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ಪಡೆಯಬೇಕು ಎನ್ನುವ ನಿಯಮದ ಬಗ್ಗೆ ಬಿಜೆಪಿ ನಾಯಕ ಬಿ.ಎಲ್. ಸಂತೋಷ್ ಆಕ್ಷೇಪದ ಬಗ್ಗೆ ಕೇಳಿದಾಗ, ನಾವು ಮೊದಲಿನಿಂದಲೂ ಯಾವುದನ್ನೋ ಹಿಡಿದುಕೊಂಡು ರಾಜಕೀಯ ಮಾಡುವುದಿಲ್ಲ. ಯಾರೂ ಗಾಬರಿಪಡುವ ಅಗತ್ಯವಿಲ್ಲ. ಯಾವುದೇ ಸಂಘಟನೆಯಾಗಲಿ ಕಾನೂನು ಪಾಲಿಸಬೇಕು. ಸರ್ಕಾರಕ್ಕೆ ಅನುಮತಿ ಕೋರಿ ಅರ್ಜಿ ಬಂದರೆ, ನಿಯಮಾನುಸಾರ ಅಗತ್ಯ ಅನುಮತಿ ಹಾಗೂ ಸಿಬ್ಬಂದಿ ವ್ಯವಸ್ಥೆ ಮಾಡಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ಸಚಿವ ಕೃಷ್ಣ ಬೈರೇಗೌಡರು ಸಹ ಫ್ರೀಡಂ ಹಬ್ಬ ಮಾಡಲು ಸರ್ಕಾರದ ಅನುಮತಿ ಪಡೆದರು. ದಳ, ಬಿಜೆಪಿ, ಕಾಂಗ್ರೆಸ್ ಹಾಗೂ ಇತರ ಸಂಘಟನೆಗಳು ಯಾರೇ ಆದರೂ ನಾವೆಲ್ಲರೂ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯಕ್ರಮ ನಡೆಸಲು ಅವಕಾಶವಿದೆ ಎಂದರು. ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ವೋಟ್ ಚೋರಿ ಹೋರಾಟದ ಸಂದರ್ಭದಲ್ಲಿ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲು ಜಾಥಾ ಮಾಡಬೇಕಾಗಿತ್ತು. ಆಗ ನಾವು ಅಧಿಕಾರ ದುರುಪಯೋಗ ಮಾಡಬಾರದು ಎಂಬ ಕಾರಣಕ್ಕೆ ಕಾನೂನು ಪಾಲಿಸುವಂತೆ ಮನವಿ ಮಾಡಿದ್ದೆವು. ಸುಪ್ರೀಂ ಕೋರ್ಟ್‌ನ ನಿರ್ದೇಶನಗಳನ್ನು ಗೌರವಿಸುವುದು ನಮ್ಮ ಜವಾಬ್ದಾರಿ ಎಂದು ತಿಳಿಸಿದರು.

### ಮಳೆಗಾಗಿ ಕಿಗ್ಗಾಲಿಯಲ್ಲಿ ಪ್ರಾರ್ಥನೆ

ಕಾವೇರಿ ನದಿಗೆ ಹಾಗೂ ಕನ್ನಂಬಾಡಿ ಕಟ್ಟೆ ಅನ್ನದ ತಟ್ಟೆ. ನಮ್ಮ ರೈತರು ಬೆಳೆ ತೆಗೆಯಲಿ, ಅವರು ಉಳಿಯಲಿ ಎಂದು ತಾಯಿ ಕಾವೇರಿಗೆ ಪ್ರಾರ್ಥನೆ ಸಲ್ಲಿಸಿದ್ದೇನೆ. ಮೇಕೆದಾಟು ಹೋರಾಟ ನಮ್ಮ ನೀರು, ನಮ್ಮ ಹಕ್ಕು ಸಂದರ್ಭದಲ್ಲಿ ಕಾವೇರಿ ತಾಯಿಗೆ ಪ್ರಾರ್ಥನೆ ಸಲ್ಲಿಸಿದ್ದೆ. ಮೂರು ವರ್ಷಕ್ಕೊಮ್ಮೆ ಇಂತಹ ನೀರಿನ ಸಮಸ್ಯೆ ಎದುರಾಗುವುದು ಪ್ರಕೃತಿಯ ನಿಯಮ. ಮಳೆಗಾಗಿ ರಾಜ್ಯದ ಜನರ ಪ್ರಾರ್ಥನೆಯೂ ಅಗತ್ಯ. ಮಳೆಗಾಗಿಯೇ ಪ್ರಾರ್ಥನೆ ಸಲ್ಲಿಸಲು ಇರುವ ಕಿಗ್ಗಾಲಿಯಲ್ಲಿಯೂ ಪ್ರಾರ್ಥನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿಗಳು, ಸ್ಥಳೀಯ ಶಾಸಕರಿಗೆ ತಿಳಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

# ಕಾವೇರಿ ನೀರು ಹಂಚಿಕೆ: ಇಂದು ಸುಪ್ರೀಂ ಕೋರ್ಟ್‌ನಲ್ಲಿ ತಮಿಳುನಾಡು ಅರ್ಜಿ ವಿಚಾರಣೆ

**ನವದೆಹಲಿ, ಆ.16:** ತಕ್ಷಣವೇ ಕಾವೇರಿ ನೀರನ್ನು ಹರಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆ ಸೋಮವಾರ ನಡೆಯಲಿದೆ. ನ್ಯಾಯಾಲಯದ ಕಾಸ್ ಲಿಸ್ಟ್ ಪ್ರಕಾರ, ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು ಈ ಅರ್ಜಿಯ ವಿಚಾರಣೆ ನಡೆಸಲಿದೆ. ಮಳೆ ಕೊರತೆಯಿರುವ ಪ್ರಸಕ್ತ ವರ್ಷದಲ್ಲಿ ತಮಿಳುನಾಡಿಗೆ ತನ್ನ ಪಾಲಿನ ಕಾವೇರಿ ನೀರು ಸಿಗುತ್ತಿಲ್ಲ ಎಂದು ಜೋಸೆಫ್ ವಿಜಯ್ ನೇತೃತ್ವದ ತಮಿಳುನಾಡು ಸರ್ಕಾರ ಆಗಸ್ಟ್ 3 ರಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಕಾವೇರಿ ನೀರು ನಿಯಂತ್ರಣ ಸಮಿತಿ ನಿಗದಿಪಡಿಸಿದ ಪ್ರಮಾಣ ಹಾಗೂ ಕರ್ನಾಟಕ ಸರ್ಕಾರ ಬಿಡುಗಡೆ ಮಾಡುತ್ತಿರುವ ನೀರಿನ ಪ್ರಮಾಣವು ತಮಗೆ ಅಗತ್ಯವಿರುವುದಕ್ಕಿಂತ ಅತ್ಯಂತ ಕಡಿಮೆಯಾಗಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದೆ. ಜುಲೈ 28 ರಂದು ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿಯ ಸಭೆಯಲ್ಲಿ ಜುಲೈ 29 ರಿಂದ 15 ದಿನಗಳ ಕಾಲ ದಿನಕ್ಕೆ 3,500 ಕ್ಯೂಸೆಕ್ ನೀರು ಬಿಡುವಂತೆ ಕರ್ನಾಟಕಕ್ಕೆ ಸೂಚಿಸಲಾಗಿತ್ತು. ಆದರೆ ಜುಲೈ 29 ರಿಂದ ಆಗಸ್ಟ್ 2 ರವರೆಗೆ ಬಿಳಿಗುಂಡ್ಲು ಬಳಿ ಕೇವಲ 158 ರಿಂದ 550 ಕ್ಯೂಸೆಕ್ ನೀರು ಮಾತ್ರ ಹರಿದುಬಂದಿದೆ ಎಂದು ತಮಿಳುನಾಡು ಸರ್ಕಾರ ದೂರಿದೆ. ಕರ್ನಾಟಕದ ಕೆಆರ್‌ಎಸ್, ಕಬಿನಿ, ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಲ್ಲಿ ಆಗಸ್ಟ್ 3ರ ವೇಳೆಗೆ ಒಟ್ಟು 77.537 ಟಿಎಂಸಿ ನೀರು ಸಂಗ್ರಹವಿದ್ದು, ತಮಿಳುನಾಡಿನ ಪಾಲಿನ ನೀರನ್ನು ಬಿಡುಗಡೆ ಮಾಡಲು ಕರ್ನಾಟಕಕ್ಕೆ ಯಾವುದೇ ತೊಂದರೆಯಿಲ್ಲ ಎಂದು ತಮಿಳುನಾಡು ಸರ್ಕಾರ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಇತ್ತೀಚೆಗೆ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಬಿದ್ದ ಮಳೆಯ ಆಧಾರದ ಮೇಲೆ ಬಿಳಿಗುಂಡ್ಲುವಿನಲ್ಲಿ 26.954 ಟಿಎಂಸಿ ನೀರು ಹರಿಯಬೇಕಿತ್ತು, ಆದರೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಕೇವಲ 4.536 ಟಿಎಂಸಿ ನೀರು ಹಂಚಿಕೆ ಮಾಡಿರುವುದು ಅತ್ಯಂತ ಕಡಿಮೆಯಾಗಿದೆ ಎಂದು ಹೇಳಿದೆ. ತನಗೆ ಬರಬೇಕಾದ 26.954 ಟಿಎಂಸಿ ನೀರನ್ನು ಹಂಚಿಕೆ ಮಾಡಲು ಕರ್ನಾಟಕ ವಿಫಲವಾಗಿದೆ ಎಂದು ತಮಿಳುನಾಡು ಆರೋಪಿಸಿದೆ.

# ವಿಪತ್ತು ನಿರ್ವಹಣಾ ಪ್ರಾಧಿಕಾರ ರಚಿಸಿದ ದೇಶದ ಏಕೈಕ ರಾಜ್ಯ ಕರ್ನಾಟಕ

### ಸಂಸದೀಯ ಸ್ಥಾಯಿ ಸಮಿತಿ ವರದಿಯಲ್ಲಿ ಉಲ್ಲೇಖ

**ನವದೆಹಲಿ, ಆ.16:** ನಗರ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು (ಯುಡಿಎಂಎ) ಸ್ಥಾಪಿಸಿದ ಏಕೈಕ ರಾಜ್ಯ ಕರ್ನಾಟಕ ಎಂಬುದು ಸಂಸದೀಯ ಸ್ಥಾಯಿ ಸಮಿತಿ ವರದಿಯಲ್ಲಿ ಹೇಳಲಾಗಿದೆ. ಎಲ್ಲಾ ರಾಜ್ಯ ಸರ್ಕಾರಗಳಿಗೆ ನಿರ್ದಿಷ್ಟ ಸಮಯದೊಳಗೆ ಯುಡಿಎಂಎ ಸ್ಥಾಪಿಸಲು ಸೂಚಿಸುವಂತೆ ಗೃಹ ಸಚಿವಾಲಯಕ್ಕೆ ಸಮಿತಿಯು ನಿರ್ದೇಶನ ನೀಡಿದೆ.

ವಿಪತ್ತು ನಿರ್ವಹಣೆ ಸಂಬಂಧ ಇದೇ ತಿಂಗಳ ಆರಂಭದಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗಿರುವ ವರದಿಯಲ್ಲಿ ಈ ಶಿಫಾರಸು ಮಾಡಲಾಗಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಅಂಗೀಕಾರಗೊಂಡಿದ್ದ 'ವಿಪತ್ತು ನಿರ್ವಹಣೆ (ತಿದ್ದುಪಡಿ) ಕಾಯ್ದೆ – 2025', ಏಪ್ರಿಲ್‌ನಿಂದ ಜಾರಿಗೆ ಬಂದಿತ್ತು. ದೆಹಲಿ ಹಾಗೂ ಚಂಡೀಗಢವನ್ನು ಹೊರತುಪಡಿಸಿ ಪ್ರತಿಯೊಂದು ರಾಜ್ಯವೂ, ರಾಜಧಾನಿ ಹಾಗೂ ಎಲ್ಲಾ ನಗರ ಪಾಲಿಕೆಗಳಲ್ಲಿ ಎದುರಾಗುವ ವಿಪತ್ತುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಯುಡಿಎಂಎ ಸ್ಥಾಪಿಸಬೇಕು ಎಂಬುದಾಗಿ ಆ ಕಾಯ್ದೆಯಲ್ಲಿ ಸೂಚಿಸಲಾಗಿದೆ. ವಿಪತ್ತು ಎದುರಾದ ಸಂದರ್ಭಗಳಲ್ಲಿ ಮಹಾನಗರಗಳ ಅಗತ್ಯಗಳನ್ನು ಪೂರೈಸುವ, ಸಮಸ್ಯೆಯನ್ನು ಪರಿಹರಿಸುವುದು ಯುಡಿಎಂಎ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಮಾತ್ರವೇ ಕಾರ್ಯಪ್ರವೃತ್ತವಾಗಿದ್ದು, ರಾಜಧಾನಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಾಗಿ (ಬಿಬಿಎಂಪಿ) ಯುಡಿಎಂಎ ರಚಿಸಿದೆ' ಎಂದು ಸ್ಥಾಯಿ ಸಮಿತಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಬಿಎಂಪಿ ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ (ಜಿಬಿಎ) ಬದಲಾಗಿದೆ. 'ಯುಡಿಎಂಎಗಳ ಪರಿಣಾಮಕಾರಿ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ರಾಜ್ಯಗಳಿಗೆ ಅಗತ್ಯ ತಾಂತ್ರಿಕ ಮಾರ್ಗದರ್ಶನ ನೀಡಬೇಕು, ಪ್ರಮಾಣಿತ ಚೌಕಟ್ಟನ್ನು ಒದಗಿಸಬೇಕು. ಯುಡಿಎಂಎ ರಚನೆ ಸಂಬಂಧ ದೇಶದಾದ್ಯಂತ ಪ್ರಗತಿ ಪರಿಶೀಲನೆ ನಡೆಸಲು ನಿಯಮಿತ ಮೇಲ್ವಿಚಾರಣಾ ವ್ಯವಸ್ಥೆ ರೂಪಿಸಬೇಕು' ಎಂದೂ ತಿಳಿಸಲಾಗಿದೆ.

# ಇ–ಕ್ಯಾಬಿನೆಟ್ ವ್ಯವಸ್ಥೆ ಜಾರಿಗೆ ದೆಹಲಿ ಸರ್ಕಾರ ಸಜ್ಜು

**ನವದೆಹಲಿ, ಆ.16:** ದೆಹಲಿ ಸರ್ಕಾರವು ರಾಷ್ಟ್ರೀಯ ರಾಜಧಾನಿಯಲ್ಲಿ ಆಧುನಿಕ ಇ–ಕ್ಯಾಬಿನೆಟ್ (e-Cabinet) ವ್ಯವಸ್ಥೆ ಜಾರಿಗೆ ಮುಂದಾಗಿದ್ದು, ಈ ಸಂಬಂಧಮುಖ್ಯಮಂತ್ರಿ ರೇಖಾ ಗುಪ್ತಾ ಅವರು ರಾಷ್ಟ್ರೀಯ ಮಾಹಿತಿ ಕೇಂದ್ರದ (NIC) ತಜ್ಞರೊಂದಿಗೆ ಚರ್ಚೆ ನಡೆಸಿದರು.

ದೆಹಲಿ ಸರ್ಕಾರದ ಸಂಪುಟ ಸಭೆಗಳ ಸಂಪೂರ್ಣ ಪ್ರಕ್ರಿಯೆಯನ್ನು ಕಾಗದರಹಿತ (ಪೇಪರ್‌ಲೆಸ್), ಹೆಚ್ಚು ಸುರಕ್ಷಿತ, ವೇಗ ಹಾಗೂ ಪಾರದರ್ಶಕಗೊಳಿಸುವ ಡಿಜಿಟಲ್ ವ್ಯವಸ್ಥೆಯ ಕುರಿತು ಈ ಸಭೆಯಲ್ಲಿ ಚರ್ಚಿಸಲಾಯಿತು.

ಆಡಳಿತಾತ್ಮಕ ಸುಧಾರಣೆಗಳು ಮತ್ತು ಉತ್ತಮ ಆಡಳಿತಕ್ಕಾಗಿ ಆಧುನಿಕ ತಂತ್ರಜ್ಞಾನವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಗುಪ್ತಾ ಹೇಳಿದರು.

ಈ ಇ–ಕ್ಯಾಬಿನೆಟ್ ವ್ಯವಸ್ಥೆಯ ಪರಿಚಯವು ಪ್ರಕ್ರಿಯೆಯನ್ನು ಬದಲಾಯಿಸುವ ನಿರೀಕ್ಷೆಯಿದ್ದು, ಸಂಪುಟ ಸಭೆಗಳನ್ನು ಡಿಜಿಟಲ್ ರೂಪದಲ್ಲಿ ನಡೆಸಲು ಸಾಧ್ಯವಾಗುತ್ತದೆ. ಈ ಕ್ರಮವು ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ವೇಗಗೊಳಿಸುವುದು ಮಾತ್ರವಲ್ಲದೆ, ರಹಸ್ಯ ದಾಖಲೆಗಳ ಸುರಕ್ಷತೆಯನ್ನು ಬಲಪಡಿಸಲು ಮತ್ತು ಇಲಾಖೆಗಳ ನಡುವಿನ ಸಮನ್ವಯವನ್ನು ಹೆಚ್ಚು ಪರಿಣಾಮಕಾರಿ ಹಾಗೂ ಸುಲಲಿತಗೊಳಿಸುವ ಗುರಿಯನ್ನು ಹೊಂದಿದೆ. ...4ನೇ ಪುಟಕ್ಕೆ

# ಜೆಟ್ ಚಾಲಿತ ಸ್ವದೇಶಿ ದಿವ್ಯಾಸ್ತ್ರ ಎಂಕೆ–3 ಪರೀಕ್ಷೆ ಯಶಸ್ವಿ



**ಲಖನೌ, ಆ.16:** ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಮುಂದಿನ ಪೀಳಿಗೆಯ ಜೆಟ್ ಚಾಲಿತ ಲೋಯಿಟರಿಂಗ್ ಮ್ಯುನಿಷನ್ ದಿವ್ಯಾಸ್ತ್ರ ಎಂಕೆ 3 ಮೊದಲ ಹಾರಾಟವನ್ನು Kawa UAV Pvt. Ltd. (Hoverlt) ಭಾನುವಾರ ಯಶಸ್ವಿಯಾಗಿ ನಡೆಸಿತು.


ಡಿಜಿ ಪ್ರೊಪಲ್ಷನ್ ಅಭಿವೃದ್ಧಿಪಡಿಸಿರುವ ಸ್ವದೇಶಿ ಜೆಟ್ ಎಂಜಿನ್‌ನಿಂದ ಚಾಲಿತವಾಗಿರುವ ದಿವ್ಯಾಸ್ತ್ರ ಎಂಕೆ 3 ಮೊದಲ ಹಾರಾಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಯೋಜನೆ ಆರಂಭದಿಂದ ಮೊದಲ ಹಾರಾಟದವರೆಗೆ ತೆಗೆದುಕೊಂಡಿದ್ದು ಕೇವಲ ಒಂದು ಕ್ಯಾಲೆಂಡರ್ ವರ್ಷ. ಆಮದು ಮಾಡಲಾದ ಜೆಟ್ ಎಂಜಿನ್ ಇಲ್ಲ. ವಿದೇಶಿ ಪ್ರಮುಖ ಉಪವ್ಯವಸ್ಥೆ ಇಲ್ಲ. ಭಾರತದಲ್ಲೇ ನಿರ್ಮಾಣ. ಭಾರತದಲ್ಲೇ ಹಾರಾಟ. ದಿವ್ಯಾಸ್ತ್ರ ಎಂಕೆ3 ವೇಗ, ಬುದ್ಧಿವಂತಿಕೆ ಮತ್ತು ಯಾವುದೇ ರಾಜಿಯಿಲ್ಲದ ಸಾಮರ್ಥ್ಯ. ಇದು ಕೇವಲ ಹಾರಾಟವಲ್ಲ. ಇದು ಆತ್ಮನಿರ್ಭರ ಭಾರತ ಕಾರ್ಯರೂಪಕ್ಕೆ ಬಂದಿರುವುದೇ ಸಾಕ್ಷಿ ಎಂದು Hoverlt ತಿಳಿಸಿದೆ.

ಈ ಸಾಧನೆಯ ಮಹತ್ವವನ್ನು ಒತ್ತಿಹೇಳಿದ ಸಂಸ್ಥೆಯ ಸಹ–ಸ್ಥಾಪಕರು, ಯಶಸ್ವಿ ಹಾರಾಟವು ಸ್ವದೇಶಿ ರಕ್ಷಣಾ ಉತ್ಪಾದನಾ ಕ್ಷೇತ್ರದ ಪ್ರಮುಖ ಮೈಲಿಗಲ್ಲಾಗಿದೆ ಎಂದು ಹೇಳಿದ್ದಾರೆ. ಭಾರತ ತನ್ನದೇ ಗಡಿಯೊಳಗೆ ಜೆಟ್ ಚಾಲಿತ ನಿಖರ ದಾಳಿ ವ್ಯವಸ್ಥೆಯನ್ನು ಪರಿಕಲ್ಪನೆ ಮಾಡಿ, ವಿನ್ಯಾಸಗೊಳಿಸಿ, ಎಂಜಿನಿಯರಿಂಗ್ ಮಾಡಿ ಮತ್ತು ಹಾರಾಟ ನಡೆಸಬಲ್ಲದು ಎಂಬುದನ್ನು ಇದು ಸಾಬೀತುಪಡಿಸುತ್ತದೆ. ಇದು ಕೇವಲ ಪರೀಕ್ಷಾರ್ಥ ಹಾರಾಟವಲ್ಲ, ನಮ್ಮ ಸಂಕಲ್ಪದ ಘೋಷಣೆ. ದಿವ್ಯಾಸ್ತ್ರ ಎಂಕೆ–3 ಆತ್ಮನಿರ್ಭರ ಭಾರತ ಕಾರ್ಯರೂಪಕ್ಕೆ ಬಂದಿರುವುದರ ಪ್ರತೀಕ ಎಂದು ಸಂಸ್ಥೆಯ ಸಹ–ಸ್ಥಾಪಕರು ತಿಳಿಸಿದ್ದಾರೆ.

ಇದಕ್ಕೂ ಮುನ್ನ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಆಂಧ್ರಪ್ರದೇಶದ ಕರ್ನೂಲ್ ಸಮೀಪದ ಪರೀಕ್ಷಾ ಕೇಂದ್ರದಲ್ಲಿ ಮಾನವರಹಿತ ವೈಮಾನಿಕ ವಾಹನದಿಂದ ಉಡಾಯಿಸಬಹುದಾದ ನಿಖರ ಮಾರ್ಗದರ್ಶಿತ ಕ್ಷಿಪಣಿ (ಯುಎಲ್‌ಪಿಜಿಎಂ)ವಿ3ನ ಅಂತಿಮ ವಿತರಣಾ ಸಂರಚನೆಯ ಅಭಿವೃದ್ಧಿ ಪರೀಕ್ಷೆಗಳನ್ನು ಪೂರ್ಣಗೊಳಿಸಿತ್ತು. ಏರ್–ಟು–ಗ್ರೌಂಡ್ ಮತ್ತು ಏರ್–ಟು–ಏರ್ ಮಾದರಿಗಳಲ್ಲಿ ಈ ಪರೀಕ್ಷೆಗಳನ್ನು ನಡೆಸಲಾಗಿತ್ತು.

ಯುಎಲ್‌ಪಿಜಿಎಂನ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ನಿಯಂತ್ರಿಸಲು ಮತ್ತು ನಿರ್ವಹಿಸಲು ಸಮಗ್ರ ಗ್ರೌಂಡ್ ಕಂಟ್ರೋಲ್ ಸಿಸ್ಟಂ ಬಳಸಿಕೊಂಡು ಪರೀಕ್ಷೆಗಳನ್ನು ನಡೆಸಲಾಯಿತು. ಸಿದ್ಧತೆ ಹಾಗೂ ಉಡಾವಣಾ ಕಾರ್ಯಾಚರಣೆಗಳನ್ನು ಸ್ವಯಂಚಾಲಿತಗೊಳಿಸಲು ಸಿಸ್ಟಂನಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲಾಗಿದೆ.

### ರಕ್ಷಣಾ ಸಚಿವರ ಅಭಿನಂದನೆ



ಕ್ಷಿಪಣಿಗಳ ಅಭಿವೃದ್ಧಿ ಮತ್ತು ತಯಾರಿಕಾ ಡಿಆರ್‌ಡಿಒ ಎರಡು ಸಂಸ್ಥೆಗಳಾದ ಹೈದರಾಬಾದ್‌ನ ಭಾರತ್ ಡೈನಾಮಿಕ್ಸ್ ಲಿಮಿಟೆಡ್ ಮತ್ತು ಹೈದರಾಬಾದ್‌ನ ಆಡ್‌ಡಿಫೆನ್ಸ್ ಸಿಸ್ಟಮ್ಸ್ ಆಂಡ್ ಟೆಕ್ನಾಲಜೀಸ್ ಜತೆ ಪಾಲುದಾರಿಕೆ ಹೊಂದಿದೆ. ಪ್ರಸ್ತುತ ಪರೀಕ್ಷೆಗಳಿಗಾಗಿ ಬೆಂಗಳೂರಿನ ನ್ಯೂಸ್ಪೇಸ್ ರೀಸರ್ಚ್ ಆಂಡ್ ಟೆಕ್ನಾಲಜೀಸ್ ಅಭಿವೃದ್ಧಿಪಡಿಸಿರುವ ಯುಎವಿಗಳಲ್ಲಿ ಈ ವ್ಯವಸ್ಥೆಯನ್ನು ಸಂಯೋಜಿಸಲಾಗಿದೆ.

ಟ್ಯಾಂಕ್ ವಿರೋಧಿ ಕಾರ್ಯಾಚರಣೆಗಾಗಿ ಏರ್–ಟು–ಗ್ರೌಂಡ್ ಮಾದರಿಯಲ್ಲಿ ಹಾಗೂ ಡ್ರೋನ್, ಹೆಲಿಕಾಪ್ಟರ್ ಮತ್ತು ಇತರ ವೈಮಾನಿಕ ಗುರಿಗಳ ವಿರುದ್ಧ ಏರ್–ಟು–ಏರ್ ಮಾದರಿಯಲ್ಲಿ ULPGM-V3ಯ ಯಶಸ್ವಿ ಅಭಿವೃದ್ಧಿ ಪರೀಕ್ಷೆಗಳನ್ನು ನಡೆಸಿರುವುದಕ್ಕಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ, ಸಾರ್ವಜನಿಕ ವಲಯದ ಸಂಸ್ಥೆಗಳು, ರಕ್ಷಣಾ ಮತ್ತು ಉತ್ಪಾದನಾ ಪಾಲುದಾರರು ಹಾಗೂ ಉದ್ಯಮ ಕ್ಷೇತ್ರವನ್ನು ಅಭಿನಂದಿಸಿದ್ದಾರೆ. ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರತೆ ಸಾಧಿಸುವ ನಿಟ್ಟಿನಲ್ಲಿ ಇದು ಮಹತ್ವದ ಕಾರ್ಯತಂತ್ರದ ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ.

# ಸ್ವಾತಂತ್ರ್ಯದ ೮೦ ವರ್ಷಗಳ ನಂತರವೂ ಅಸ್ಪೃಶ್ಯತೆಯ ನೆರಳು: ಆತ್ಮಾವಲೋಕನ ಅಗತ್ಯ

### ಉತ್ತರಾಖಂಡದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದ ಕಾರ್ಯಕ್ರಮದ ವೇದಿಕೆ ಶುದ್ಧೀಕರಣ ಕಾರ್ಯಕ್ಕೆ ಎಂಎಲ್‌ಸಿ ಮಂಜುನಾಥ ಭಂಡಾರಿ ಖಂಡನೆ

**ಬೆಂಗಳೂರು, ಆ.16:** ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಬಳಿಕ ಆ ವೇದಿಕೆಯನ್ನು ಶುದ್ಧೀಕರಣ ಮಾಡಲಾಯಿತು ಎಂಬುದನ್ನು ಕೇಳಿ ಕಳವಳಕ್ಕೊಳಗಾದೆ. ದೇಶ ಸ್ವಾತಂತ್ರ್ಯಗೊಂಡು 80 ವರ್ಷ ಕಳೆದರೂ ಅಸ್ಪೃಶ್ಯತೆಯ ಪಿಡುಗು ಮುಂದುವರಿದಿರುವುದು ಆತಂಕಕಾರಿ. ಈ ನಿಟ್ಟಿನಲ್ಲಿ ಆತ್ಮಾವಲೋಕನದ ಅಗತ್ಯವಿದೆ ಎಂದು ಶಾಸಕರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರು ಮಂಜುನಾಥ ಭಂಡಾರಿ ಹೇಳಿದ್ದಾರೆ.

ಒಬ್ಬ ದಲಿತ ಎಂಬ ಕಾರಣಕ್ಕಾಗಿ ಒಂದು ವೇದಿಕೆ "ಅಪವಿತ್ರ"ವಾಯಿತೆಂಬ ಭಾವನೆ ಮೂಡಿಸಿದ ಈ ಘಟನೆ, ಕೇವಲ ಒಬ್ಬ ಹಿರಿಯ ನಾಯಕರಿಗೆ ಮಾಡಿದ ಅವಮಾನವಲ್ಲ; ಅದು ಭಾರತದ ಸಂವಿಧಾನದ ಆತ್ಮಕ್ಕೇ ಮಾಡಿದ ಆಘಾತ. ಸಂವಿಧಾನ ಅಸ್ಪೃಶ್ಯತೆಯನ್ನು ಕೊಂದಿದ್ದರೆ, ಜಾತಿ ಮನಸ್ಥಿತಿ ಅದನ್ನು ಇನ್ನೂ ಬದುಕಿಸುತ್ತಿದೆ. ಈ ಘಟನೆಯನ್ನು ಖಂಡಿಸುತ್ತೇನೆ. ಎಂದಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರು ಬರೀ ಒಂದು ಪಕ್ಷದ ಅಧ್ಯಕ್ಷರಲ್ಲ; ಅವರು ಐದು ದಶಕಗಳ ಸಾರ್ವಜನಿಕ ಸೇವೆಯ ಮೂಲಕ ದೇಶದ ಗೌರವಕ್ಕೆ ಪಾತ್ರರಾದ ಹಿರಿಯ ರಾಜಕಾರಣಿ. ಬಡತನದಿಂದ ಎದ್ದುಬಂದು, ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡಿ, ಸಂಸತ್ತಿನ ಅತ್ಯುನ್ನತ ಸ್ಥಾನಗಳಿಗೇರಿದ ಅವರ ಬದುಕೇ ಮಾದರಿ. ಅಂತಹ ವ್ಯಕ್ತಿಯ ಸ್ಪರ್ಶವನ್ನೂ ಸಹಿಸಲಾಗದ ಮನಸ್ಥಿತಿ ಇನ್ನೂ ಸಮಾಜದಲ್ಲಿ ಜೀವಂತವಾಗಿದೆ ಎಂದರೆ, ಸ್ವಾತಂತ್ರ್ಯದ ಸುಮಾರು 80 ವರ್ಷಗಳ ನಂತರವೂ, ನಿಜವಾದ ಅರ್ಥದಲ್ಲಿ ಸ್ವತಂತ್ರರಾಗಿಲ್ಲವೇ ಎಂಬ ಪ್ರಶ್ನೆ ಕಾಡುತ್ತಿದೆ ಎಂದಿದ್ದಾರೆ.



**ಸಂವಿಧಾನ ಕೊಟ್ಟ ಭರವಸೆ, ಸಮಾಜ ಈಡೇರಿಸದ ಹೊಣೆ:** ಸ್ವಾತಂತ್ರ್ಯ ಬಂದಾಗ ನಾವು ರಾಜಕೀಯ ಪ್ರಜಾಪ್ರಭುತ್ವವನ್ನಷ್ಟೇ ಪಡೆದು ಕೊಂಡಿರಲಿಲ್ಲ; ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ರಚಿತವಾದ ಸಂವಿಧಾನವು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ಭರವಸೆಯನ್ನೂ ನೀಡಿತ್ತು. ಸಂವಿಧಾನ ಸಭೆಯಲ್ಲಿ ಬಾಬಾಸಾಹೇಬರು ಎಚ್ಚರಿಸಿದ್ದ ಮಾತು ಇಂದಿಗೂ ಪ್ರಸ್ತುತ: ರಾಜಕೀಯ ಸಮಾನತೆಯನ್ನು ನಾವು ಗಳಿಸಿದ್ದೇವೆ, ಆದರೆ ಸಾಮಾಜಿಕ–ಆರ್ಥಿಕ ಜೀವನದಲ್ಲಿ ಅಸಮಾನತೆ ಮುಂದುವರಿದರೆ, ಈ ವಿರೋಧಾಭಾಸವನ್ನು ನಾವು ಎಷ್ಟು ದಿನ ಹೊತ್ತುಕೊಂಡು ಹೋಗುತ್ತೇವೆ ಎಂದು ಅಂಬೇಡ್ಕರ್ ಪ್ರಶ್ನಿಸಿದ್ದರು ಎಂದು ಮಂಜುನಾಥ ಭಂಡಾರಿ ವಿವರಿಸಿದರು.

ಜಾತಿಯೆಂಬುದು ಕೇವಲ ಶ್ರಮ ವಿಭಜನೆಯಲ್ಲ, ಅದು ಶ್ರಮಿಕರ ವಿಭಜನೆ ಎಂದೂ, ರಾಜಕೀಯ ಸುಧಾರಣೆಗಿಂತ ಮೊದಲು ಜಾತಿಯೆಂಬ ದೈತ್ಯನನ್ನು ಸಂಹರಿಸಬೇಕೆಂದೂ ಅಂಬೇಡ್ಕರ್ ಪದೇಪದೇ ಒತ್ತಿಹೇಳಿದ್ದರು. ಹಲ್ದ್ವಾನಿಯ ಘಟನೆ, ಆ ದೈತ್ಯ ಇನ್ನೂ ಸತ್ತಿಲ್ಲ ಎಂಬುದನ್ನು ನೋವಿನಿಂದ ನೆನಪಿಸುತ್ತದೆ.

ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಹಿಂದೂ ಧರ್ಮದ ಮೇಲಿನ ಕಳಂಕವೆಂದೇ ಪರಿಗಣಿಸಿದ್ದರು. ಅದನ್ನು ದೇವರು ಮತ್ತು ಮಾನವೀಯತೆಯ ವಿರುದ್ಧದ ಪಾಪ ಎಂದು ಬಣ್ಣಿಸಿ, ಹರಿಜನೋದ್ಧಾರವನ್ನು ತಮ್ಮ ಜೀವಮಾನದ ಸಂಕಲ್ಪ ವನ್ನಾಗಿಸಿಕೊಂಡಿದ್ದರು. ಸ್ವರಾಜ್ಯಕ್ಕಿಂತ ಮೊದಲು ಅಸ್ಪೃಶ್ಯತೆಯ ನಿವಾರಣೆ ಯಾಗಬೇಕೆಂದು ಅವರು ಪದೇಪದೇ ಒತ್ತಾಯಿಸಿದ್ದರು; ಏಕೆಂದರೆ ಒಳಗೊಳಗೇ ಅಸಮಾನತೆಯನ್ನು ಪೋಷಿಸುವ ಸಮಾಜಕ್ಕೆ ನಿಜವಾದ ಸ್ವಾತಂತ್ರ್ಯದ ಅರ್ಥವೇ ತಿಳಿಯದು ಎಂಬುದು ಅವರ ನಿಲುವಾಗಿತ್ತು. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವೆ ಮಾರ್ಗಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ, ಅಸ್ಪೃಶ್ಯತೆಯೆಂಬುದು ನಾಗರಿಕ ಸಮಾಜಕ್ಕೊಂದು ಕಳಂಕ ಎಂಬ ವಿಷಯದಲ್ಲಿ ಇಬ್ಬರೂ ಒಂದೇ ದನಿಯಲ್ಲಿ ಮಾತನಾಡಿದ್ದರು ಎಂಬುದನ್ನು ನಾವು ಮರೆಯಬಾರದು ಎಂದಿದ್ದಾರೆ.

ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆಯನ್ನು ಸ್ಪಷ್ಟವಾಗಿ ನಿಷೇಧಿಸಿ, ಅದನ್ನು ಆಚರಿಸುವುದು ಶಿಕ್ಷಾರ್ಹ ಅಪರಾಧವೆಂದು ಘೋಷಿಸಿ ದಶಕಗಳೇ ಕಳೆದಿವೆ. ಆದರೂ, ಸಾರ್ವಜನಿಕ ವೇದಿಕೆಯೊಂದನ್ನು ಒಬ್ಬ ದಲಿತ ಮುಟ್ಟಿದನೆಂಬ ಕಾರಣಕ್ಕೆ "ಶುದ್ಧೀಕರಣ" ಮಾಡಬೇಕೆಂಬ ಮನಸ್ಥಿತಿ ಜೀವಂತವಿದೆಯೆಂದರೆ, ಕಾನೂನು ಬರೆದ ಮಾತ್ರಕ್ಕೆ ಮನಸ್ಸುಗಳು ಬದಲಾಗಿಲ್ಲ ಎಂಬುದನ್ನು ಇದು ಸಾಬೀತುಪಡಿಸುತ್ತದೆ. ಒಬ್ಬ ಹಿರಿಯ ರಾಷ್ಟ್ರೀಯ ನಾಯಕನಿಗೇ ಈ ಪರಿಸ್ಥಿತಿಯಿದ್ದರೆ, ಹಳ್ಳಿಹಳ್ಳಿಗಳಲ್ಲಿ, ಬಾವಿ–ಕೆರೆಗಳ ಬಳಿ, ದೇವಸ್ಥಾನಗಳ ಬಾಗಿಲಲ್ಲಿ ಇಂದಿಗೂ ಅವಮಾನ ಅನುಭವಿಸುತ್ತಿರುವ ಸಾಮಾನ್ಯ ದಲಿತ ಬಾಂಧವರ ಸ್ಥಿತಿ ಏನಿರಬಹುದೆಂದು ನಾವು ಊಹಿಸಿಕೊಳ್ಳಲೂ ಬೆಚ್ಚಿಬೀಳಬೇಕು.

ಬಸವಣ್ಣನವರ ಕಲ್ಯಾಣ ರಾಜ್ಯ, ಗಾಂಧೀಜಿಯವರ ರಾಮರಾಜ್ಯ, ಅಂಬೇಡ್ಕರ್ ಅವರ ಸಂವಿಧಾನ – ಈ ಮೂರೂ ನಮಗೆ ಒಂದೇ ಸಂದೇಶ ಕೊಡುತ್ತವೆ: ಮನುಷ್ಯ ಮನುಷ್ಯನ ನಡುವಿನ ಗೋಡೆಗಳನ್ನು ಒಡೆಯುವುದೇ ನಿಜವಾದ ಸ್ವಾತಂತ್ರ್ಯ. ಆ ಗುರಿ ಇನ್ನೂ ಪೂರ್ಣಗೊಂಡಿಲ್ಲವೆಂಬುದನ್ನು ಒಪ್ಪಿಕೊಂಡು, ಹೊಸ ಸಂಕಲ್ಪದೊಂದಿಗೆ ಮುನ್ನಡೆಯುವುದೇ ಇಂದಿನ ತುರ್ತು ಅಗತ್ಯ. ಸಮಾನತೆಯ ಸಮಾಜ ನಿರ್ಮಾಣದ ಈ ಹೋರಾಟದಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿ ನಿಲ್ಲುತ್ತದೆ ಎಂಬ ಭರವಸೆಯನ್ನು ನಾನು ಎಲ್ಲರಿಗೂ ನೀಡುತ್ತೇನೆ ಎಂದಿದ್ದಾರೆ.

**ಮುಂದಿನ ಹಾದಿ:** ಸ್ವಾತಂತ್ರ್ಯದ 80 ವರ್ಷಗಳ ಸಂಭ್ರಮದ ಈ ಹೊತ್ತಿನಲ್ಲಿ, ನಾವು ಆರ್ಥಿಕ ಪ್ರಗತಿ, ತಾಂತ್ರಿಕ ಸಾಧನೆಗಳ ಬಗ್ಗೆ ಹೆಮ್ಮೆಪಡುತ್ತಿರುವಾಗಲೇ, ಸಾಮಾಜಿಕ ಪ್ರಗತಿಯ ವಿಷಯದಲ್ಲಿ ನಾವಿನ್ನೂ ಎಷ್ಟು ಹಿಂದುಳಿದಿದ್ದೇವೆ ಎಂಬುದನ್ನು ಈ ಘಟನೆ ನೆನಪಿಸುತ್ತದೆ. ಅಂಬೇಡ್ಕರ್ ಅವರು ಹೇಳಿದಂತೆ, "ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಡಿ" ಎಂಬ ಮಂತ್ರವನ್ನು ನಾವಿಂದು ಹೊಸ ಅರ್ಥದಲ್ಲಿ ಸ್ವೀಕರಿಸಬೇಕಿದೆ – ಶಿಕ್ಷಣದ ಮೂಲಕ ಮನಸ್ಥಿತಿ ಬದಲಾಯಿಸಿ, ಸಂಘಟಿತರಾಗಿ ಜಾಗೃತಿ ಮೂಡಿಸಿ, ಸಾಮಾಜಿಕ ಅಸಮಾನತೆಯ ವಿರುದ್ಧ ಎಡಬಿಡದೆ ಹೋರಾಡುವ ಅಗತ್ಯವಿದೆ.

### ರಾಜಕೀಯದ ವಿಷಯವಲ್ಲ, ಆತ್ಮಸಾಕ್ಷಿಯ ವಿಷಯ




ಈ ಘಟನೆಯನ್ನು ಯಾವುದೇ ಪಕ್ಷ ರಾಜಕೀಯದ ಚೌಕಟ್ಟಿನಲ್ಲಿ ನೋಡುವುದು ತಪ್ಪಾಗುತ್ತದೆ. ಇದು ಎಲ್ಲ ಪಕ್ಷ, ಜಾತಿ, ಧರ್ಮಗಳನ್ನು ಮೀರಿ ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದರ್ಭ. ಸಂವಿಧಾನದ ಅಸ್ಪೃಶ್ಯತೆಯನ್ನು ಸ್ಪಷ್ಟವಾಗಿ ನಿಷೇಧಿಸಿ, ಅದನ್ನು ಆಚರಿಸುವುದು ಶಿಕ್ಷಾರ್ಹ ಅಪರಾಧವೆಂದು ಘೋಷಿಸಿ ದಶಕಗಳೇ ಕಳೆದಿವೆ. ಆದರೂ, ಇಂತಹ ಘಟನೆ ನಡೆದಿರುವುದು ಕಾನೂನು ಬರೆದ ಮಾತ್ರಕ್ಕೆ ಮನಸ್ಸುಗಳು ಬದಲಾಗಿಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ. ಉತ್ತರಾಖಂಡದಲ್ಲಿ ನಡೆದಂತಹ ಘಟನೆಗಳನ್ನು ಕಂಡು ಮೌನವಾಗಿರುವುದು ಅಪರಾಧಕ್ಕೆ ಪರೋಕ್ಷ ಸಮ್ಮತಿ ನೀಡಿದಂತೆ. ಆದ್ದರಿಂದ, ಪಕ್ಷಭೇದ ಮರೆತು, ಪ್ರಜಾಪ್ರಭುತ್ವ ಮತ್ತು ಸಂವಿಧಾನದಲ್ಲಿ ನಂಬಿಕೆಯಿಟ್ಟಿರುವ ಪ್ರತಿಯೊಬ್ಬರೂ ಈ ಘಟನೆಯ ವಿರುದ್ಧ ದನಿಯೆತ್ತಬೇಕು ಎಂದು ಕರೆ ಕೆಪಿಸಿಸಿ ಕಾರ್ಯಾಧ್ಯಕ್ಷಮಂಜುನಾಥ ಭಂಡಾರಿ ಕರೆ ನೀಡಿದ್ದಾರೆ.

### ಕರ್ನಾಟಕದ ನೆಲದ ಧ್ವನಿ: ಬಸವಣ್ಣನವರ ವಚನಗಳು

ನಮ್ಮ ಕರ್ನಾಟಕದ ನೆಲದಲ್ಲಿಯೇ, ಎಂಟುನೂರು ವರ್ಷಗಳ ಹಿಂದೆಯೇ, ಬಸವಣ್ಣನವರು ಜಾತಿರಹಿತ, ಸಮಾನತೆಯ ಸಮಾಜದ ಕನಸು ಕಂಡಿದ್ದರು. "ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ" ಎಂಬ ಅವರ ವಚನ, ಜಾತಿ–ಮತ–ಪಂಥಗಳ ಗೋಡೆಗಳನ್ನು ಒಡೆದು, ಪ್ರತಿಯೊಬ್ಬ ಮನುಷ್ಯನನ್ನೂ "ನಮ್ಮವ"ನೆಂದು ಸ್ವೀಕರಿಸಬೇಕೆಂಬ ಕರೆಯನ್ನು ಕೊಡುತ್ತದೆ. ಅನುಭವ ಮಂಟಪದಲ್ಲಿ ಎಲ್ಲ ಜಾತಿ, ವರ್ಗಗಳ ಶರಣರನ್ನು ಒಟ್ಟುಗೂಡಿಸಿ, ಕಾಯಕವೇ ಕೈಲಾಸವೆಂದು ಸಾರಿದ ಬಸವಣ್ಣನವರ ಕ್ರಾಂತಿ, ಜಗತ್ತಿಗೇ ಸಮಾನತೆಯ ಪಾಠ ಕಲಿಸಿದ ಚಳುವಳಿ. ಅಂತಹ ಶ್ರೀಮಂತ ಪರಂಪರೆಯ ನಾಡಿನ ಪ್ರತಿನಿಧಿಯಾಗಿ, ಬಸವಣ್ಣನವರ ಆದರ್ಶಗಳನ್ನು ನಂಬಿ ಬೆಳೆದ ನನಗೆ, ಇಂತಹ ಘಟನೆಗಳು ಆಳವಾದ ನೋವು ಮತ್ತು ಆಕ್ರೋಶ ಮೂಡಿಸುತ್ತವೆ ಎಂದಿದ್ದಾರೆ.

## ನಿತ್ಯ ಪಂಚಾಂಗ 17.08.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ, ಆಷಾಢ-ಶ್ರಾವಣ ಮಾಸ

ಶ್ರಾವಣ ಶುದ್ಧ, ಪಂಚಮಿ,
ಹಸ್ತ ನಕ್ಷತ್ರ,
ಸಿಂಹ ಸಂಕ್ರಮಣ, ಚಿತ್ರನೇಮೀ ವ್ರತ,
ಬಸವಲಿಂಗೈಕ್ಯ ಸಿನ,
ಒಡಿಯೂರು ಆಶ್ಲೇಷ ಬಲಿ,
ನಾಗ-ಗರುಡ ಪಂಚಮಿ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಭ್ರಷ್ಟಾಚಾರ ಮುಕ್ತ, ಸ್ವಚ್ಛ, ಸಮೃದ್ಧ ಭಾರತ ನಿರ್ಮಾಣಕ್ಕೆ ರಮೇಶ್ ಗೌಡ ಕರೆ

**ಕೆಂಪುಕೋಟೆ ಮೇಲೆ ದೇವೇಗೌಡರು ತಿರಂಗ ಹಾರಿಸಿ 30 ಸ್ಮರಣೆ**

**ದೇವೇಗೌಡರು, ನರೇಂದ್ರ ಮೋದಿ ಅವರ ಸಾಧನೆಗಳನ್ನು ಕೊಂಡಾಡಿದ ರಮೇಶ್ ಗೌಡ**

**ಜೆಡಿಎಸ್ ಕಚೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ**

**ಬೆಂಗಳೂರು, ಆ.16:** ಸ್ವಾತಂತ್ರ್ಯ ಬಂದು ಇಂದಿಗೆ ಎಂಟು ದಶಕಗಳು ಆಗಿರುವ ಈ ಸುಸಂದರ್ಭದಲ್ಲಿ ನಾವೆಲ್ಲರೂ ಭ್ರಷ್ಟಾಚಾರ ಮುಕ್ತ, ಸ್ವಚ್ಛ ಮತ್ತು ಸಮೃದ್ಧ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಜಾತಿ, ಮತ, ಧರ್ಮದ ಭೇದ ಮರೆತು ಒಂದಾಗಬೇಕಿದೆ. ದೇಶದ ಪ್ರಗತಿಯಲ್ಲಿ ಪ್ರತಿಯೊಬ್ಬ ನಾಗರಿಕನ ಪಾತ್ರವೂ ಅತ್ಯಂತ ಮುಖ್ಯವಾಗಿದೆ ಎಂದು ಜೆಡಿಎಸ್ ಗ್ರೇಟರ್ ಬೆಂಗಳೂರು ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಅವರು ಹೇಳಿದರು.



ಜೆಡಿಎಸ್ ಕಚೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಮಾಡಿ ಭಾಷಣ ಮಾಡಿದ ಅವರು; ಕಳೆದ ಎಂಟು ದಶಕಗಳಲ್ಲಿ ನಮ್ಮ ಭಾರತ ದೇಶವು ಜಾಗತಿಕ ಮಟ್ಟದಲ್ಲಿ ಸಾಧಿಸಿರುವ ಪ್ರಗತಿ ಅಪಾರವಾದದ್ದು. ಕೃಷಿ, ತಂತ್ರಜ್ಞಾನ, ಬಾಹ್ಯಾಕಾಶ ಮತ್ತು ಆರ್ಥಿಕತೆಯಲ್ಲಿ ನಾವು ವಿಶ್ವವೇ ಬೆರಗಾಗುವಂತೆ ಬೆಳೆದಿದ್ದೇವೆ. ಇಂದು ನಾವು ಕೇವಲ ಸ್ವಾವಲಂಬಿಗಳಲ್ಲ, ವಿಶ್ವಕ್ಕೆ ದಾರಿ ತೋರಿಸುವ ಶಕ್ತಿಯಾಗಿ ಹೊರಹೊಮ್ಮುತ್ತಿದ್ದೇವೆ ಎಂದರು.

**ದೇವೇಗೌಡರ ಸ್ಮರಣೆ:**

ನಾವು ಈ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದ ಐತಿಹಾಸಿಕ ಘಟ್ಟ ಒಂದನ್ನು ಸ್ಮರಿಸಬೇಕಿದೆ. ಭಾರತದ 11ನೇ ಪ್ರಧಾನ ಮಂತ್ರಿಯಾಗಿದ್ದ ಹೆಚ್.ಡಿ.ದೇವೇಗೌಡರು 15 ಆಗಸ್ಟ್ 1996ರಂದು ದೆಹಲಿಯ ಐತಿಹಾಸಿಕ ಕೆಂಪುಕೋಟೆಯ ಮೇಲಿಂದ ಧ್ವಜಾರೋಹಣ ನೆರವೇರಿಸಿ ದೇಶವನ್ನುದ್ದೇಶಿಸಿ ಸ್ವಾತಂತ್ರ್ಯ ದಿನದ ಭಾಷಣವನ್ನು ಮಾಡಿದರು. ನಮ್ಮೆಲ್ಲರ ಅಚ್ಚುಮೆಚ್ಚಿನ ಮಣ್ಣಿನಮಗ ಭಾರತದ ಸ್ವಾತಂತ್ರ್ಯದ 50ನೇ ವರ್ಷದ ಆಚರಣೆಯ (ಸುವರ್ಣ ಮಹೋತ್ಸವ) ಆರಂಭದ ಸಂದರ್ಭದಲ್ಲೇ ಕೆಂಪುಕೋಟೆ ಮೇಲೆ ಧ್ವಜಾರೋಹಣ ಮಾಡಿದ್ದು ನಾವೆಲ್ಲರೂ ಹೆಮ್ಮೆಪಡುವಂತಹ ಸಂಗತಿಯಾಗಿದೆ ಎಂದು ರಮೇಶ್ ಗೌಡರು ಹೇಳಿದರು.

ಅಂದಿನ ತಮ್ಮ ಭಾಷಣದಲ್ಲಿ ದೇವೇಗೌಡರು ತಾವು ಒಬ್ಬ ಸಾಮಾನ್ಯ ರೈತನ ಕುಟುಂಬದಿಂದ ಬಂದಿರುವುದನ್ನು ಅತ್ಯಂತ ಹೆಮ್ಮೆಯಿಂದ ಸ್ಮರಿಸಿಕೊಂಡರು. ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಶಕ್ತಿಯಿಂದಾಗಿ ಮಾತ್ರ ಒಬ್ಬ ಹಳ್ಳಿಯ ರೈತನ ಮಗ ದೇಶದ ಅತ್ಯುನ್ನತ ಪ್ರಧಾನಮಂತ್ರಿ ಹುದ್ದೆಯನ್ನು ಅಲಂಕರಿಸಲು ಸಾಧ್ಯವಾಯಿತು ಎಂದು ಅವರು ಪ್ರಜಾಪ್ರಭುತ್ವದ ಮಹತ್ವವನ್ನು ಈ ರಾಷ್ಟ್ರಕ್ಕೆ ಮನದಟ್ಟು ಮಾಡಿಕೊಟ್ಟರು. ಇಂದಿಗೆ ಸರಿಯಾಗಿ 30 ವರ್ಷಗಳ ಹಿಂದೆ ಮಾನ್ಯ ದೇವೇಗೌಡರು ಕೆಂಪುಕೋಟೆಯ ಮೇಲೆ ನಮ್ಮ ಹೆಮ್ಮೆಯ ತ್ರಿವರ್ಣ ಧ್ವಜವನ್ನು ಹಾರಿಸಿದ ಕ್ಷಣವನ್ನು ನಾವೆಲ್ಲರೂ ಹೆಮ್ಮೆಯಿಂದ ಸ್ಮರಿಸೋಣ ಎಂದರು ಅವರು.

80ನೇ ಸ್ವಾತಂತ್ರ್ಯ ದಿನಾಚರಣೆ ಸುಸಂದರ್ಭದಲ್ಲಿ ಕೆಂಪುಕೋಟೆಯ ಮೇಲೆ ರಾಷ್ಟ್ರ ಧ್ವಜಾರೋಹಣವನ್ನು ನರೇಂದ್ರ ಮೋದಿಯವರು ನೆರವೇರಿಸುತ್ತಿದ್ದಾರೆ. ಆ ವೇದಿಕೆ ಮೇಲೆ ನಮ್ಮೆಲ್ಲರ ನಾಯಕರು, ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸರ್ಕಾರದ ಬೃಹತ್ ಮತ್ತು ಉಕ್ಕು ಖಾತೆ ಸಚಿವರಾದ ಶ್ರೀ ಎಚ್ ಡಿ ಕುಮಾರಸ್ವಾಮಿ ಅವರು ಕೂಡ ಸಾಕ್ಷಿಯಾಗಿರುವುದು ಇತಿಹಾಸದಲ್ಲಿ ದಾಖಲಾಗುತ್ತಿರುವ ಮಹತ್ವದ ವಿಷಯವಾಗಿದೆ ಎಂದು ಅವರು ನುಡಿದರು.

ಈ ಸಂದರ್ಭದಲ್ಲಿ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ ಅವರು ಮಾತನಾಡಿದರು.


ಮಾಜಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್, ಶಾಸಕ ಟಿ.ಎ.ಶರವಣ, ಮಾಜಿ ಶಾಸಕರಾದ ಕೆ.ಎ.ತಿಪ್ಪೇಸ್ವಾಮಿ, ಎಂ.ಎಸ್. ನಾರಾಯಣರಾವ್, ಗ್ರೇಟರ್ ಬೆಂಗಳೂರು ಮಹಿಳಾ ವಿಭಾಗದ ಅಧ್ಯಕ್ಷೆ ಶೈಲಾ ಸಂತೋಜಿರಾವ್, ಜಿಬಿಎ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಆರ್.ಪ್ರಕಾಶ್, ಬೆಂಗಳೂರು ಪಶ್ಚಿಮ ಜಿಲ್ಲಾ ಅಧ್ಯಕ್ಷ ಟಿ.ತಿಮ್ಮೇಗೌಡ, ಬೆಂಗಳೂರು ಪೂರ್ವ ಜಿಲ್ಲಾ ಅಧ್ಯಕ್ಷ ನಟರಾಜ್ ಗಂಗಾಧರ್, ಗ್ರೇಟರ್ ಬೆಂಗಳೂರು ಕಾರ್ಯಧ್ಯಕ್ಷ ಟಿ.ಆರ್. ತುಳಸಿರಾಮ್ ಮುಂತಾದವರು ಭಾಗಿಯಾಗಿದ್ದರು.

# ಮೊಳಕಾಲ್ಮೂರು ಕ್ಷೇತ್ರವನ್ನು ಆಂಧ್ರ ಪ್ರದೇಶಕ್ಕೆ ಸೇರಿಸಿ ಶಾಸಕ ಎನ್.ವೈ.ಗೋಪಾಲಕೃಷ್ಣ ಹಕ್ಕೊತ್ತಾಯ

**ಮೂಲೆಯಲ್ಲಿರುವ ಕ್ಷೇತ್ರವು ದೊಡ್ಡ ನಾಯಕರಿಗೆ ಕಾಣಿಸುತ್ತಿಲ್ಲ, ಶಾಸಕರು, ಕ್ಷೇತ್ರಕ್ಕೆ ಗೌರವ ಸಿಗುತ್ತಿಲ್ಲ ಎನ್ನುವುದೇ ಬೇಸರ**

ಬೆಂಗಳೂರು, ಆ.16: ರಾಜಕೀಯದಲ್ಲಿ ಅಧಿಕಾರ ಮತ್ತು ಸ್ಥಾನಮಾನದ ಬಗೆಗಿನ ಅಸಮಾಧಾನಗಳು ಆಗಾಗ ಹೊಸ ಸಂಚಲನ ಸೃಷ್ಟಿಸುತ್ತಲೇ ಇರುತ್ತವೆ. ಆದರೆ ಆಡಳಿತ ಪಕ್ಷದ ಹಿರಿಯ ಶಾಸಕರೊಬ್ಬರು ತಮ್ಮದೇ ಸರ್ಕಾರದ ವಿರುದ್ಧ ಅಸಹಾಯಕತೆ ತೋಡಿಕೊಂಡು, ತಮ್ಮ ಕ್ಷೇತ್ರವನ್ನೇ ನೆರೆಯ ರಾಜ್ಯಕ್ಕೆ ಸೇರಿಸಿ ಎಂದು ಬಹಿರಂಗವಾಗಿ ಹೇಳಿಕೆ ನೀಡಿರುವುದು ಈಗ ಚರ್ಚೆಗೆ ಗ್ರಾಸವಾಗಿದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಕ್ಷೇತ್ರದ ಹಿರಿಯ ಕಾಂಗ್ರೆಸ್ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ಮೊಳಕಾಲ್ಮೂರು ಕ್ಷೇತ್ರವನ್ನು ಪಕ್ಕದ ಆಂಧ್ರಪ್ರದೇಶಕ್ಕೆ ಸೇರಿಸಬೇಕು ಎಂದು ಸಾರ್ವಜನಿಕವಾಗಿ ಹೇಳಿದ್ದಾರೆ.



ಎನ್.ವೈ. ಗೋಪಾಲಕೃಷ್ಣ ಅವರು 7 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರೂ, ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಿರಲಿಲ್ಲ. ಹಿರಿತನಕ್ಕೆ ಮಣೆಹಾಕದ ಹಿನ್ನೆಲೆಯಲ್ಲಿ ಅವರು ಕಾಂಗ್ರೆಸ್ ಹೈಕಮಾಂಡ್ ಹಾಗೂ ಸರ್ಕಾರದ ವಿರುದ್ಧ ತೀವ್ರ ಅಸಮಾಧಾನಗೊಂಡಿದ್ದಾರೆ.

ಮೊಳಕಾಲ್ಮೂರಿನ ಅಂಬೇಡ್ಕರ್ ಭವನದ ಸ್ಥಳ ಪರಿಶೀಲನೆ ನಡೆಸುವಾಗ ಅವರ ಆಕ್ರೋಶ ಹೊರಬಂದಿದೆ. "ಮೊಳಕಾಲ್ಮೂರು ಕ್ಷೇತ್ರವು ರಾಜ್ಯದ ಯಾವುದೋ ಮೂಲೆಯಲ್ಲಿದೆ, ಹೀಗಾಗಿ ದೊಡ್ಡ ನಾಯಕರಿಗೆ ಇದು ಕಾಣಿಸುವುದೇ ಇಲ್ಲ. ಇಲ್ಲಿನ ಶಾಸಕರಿಗೆ ಮತ್ತು ಕ್ಷೇತ್ರಕ್ಕೆ ಗೌರವ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮೊಳಕಾಲ್ಮೂರು ಕ್ಷೇತ್ರದ ಹಣೆಬರಹ ಎಲ್ಲಿತ್ತೋ ಅಲ್ಲೇ ಇದೆ. ಅಭಿವೃದ್ಧಿ ಕಾಣದ ಈ ಕ್ಷೇತ್ರವನ್ನು ಪಕ್ಕದ ಆಂಧ್ರಪ್ರದೇಶಕ್ಕೆ ಅಥವಾ ಚಳ್ಳಕೆರೆಗೆ ಸೇರಿಸಿ ಬಿಡಲಿ ಎಂದು ಹೇಳಿಕೆ ನೀಡಿದ್ದಾರೆ. ಇದರ ಬೆನ್ನಲ್ಲೇ, ಶಕ್ತಿಯಿದ್ದರೆ ಗುದ್ದಬೇಕು, ಇಲ್ಲದಿದ್ದರೆ ಹೊಂದಿಕೊಳ್ಳಬೇಕು. ನಮಗೆ ಸದ್ಯ ಶಕ್ತಿ ಸಾಲದು, ಹೀಗಾಗಿ ಹೊಂದಿಕೊಂಡು ಹೋಗಿ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿ ಮಾಡೋಣ ಎಂದೂ ಮಾರ್ಮಿಕವಾಗಿ ನುಡಿದಿದ್ದಾರೆ.

# ದೆಹಲಿ ಕನ್ನಡ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ

ನವದೆಹಲಿ, ಆ.16: ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಬಿ.ಆರ್. ಉಮೇಶ್, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಜೀವನ ಮೌಲ್ಯಗಳಿಗೆ ಒತ್ತು ನೀಡಿದೇಶದ ಸಂಸ್ಕೃತಿ ಪರಂಪರೆಯನ್ನು ಬೆಳೆಸಬೇಕು. ದೇಶಕ್ಕಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಅರಿವು ನಮ್ಮಲ್ಲಿರಬೇಕು.

ಸ್ವಾತಂತ್ರ್ಯಎಂದರೆ ಕೇವಲ ಪರಕೀಯರ ಆಡಳಿತದಿಂದ ಮುಕ್ತಿ ಮಾತ್ರವಲ್ಲ, ಅದು ನಮ್ಮ ಜವಾಬ್ದಾರಿ ಶಿಸ್ತು ಪ್ರಾಮಾಣಿಕತೆ ಮತ್ತು ಸೇವೆಯ





ಸಂಕೇತವು ಹೌದು. ವಿದ್ಯಾರ್ಥಿಗಳಾದ ನೀವೆಲ್ಲರೂ ಉತ್ತಮ ಶಿಕ್ಷಣ ಪಡೆಯಬೇಕು, ಗುರುಹಿರಿಯರನ್ನು ಗೌರವಿಸಬೇಕು ಪರಿಸರವನ್ನುರಕ್ಷಿಸಬೇಕು ಈ ದೇಶದ ಕಾನೂನನ್ನು ಗೌರವಿಸ ಬೇಕು ಮತ್ತು ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ, ಗೌರವ ಖಜಾಂಚಿ ಕಾಶಿನಾಥ್ ಬಿರಾದರ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲಾ ಪ್ರಾಂಶುಪಾಲ ಪ್ರಶಾಂತ್ ಕುಮಾರ್, ಉಪಪ್ರಾಂಶುಪಾಲೆ ಪ್ರೇಮಲತಾ ಬಿ.,. ಶಾಲಾ ಶಿಕ್ಷಕ– ಶಿಕ್ಷಕೇತರ ವೃಂದ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ದೇಶಭಕ್ತಿಯನ್ನು ಬಿಂಬಿಸುವ ವಿಚಾರಧಾರೆಗಳು, ಸ್ವಾತಂತ್ರ್ಯ ಮಹತ್ವದ ಕಿರುಪ್ರಹಸನ, ಹಾಡುಗಳು ಮತ್ತು ನೃತ್ಯಗಳು ಪ್ರದರ್ಶನಗೊಂಡಿತು.

# ಮುಂಬೈನಲ್ಲಿ ಬಸವ ಪುತ್ತಳಿ ಸ್ಥಾಪನೆ: ಸಚಿವ ಈಶ್ವರ ಖಂಡ್ರೆ ಮನವಿಗೆ ಮಹಾರಾಷ್ಟ್ರ ಸ್ಪೀಕರ್ ಸ್ಪಂದನೆ

**ಮುಂಬೈ, ಆ.16:** ಜಗತ್ತಿಗೆ ಸಮ ಸಮಾಜದ ಕಲ್ಪನೆಯನ್ನು 12ನೇ ಶತಮಾನದಲ್ಲೇ ಕಟ್ಟಿಕೊಟ್ಟ ಸಮಾಜ ಸುಧಾರಕ ವಿಶ್ವಗುರು ಬಸವಣ್ಣನವರ ಪುತ್ಥಳಿಯನ್ನು ಮುಂಬೈನಲ್ಲಿ ಸ್ಥಾಪಿಸುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದ್ದಾರೆ.



ಮುಂಬೈನಲ್ಲಿಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಹಾರಾಷ್ಟ್ರ ಘಟಕದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಾಯಕವೇ ಕೈಲಾಸ ಎಂದು ಸಾರಿದ ಮತ್ತು ಶ್ರೇಣಿರಹಿತ, ವರ್ಗರಹಿತ, ಜಾತಿರಹಿತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದ ಬಸವಣ್ಣನವರ ಪುತ್ಥಳಿಯನ್ನು ಮುಂಬೈನಲ್ಲಿ ಸ್ಥಾಪಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಮನವಿ ಮಾಡಿದರು.

ಬಸವಣ್ಣನವರು ದಯವೇ ಧರ್ಮದ ಮೂಲವಯ್ಯ ಎಂದು ಹೇಳಿದರೆ, ಮಾನವಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ರೇಣುಕಾದಿ ಆಚಾರ್ಯರು ಪ್ರತಿಪಾದಿಸಿದ್ದಾರೆ. ಇಂತಹ ಉದಾತ್ತ ಪರಂಪರೆ ನಮ್ಮದು ಎಂದು ಹೇಳಿದರು.

1904ರಲ್ಲಿ ಸ್ಥಾಪನೆಯಾದ ಮಹಾಸಭಾ ದೇಶದ ವಿವಿಧೆಡೆ ನೆಲೆಸಿರುವ ಎಲ್ಲ ಲಿಂಗಾಯತರು ಮತ್ತು ವೀರಶೈವರನ್ನು ಒಗ್ಗೂಡಿಸುವ ಕಾರ್ಯ ಮಾಡುತ್ತಿದೆ. ವೀರಶೈವ ಲಿಂಗಾಯತ ಬೇರೆ ಬೇರೆ ಅಲ್ಲ. ವೀರಶೈವ ಲಿಂಗಾಯತರು ಎಂದೆಂದೂ ಒಂದೇ ನಮಗೆಲ್ಲರಿಗೂ ಭಗವಂತ ಪರಶಿವ ತಂದೆ ಎಂದರು.

ಕೆಲವು ಶಕ್ತಿಗಳು ವೀರಶೈವ ಬೇರೆ, ಲಿಂಗಾಯತ ಬೇರೆ ಎಂದು ಹೇಳುತ್ತಿದ್ದಾರೆ. ಆದರೆ ಯಾವುದೇ ಶಕ್ತಿ, ವ್ಯಕ್ತಿಯಿಂದಲೂ ನಮ್ಮ ಸಮಾಜ ಒಡೆಯಲು ಸಾಧ್ಯವಿಲ್ಲ ಎಂದು ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು.

ತಮ್ಮ ತಂದೆ ಲಿಂಗೈಕ್ಯ ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಅವರು ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಸಂಘಟನೆ ಮಾಡಿ, ಎಲ್ಲರನ್ನೂ ಒಗ್ಗೂಡಿಸಿದರು ಎಂದು ಸ್ಮರಿಸಿದರು.

**ಬಸವ ಪುತ್ಥಳಿ– ಸ್ಪೀಕರ್ ಸಕಾರಾತ್ಮಕ ಸ್ಪಂದನೆ:**

ಮಹಾರಾಷ್ಟ್ರ ವಿಧಾನಸಭಾಧ್ಯಕ್ಷ ರಾಹುಲ್ ನಾರ್ವೇಕರ್ ಮಾತನಾಡಿ, ಈಶ್ವರ ಖಂಡ್ರೆ ಅವರು ಬಸವ ಪುತ್ಥಳಿಯನ್ನು ಮುಂಬೈನಲ್ಲಿ ಸ್ಥಾಪಿಸುವಂತೆ ಮಾಡಿರುವ ಮನವಿಯ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶೀಲ್‌ಕುಮಾರ್ ಶಿಂಧೆ, ಕರ್ನಾಟಕ ಮಾಜಿ ಮುಖ್ಯಮಂತ್ರಿಗಳು, ಮಹಾರಾಷ್ಟ್ರ ಸರ್ಕಾರ, ಸಂಸತ್ ಸದಸ್ಯ ಜಗದೀಶ ಶೆಟ್ಟರ್, ಮಾಜಿ ಶಾಸಕ ಅಶೋಕ್ ಖೇಣಿ, ಬಸವ ಸಮಿತಿಯ ಅರವಿಂದ ಜತ್ತಿ, ಸಭಾದ ರಾಜ್ಯಾಧ್ಯಕ್ಷ ಶಂಕರ ಬಿದರಿ, ಪದ್ಮ ಪ್ರಶಸ್ತಿ ಪುರಸ್ಕೃತ ಪ್ರಭಾಕರ ಕೋರೆ, ಕಲ್ಬುರ್ಗಿ ಮಾಜಿ ಮೇಯರ್ ಶರಣು ಮೋದಿ, ಕಾಶಿ ಪೀಠದ ಜಗದ್ಗುರು ಡಾ. ಚಂದ್ರಶೇಖರ್ ಶಿವಾಚಾರ್ಯ ಮಹಾ ಸ್ವಾಮೀಜಿ ಮೊದಲಾದವರು ಪಾಲ್ಗೊಂಡಿದ್ದರು.

# ಇತಿಹಾಸ, ಪರಂಪರೆ - ಪ್ರಕೃತಿ ಸೌಂದರ್ಯದ ಅದ್ಭುತ ಸಂಗಮ: ಲಾಲ್‌ಬಾಗ್ ಫ್ಲವರ್ ಶೋ: ಸಂಸದ ಡಾ. ಮಂಜುನಾಥ್"

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಜನಪ್ರಿಯ ಸಂಸದರಾದ ಪದ್ಮಶ್ರೀ ಡಾ. ಸಿ. ಎನ್. ಮಂಜುನಾಥ್ ಅವರು ಕುಟುಂಬ ಸಮೇತರಾಗಿ ಇತಿಹಾಸ ಪ್ರಸಿದ್ಧ ಲಾಲ್‌ಬಾಗ್‌ಗೆ ಭೇಟಿ ನೀಡಿ, ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಯೋಜಿಸಿರುವ ಲಾಲ್‌ಬಾಗ್ ಫ್ಲವರ್ ಶೋ–2026ರಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಗಂಗರ ಕಾಲಘಟ್ಟ, ಅವರ ಶೌರ್ಯ, ಆಡಳಿತ ವೈಭವ,



ಕೃಷಿ?ಸಂಸ್ಕೃತಿ ಹಾಗೂ ನಾಡಿನ ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ಹೂವಿನ ಅಲಂಕಾರದ ಮೂಲಕ ಅತ್ಯಂತ ಮನೋಜ್ಞವಾಗಿ ಹಾಗೂ ಅರ್ಥಪೂರ್ಣವಾಗಿ ಅನಾವರಣ ಗೊಳಿಸಿರುವುದನ್ನು ಸಂಸದರು ಮೆಚ್ಚುಗೆ ವ್ಯಕ್ತಪಡಿಸಿದರು. ವಿಶೇಷವಾಗಿ ಗಂಗರ ಇತಿಹಾಸ, ಅವರ ಕುಟುಂಬ ಪರಂಪರೆ ಹಾಗೂ ಆ ಕಾಲದ ಜೀವನಶೈಲಿಯನ್ನು ಜನರಿಗೆ ಪರಿಚಯಿಸುವ ರೀತಿಯಲ್ಲಿ ರೂಪಿಸಿರುವ ಕಲಾತ್ಮಕ ಪ್ರದರ್ಶನವು ಇತಿಹಾಸವನ್ನು ಜೀವಂತಗೊಳಿಸುವಂತಹ ಶ್ಲಾಘನೀಯ ಪ್ರಯತ್ನ ಎಂದು ಪ್ರಶಂಸಿಸಿದರು.

ಇಂತಹ ವಿಶಿಷ್ಟ ಪರಿಕಲ್ಪನೆಯ ಮೂಲಕ ನಮ್ಮ ನಾಡಿನ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುತ್ತಿರುವ ಲಾಲ್‌ಬಾಗ್ ತೋಟಗಾರಿಕಾ ಇಲಾಖೆ ಹಾಗೂ ಸಿಬ್ಬಂದಿಯ ಕಾರ್ಯವನ್ನು ಡಾ. ಮಂಜುನಾಥ್ ಅವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ತೋಟಗಾರಿಕಾ ಇಲಾಖೆಯ ಹೆಚ್ಚುವರಿ ನಿರ್ದೇಶಕರಾದ ಶ್ರೀಯುತ ಜಗದೀಶ್ ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಾ. ಆನಂದ ಕುಮಾರ್ ಅವರ ಮನದಾಳದ ಮಾತು

**ಯುವಕರು ಮತ್ತು ವಿದ್ಯಾರ್ಥಿಗಳು ಕೇವಲ ವಿದ್ಯಾವಂತರಾಗುವುದಷ್ಟೇ ಅಲ್ಲ, ಪ್ರಜ್ಞಾವಂತರಾಗಬೇಕು**

ನವದೆಹಲಿ, ಆ.16: ಭಾರತದ ಸ್ವಾತಂತ್ರ್ಯ ದಿನಾಚರಣೆಯ ಈ ಪವಿತ್ರ ಸಂದರ್ಭದಲ್ಲಿ ದೇಶದ ಯುವಕರು, ವಿದ್ಯಾರ್ಥಿಗಳು ಹಾಗೂ ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕರೊಂದಿಗೆ ನನ್ನ ಮನದಾಳದ ಕೆಲವು ಮಾತುಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ಭಾರತವು ಇಂದು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ನಮ್ಮ ದೇಶದ ಭವಿಷ್ಯ ಕೇವಲ ಸರ್ಕಾರಗಳ ಕೈಯಲ್ಲಿಲ್ಲ; ನಮ್ಮ ಯುವಕರ ಕೈಯಲ್ಲಿದೆ. ವಿದ್ಯಾರ್ಥಿಗಳ ಚಿಂತನೆಯಲ್ಲಿದೆ. ಪ್ರತಿಯೊಬ್ಬ ನಾಗರಿಕನ ಜಾಗೃತ ಮನಸ್ಸಿನಲ್ಲಿದೆ.

ಆದ್ದರಿಂದ ನನ್ನ ಪ್ರೀತಿಯ ಯುವಕರೇ, ವಿದ್ಯಾರ್ಥಿಗಳೇ ಕೇವಲ ವಿದ್ಯಾವಂತರಾಗ ಬೇಡಿ; ಪ್ರಜ್ಞಾವಂತರಾಗಿ. ವಿದ್ಯೆ ನಮಗೆ ಉದ್ಯೋಗವನ್ನು ಕೊಡಬಹುದು ಆದರೆ ಪ್ರಜ್ಞೆ ನಮಗೆ ಬದುಕಿನ ದಿಕ್ಕನ್ನು ತೋರಿಸುತ್ತದೆ. ವಿದ್ಯೆ ನಮಗೆ ಜ್ಞಾನವನ್ನು ನೀಡುತ್ತದೆ. ಆದರೆ ಪ್ರಜ್ಞೆ ಆ ಜ್ಞಾನವನ್ನು ಸಮಾಜದ ಒಳಿತಿಗಾಗಿ ಬಳಸುವುದನ್ನು ಕಲಿಸುತ್ತದೆ. ಪದವಿ ಪಡೆಯುವುದು ಶಿಕ್ಷಣದ ಅಂತ್ಯವಲ್ಲ. ಸತ್ಯವನ್ನು ಅರ್ಥಮಾಡಿಕೊಳ್ಳುವುದು, ಪ್ರಶ್ನಿಸುವುದು, ವಿಚಾರಿಸುವುದು ಮತ್ತು ಸರಿಯಾದದ್ದರ ಪರವಾಗಿ ನಿಲ್ಲುವುದು ಅದೇ ನಿಜವಾದ ಶಿಕ್ಷಣ. ಯುವಕರು ದೇಶದ ಭವಿಷ್ಯ ಮಾತ್ರವಲ್ಲ ವರ್ತಮಾನದ ಶಕ್ತಿಯೂ ಹೌದು ಇಂದು ನಮ್ಮ ದೇಶದಲ್ಲಿ ಕೋಟ್ಯಂತರ ಯುವಜನರಿದ್ದಾರೆ. ಅವರಲ್ಲಿ ಅಪಾರ ಪ್ರತಿಭೆ, ಶಕ್ತಿ, ಕನಸು ಮತ್ತು ಸೃಜನಶೀಲತೆ ಇದೆ.

ಆದರೆ ಈ ಶಕ್ತಿಯನ್ನು ಕೇವಲ ವೈಯಕ್ತಿಕ ಯಶಸ್ಸಿಗಾಗಿ ಬಳಸದೆ, ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ಬಳಸುವ ಜವಾಬ್ದಾರಿ ನಮ್ಮ ಯುವಕರ ಮೇಲಿದೆ.

ಯುವಕರು ಪ್ರಶ್ನಿಸಬೇಕು. ಅನ್ಯಾಯ ಕಂಡಾಗ ಧ್ವನಿ ಎತ್ತಬೇಕು. ಅಸಮಾನತೆ ಕಂಡಾಗ ಅದರ ವಿರುದ್ಧ ನಿಲ್ಲಬೇಕು.

ಜಾತಿ, ಧರ್ಮ, ಭಾಷೆ, ಪ್ರದೇಶದ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸುವ ಪ್ರಯತ್ನಗಳನ್ನು ತಿರಸ್ಕರಿಸಬೇಕು.

ಯಾರನ್ನೂ ಅವರ ಜಾತಿ ಅಥವಾ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಕೀಳಾಗಿ ಕಾಣಬಾರದು. ಮನುಷ್ಯನನ್ನು ಮೊದಲು ಮನುಷ್ಯನಾಗಿ ನೋಡುವ ಮನಸ್ಸು ನಮ್ಮದಾಗಬೇಕು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆ ಯುವಕರಿಗೆ ದಾರಿದೀಪ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಶಿಕ್ಷಣವನ್ನು ಸಾಮಾಜಿಕ ಪರಿವರ್ತನೆಯ ಅತ್ಯಂತ ಶಕ್ತಿಶಾಲಿ ಸಾಧನವೆಂದು ಕಂಡಿದ್ದರು. ಅವರು ನೀಡಿದ ?ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಡಿರಿ? ಎಂಬ ಸಂದೇಶ ಇಂದಿನ ಯುವ ಪೀಳಿಗೆಗೂ ಅತ್ಯಂತ ಪ್ರಸ್ತುತವಾಗಿದೆ. ಆದರೆ ಹೋರಾಟ ಎಂದರೆ ಹಿಂಸೆ ಅಲ್ಲ. ಹೋರಾಟ ಎಂದರೆ ಅಜ್ಞಾನದ ವಿರುದ್ಧ ಜ್ಞಾನದ ಹೋರಾಟ. ಅನ್ಯಾಯದ ವಿರುದ್ಧ ನ್ಯಾಯದ ಹೋರಾಟ.

ಅಸಮಾನತೆಯ ವಿರುದ್ಧ ಸಮಾನತೆಯ ಹೋರಾಟ. ದ್ವೇಷದ ವಿರುದ್ಧ ಭ್ರಾತೃತ್ವದ ಹೋರಾಟ. ಮತ್ತು ಸಂವಿಧಾನದ ಮೌಲ್ಯಗಳನ್ನು ದುರ್ಬಲ ಗೊಳಿಸುವ ಯಾವುದೇ ಮನೋಭಾವದ ವಿರುದ್ಧ ಪ್ರಜಾಪ್ರಭುತ್ವದ ಹೋರಾಟ. ವಿದ್ಯಾರ್ಥಿಗಳೇ, ನಿಮ್ಮ ಕೈಯಲ್ಲಿ ಭಾರತದ ನಾಳೆ ಇದೆ

ಪ್ರಿಯ ವಿದ್ಯಾರ್ಥಿಗಳೇ, ನಿಮ್ಮ ಕೈಯಲ್ಲಿರುವ ಪುಸ್ತಕ ಕೇವಲ ಪರೀಕ್ಷೆಯಲ್ಲಿ ಅಂಕ ಗಳಿಸುವ ಸಾಧನವಲ್ಲ. ಅದು ನಿಮ್ಮ ಚಿಂತನೆಗೆ ಬಲ ನೀಡುವ ಸಾಧನ.

ನೀವು ಓದಿ. ಇತಿಹಾಸವನ್ನು ಓದಿ. ಭಾರತದ ಸಂವಿಧಾನವನ್ನು ಓದಿ. ಡಾ. ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧೀಜಿ, ಸಾವಿತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ, ಪೆರಿಯಾರ್, ಬಸವಣ್ಣ ಮತ್ತು ನಮ್ಮ ದೇಶದ ಸಾಮಾಜಿಕ ಸುಧಾರಕರ ಚಿಂತನೆಗಳನ್ನು ಅಧ್ಯಯನ ಮಾಡಿ. ಯಾರ ಮಾತನ್ನೂ ಕಣ್ಣುಮುಚ್ಚಿ ನಂಬಬೇಡಿ.

ಓದಿ. ವಿಚಾರಿಸಿ. ಪ್ರಶ್ನಿಸಿ. ಸತ್ಯವನ್ನು ಅರಿತುಕೊಳ್ಳಿ, ನಂತರ ನಿಮ್ಮದೇ ವಿವೇಚನೆಯಿಂದ ನಿರ್ಧಾರ ತೆಗೆದುಕೊಳ್ಳಿ. ಇದೇ ಪ್ರಜ್ಞಾವಂತ ನಾಗರಿಕನ ಲಕ್ಷಣ. ಸಾಮಾಜಿಕ ಮಾಧ್ಯಮದ ಯುಗದಲ್ಲಿ ಜವಾಬ್ದಾರಿಯುತ ನಾಗರಿಕರಾಗೋಣ ಇಂದು ಮಾಹಿತಿ ನಮ್ಮ ಬೆರಳ ತುದಿಯಲ್ಲಿದೆ. ಆದರೆ ಮಾಹಿತಿ ಹೆಚ್ಚಾದಷ್ಟೂ ವಿವೇಕವೂ ಹೆಚ್ಚಾಗಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಪ್ರತಿಯೊಂದು ಸಂದೇಶವೂ ಸತ್ಯವಲ್ಲ.

ಸುಳ್ಳು ಸುದ್ದಿ, ದ್ವೇಷದ ಸಂದೇಶ, ಜಾತಿ–ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ವಿಷಯಗಳನ್ನು ಪರಿಶೀಲಿಸದೆ ಹಂಚಿಕೊಳ್ಳಬೇಡಿ.

ಒಂದು ತಪ್ಪು ಮಾಹಿತಿ ಸಮಾಜದಲ್ಲಿ ದೊಡ್ಡ ಸಂಘರ್ಷಕ್ಕೆ ಕಾರಣವಾಗಬಹುದು. ಆದ್ದರಿಂದ ಯುವಕರು ಡಿಜಿಟಲ್ ಸಾಕ್ಷರರಷ್ಟೇ ಅಲ್ಲ, ಡಿಜಿಟಲ್ ಪ್ರಜ್ಞಾವಂತರೂ ಆಗಬೇಕು. ಸಂವಿಧಾನ ವನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬ ಯುವಕರ ಕರ್ತವ್ಯ

ನಮ್ಮ ಸಂವಿಧಾನ ನಮಗೆ ಹಕ್ಕುಗಳನ್ನು ನೀಡಿದೆ. ಆದರೆ ಅದರ ಜೊತೆಗೆ ಕರ್ತವ್ಯಗಳನ್ನೂ ನೀಡಿದೆ. ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವ ಇವು ಕೇವಲ ಸಂವಿಧಾನದ ಪದಗಳಲ್ಲ. ಇವು ನಮ್ಮ ಪ್ರಜಾಪ್ರಭುತ್ವದ ಆತ್ಮ.

ಯುವಕರು ಸಂವಿಧಾನವನ್ನು ಓದಬೇಕು. ತಮ್ಮ ಹಕ್ಕುಗಳನ್ನು ತಿಳಿದುಕೊಳ್ಳಬೇಕು. ಇತರರ ಹಕ್ಕುಗಳನ್ನೂ ಗೌರವಿಸಬೇಕು. ತಮ್ಮ ಕರ್ತವ್ಯಗಳನ್ನು ಅರಿತುಕೊಳ್ಳಬೇಕು. ಯಾಕೆಂದರೆ ಸಂವಿಧಾನವನ್ನು ರಕ್ಷಿಸುವುದು ಕೇವಲ ಸಂಸತ್ತಿನ ಅಥವಾ ಸರ್ಕಾರದ ಜವಾಬ್ದಾರಿಯಲ್ಲ; ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ನನ್ನ ಯುವ ಸ್ನೇಹಿತರಿಗೆ ಒಂದು ಮನವಿ ನನ್ನ ಪ್ರೀತಿಯ ಯುವಕರೇ, ನಿಮ್ಮ ಭವಿಷ್ಯವನ್ನು ಯಾರಾದರೂ ಬಂದು ನಿರ್ಮಿಸುತ್ತಾರೆ ಎಂದು ಕಾಯಬೇಡಿ. ನೀವೇ ನಿಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳಿ. ಆದರೆ ನಿಮ್ಮ ವೈಯಕ್ತಿಕ ಯಶಸ್ಸಿನ ಜೊತೆಗೆ ಸಮಾಜದ ಯಶಸ್ಸನ್ನೂ ಬಯಸಿ.

ನೀವು ಎಷ್ಟು ಎತ್ತರಕ್ಕೆ ಏರಿದರೂ, ನಿಮ್ಮನ್ನು ಬೆಳೆಸಿದ ಸಮಾಜವನ್ನು ಮರೆಯಬೇಡಿ. ನಿಮ್ಮ ಸುತ್ತಲಿರುವ ಬಡ ವಿದ್ಯಾರ್ಥಿಯ ಕೈ ಹಿಡಿಯಿರಿ.

ಶಿಕ್ಷಣದಿಂದ ವಂಚಿತರಾಗಿರುವ ಮಗುವಿಗೆ ಸಹಾಯ ಮಾಡಿ. ಅನ್ಯಾಯ ಕ್ಕೊಳಗಾದ ವ್ಯಕ್ತಿಯ ಪರವಾಗಿ ಧ್ವನಿ ಎತ್ತಿ. ಜಾತಿ, ಧರ್ಮ ಮತ್ತು ಭಾಷೆಯ ಹೆಸರಿನಲ್ಲಿ ವಿಭಜನೆಯಾಗದೆ, ?ನಾವು ಮೊದಲು ಭಾರತೀಯರು? ಎಂಬ ಭಾವನೆಯೊಂದಿಗೆ ಬದುಕೋಣ.

ನನ್ನ ಮನದಾಳದ ಅಂತಿಮ ಮಾತು

ಇಂದು ನಾನು ದೇಶದ ಯುವಕರು ಮತ್ತು ವಿದ್ಯಾರ್ಥಿಗಳಲ್ಲಿ ಒಂದೇ ಒಂದು ಮನವಿ ಮಾಡುತ್ತೇನೆ: ವಿದ್ಯಾವಂತರಾಗಿ ಆದರೆ



ಪ್ರಜ್ಞಾವಂತರಾಗಿರಿ. ಯಶಸ್ವಿಗಳಾಗಿ ಆದರೆ ಮಾನವೀಯತೆಯನ್ನು ಕಳೆದು ಕೊಳ್ಳಬೇಡಿ. ಮುನ್ನಡೆಯಿರಿ ಆದರೆ ನಿಮ್ಮ ಜೊತೆ ಸಮಾಜವನ್ನೂ ಮುನ್ನಡೆಸಿ. ಪ್ರಶ್ನಿಸಿ ಆದರೆ ಸತ್ಯವನ್ನು ಹುಡುಕುವ ಮನಸ್ಸಿನಿಂದ ಪ್ರಶ್ನಿಸಿ. ಧ್ವನಿ ಎತ್ತಿ ಆದರೆ ನ್ಯಾಯದ ಪರವಾಗಿ ಧ್ವನಿ ಎತ್ತಿ. ಮತ್ತು ಎಲ್ಲಕ್ಕಿಂತ ಮುಖ್ಯವಾಗಿ? ಜಾತಿಗಿಂತ ಮಾನವೀಯತೆ ದೊಡ್ಡದು. ದ್ವೇಷಕ್ಕಿಂತ ಪ್ರೀತಿ ದೊಡ್ಡದು. ಅಸಮಾನತೆಗಿಂತ ಸಮಾನತೆ ದೊಡ್ಡದು. ಅಧಿಕಾರಕ್ಕಿಂತ ಸಂವಿಧಾನ ದೊಡ್ಡದು. ವೈಯಕ್ತಿಕ ಯಶಸ್ಸಿಗಿಂತ ದೇಶದ ಭವಿಷ್ಯ ದೊಡ್ಡದು. ನಮ್ಮ ಯುವಕರು ಪ್ರಜ್ಞಾವಂತರಾದರೆ, ವಿದ್ಯಾರ್ಥಿಗಳು ಜಾಗೃತರಾದರೆ,

ನಾಗರಿಕರು ಸಂವಿಧಾನವನ್ನು ಅರಿತು ಕೊಂಡರೆ? ಭಾರತದ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠವಾಗುತ್ತದೆ.

ಈ ಸ್ವಾತಂತ್ರ್ಯ ದಿನದಂದು ನಾವು ಒಂದು ಸಂಕಲ್ಪ ಮಾಡೋಣ: ಜ್ಞಾನವನ್ನು ಪಡೆಯೋಣ. ಪ್ರಜ್ಞೆಯನ್ನು ಬೆಳೆಸೋಣ. ಸಮಾನತೆಯನ್ನು ಎತ್ತಿಹಿಡಿಯೋಣ. ಸಾಮಾಜಿಕ ನ್ಯಾಯಕ್ಕಾಗಿ ನಿಲ್ಲೋಣ. ಸಂವಿಧಾನವನ್ನು ರಕ್ಷಿಸೋಣ. ಭಾರತವನ್ನು ಇನ್ನಷ್ಟು ಶಕ್ತಿಶಾಲಿ, ಸಮಾನತೆಯ ಮತ್ತು ಮಾನವೀಯ ರಾಷ್ಟ್ರವನ್ನಾಗಿ ನಿರ್ಮಿಸೋಣ. ಇದೇ ನನ್ನ ಮನದಾಳದ ಮಾತು. ಜೈ ಹಿಂದ್! ಜೈ ಭಾರತ! ಜೈ ಭೀಮ್! ಜೈ ಸಂವಿಧಾನ!

**ಡಾ. ಆನಂದ ಕುಮಾರ್**
ರಾಷ್ಟ್ರೀಯ ಸಂಯೋಜಕರು ಹಾಗೂ
ಮಹಾರಾಷ್ಟ್ರ ಉಸ್ತುವಾರಿಗಳು
ಎಸ್ಸಿ ವಿಭಾಗ, ಆಲ್ ಇಂಡಿಯಾ
ಕಾಂಗ್ರೆಸ್ ಕಮಿಟಿ, ನವದೆಹಲಿ

## ನಿಧನ ವಾರ್ತೆ

# ಸಂಗೀತ ಸಾಮ್ರಾಟ್ ಹೆನ್ರಿ ಡಿ'ಸೋಜಾ ನಿಧನ

ಮುಂಬಯಿ, ಆ.15: ಕೊಂಕಣಿ ಸಂಗೀತ ಲೋಕದ ಹಿರಿಯ ಕಲಾವಿದ, ಯೇ ಯೇ ಕತ್ರಿನಾ ಸುಪ್ರಸಿದ್ಧ 'ಸಂಗೀತ ಸಾಮ್ರಾಟ್' ಹಾಗೂ ಕಲಾರತ್ನ ಬಿರುದಾಂಕಿತ ಖ್ಯಾತ ಗಾಯಕ ಹೆನ್ರಿ ಡಿ'ಸೋಜಾ ಅವರು ಶನಿವಾರ ಮುಂಜಾನೆ ತನ್ನ ಗೋರೆಗಾಂವ್ ಪಶ್ಚಿಮದ ಪಿರಮಾಲ್ ನಗರದಲ್ಲಿನ ಪರೇಖ್ ಸೆಲ್ಲೆಸ್ತೆ ಕಟ್ಟಡದಲ್ಲಿನ ಸ್ವನಿವಾಸದಲ್ಲಿ ನಿಧನರಾದರು.



ಹೆನ್ರಿ ಡಿ'ಸೋಜಾ ಅವರು ಮೂಲತಃ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕು ಬಸ್ರಿಕಟ್ಟೆ ಅಲ್ಲಿಯವರು. ಇವರು ಮಂಗಳೂರು ಅಲ್ಲಿನ ಪಡುವ ಹೈಸ್ಕೂಲ್‌ನಲ್ಲಿ ಪ್ರೌಢಶಿಕ್ಷಣವನ್ನು, ಪುತ್ತೂರು ಸಂತ ಫಿಲೋಮಿನಾ ಕಾಲೇಜ್‌ನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಹಾಗೂ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಪದವಿ ವ್ಯಾಸಂಗವನ್ನು ಪೂರ್ಣಗೊಳಿಸಿದರು. ತದನಂತರ ಉತ್ತಮ ಅವಕಾಶಗಳ ಹುಡುಕಾಟದಲ್ಲಿ ಮುಂಬೈಗೆ ತೆರಳಿದ ಇವರು, ಮುಂಬಯಿ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು (ಎಲ್‌ಎಲ್‌ಬಿ) ಪಡೆದುಕೊಂಡರು.

ಇವರು ತಮ್ಮ ಕಾಲದ ಪ್ರಸಿದ್ಧ ಪಾಶ್ಚಿಮಾತ್ಯ ಗಾಯಕರಿಗೆ ಪ್ರಭಾವಿತರಾಗಿ ಪಾಶ್ಚಿಮಾತ್ಯ ಸಂಗೀತದತ್ತ ಆಕರ್ಷಿತರಾದರು. ಇವರು ದೇಶಾದ್ಯಂತ ಹಾಗೂ ಗಲ್ಫ್ ದೇಶಗಳು, ಶ್ರೀಲಂಕಾ ಮತ್ತು ಅಮೆರಿಕ ಖಂಡಗಳಲ್ಲಿ ಹಲವು ಕೊಂಕಣಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರ ಜನಪ್ರಿಯ ಹಳೆಯ ಕೊಂಕಣಿ ಹಾಡುಗಳು ದಕ್ಷಿಣ ಕನ್ನಡದ ಜನರಲ್ಲಿ ಇಂದಿಗೂ ಹಳೆಯ ಸವಿನೆನಪುಗಳನ್ನು ಮರುಕಳಿಸುವಂತೆ ಮಾಡುತ್ತವೆ.

ಮಂಗಳೂರಿನ ಸಂದೇಶ ಫೌಂಡೇಶನ್ ಸಂಸ್ಥೆಯು ಗೋರೆಗಾಂವ್ ನಿವಾಸಿಯಾಗಿರುವ ಸಂಗೀತ ಸಾಮ್ರಾಟ್ ಹಾಗೂ ಕಲಾ ರತ್ನ ಬಿರುದಾಂಕಿತ ಖ್ಯಾತ ಗಾಯಕ ಹೆನ್ರಿ ಡಿ'ಸೋಜಾ ಅವರಿಗೆ ಸಂದೇಶ ಪ್ರಶಸ್ತಿ – 2015 ನೀಡಿ ಗೌರವಿಸಿದ್ದು, ಕೊಂಕಣಿ ಸಂಗೀತ ಕ್ಷೇತ್ರಕ್ಕೆ ಐದು ದಶಕಗಳಿಗೂ ಹೆಚ್ಚು ಕಾಲ ಕೊಡುಗೆ ನೀಡಿರುವ ಇವರು, ನೂತನ ಪೀಳಿಗೆಯ ಕೊಂಕಣಿ ಜನರ ಮನಸ್ಸಿನಲ್ಲಿ ಅಮರಸ್ಥಾನವನ್ನು ಪಡೆದಿದ್ದು ಅನೇಕ ವರ್ಷಗಳಿಂದ ಮುಂಬಯಿನ ಗೋರೆಗಾಂವ್‌ನಲ್ಲಿ ನೆಲೆಸಿದ್ದರು. ಮೃತರು ಪುತ್ರಿ ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ

Chief reporter : SANDEEP RENU 99728 72151 | Executive Editor : SHARAT JYOTSNA B.R 9886766483 vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ವಂದೇಮಾತರಂಗೆ ಅವಮಾನಿಸಿದ ನಿಮ್ಮನ್ನು ದೇಶ ಕ್ಷಮಿಸಲ್ಲ

## ವೋಟ್‌ಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್‌ನಿಂದ ಅವಮಾನ - ಸೋನಿಯಾ ವಿರುದ್ಧ ಅಮಿತ್ ಶಾ ವಾಗ್ದಾಳಿ



**ಜೈಪುರ, ಆ.16:** ಕಾಂಗ್ರೆಸ್ ಪಕ್ಷವು ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ರಾಷ್ಟ್ರೀಯಗೀತೆ ವಂದೇ ಮಾತರಂಗೆ ಅಪಮಾನ ಮಾಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಾಗ್ದಾಳಿ ನಡೆಸಿದ್ದಾರೆ.


ರಾಜಸ್ಥಾನದ ಚಿತ್ತೋಡಗಢದಲ್ಲಿ ನಡೆದ ಸಾರ್ವಜನಿಕ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪ್ರಧಾನ ಕಚೇರಿಯಲ್ಲಿ ಶನಿವಾರದಂದು ವಂದೇ ಮಾತರಂ ಹಾಡುತ್ತಿದ್ದ ವೇಳೆ ಅದನ್ನು ನಿಲ್ಲಿಸುವಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪಕ್ಷದ ಅಧ್ಯಕ್ಷರಿಗೆ ಸೂಚಿಸಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನವರಿಗೆ ನಾಚಿಕೆಯಾಗಬೇಕು. ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ವಂದೇಮಾತರಂ ಗೀತೆ ಹಾಡಲಾಗುತ್ತಿತ್ತು. ಆ ಸಮಯದಲ್ಲಿ ಸೋನಿಯಾ ಗಾಂಧಿ ಅವರು ಗಾಯನವನ್ನು ನಿಲ್ಲಿಸುವಂತೆ ಕಾಂಗ್ರೆಸ್ ಅಧ್ಯಕ್ಷರಿಗೆ ಹೇಳಿದರು. ನಾವೆಲ್ಲರೂ ಇದನ್ನು ಟಿವಿಯಲ್ಲಿ ನೋಡಿದ್ದೇವೆ ಎಂದರು.

ನೇರವಾಗಿ ಸೋನಿಯಾ ಗಾಂಧಿಯವರನ್ನು ಉದ್ದೇಶಿಸಿ ಮಾತನಾಡಿದ ಅವರು, ಸೋನಿಯಾ ಜೀ, ದೇಶದ 140 ಕೋಟಿ ಜನ ನಿಮ್ಮನ್ನು ಗಮನಿಸುತ್ತಿದ್ದಾರೆ. ನೀವು ಮಾಡಿರುವ ಈ ಪಾಪವನ್ನು ಈ ದೇಶದ ಜನರು ಎಂದಿಗೂ ಕ್ಷಮಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ವಂದೇ ಮಾತರಂ ಗೀತೆಯನ್ನು ಅಪೂರ್ಣವಾಗಿ ಬಿಡುವುದನ್ನು ಯಾರಾದರೂ ಕಲ್ಪಿಸಿಕೊಳ್ಳಲು ಸಾಧ್ಯವೇ ಇದಕ್ಕಾಗಿ ಕಾಂಗ್ರೆಸ್‌ನವರು ನಾಚಿಕೆಪಡಬೇಕು ಎಂದು ಟೀಕಿಸಿದರು.

ವೋಟ್ ಬ್ಯಾಂಕ್ ಆಸೆಗೆ ಬಿದ್ದು ಕಾಂಗ್ರೆಸ್ ವಂದೇ ಮಾತರಂ ಮರೆತಿದೆ ಎಂದು ಆರೋಪಿಸಿದ ಗೃಹ ಸಚಿವರು, ರಾಷ್ಟ್ರೀಯ ಗೀತೆಗೆ ಮಾಡಿದ ಅಪಮಾನಕ್ಕಾಗಿ ಕಾಂಗ್ರೆಸ್ ಪಕ್ಷವು ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಇಂದಿರಾ ಭವನದಲ್ಲಿ ನಡೆದ ಕಾಂಗ್ರೆಸ್ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ವಿಡಿಯೊ ತುಣುಕನ್ನು ಬಿಜೆಪಿ ಶನಿವಾರ ಹಂಚಿಕೊಂಡ ನಂತರ ಈ ವಿವಾದ ಭುಗಿಲೆದ್ದಿದೆ. ವಂದೇ ಮಾತರಂ ಗಾಯನದ ವೇಳೆ ಸೋನಿಯಾ ಗಾಂಧಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.



ಕರ್ನಾಟಕ ಚಲನಚಿತ್ರ ಮಂಡಳಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಯೋಜಿಸಲಾಗಿತ್ತು. ವಾರ್ತಾ ಇಲಾಖೆ ನೂತನ ಕಾರ್ಯದರ್ಶಿ ಜೆ. ಮಂಜುನಾಥ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡರು. ಮಂಡಳಿ ಅಧ್ಯಕ್ಷೆ ಡಾ.ಜಯಮಾಲಾ, ಚಿತ್ರ ನಿರ್ಮಾಪಕ ಸಾ.ರಾ.ಗೋವಿಂದು, ಕಾರ್ಯದರ್ಶಿ ಎ.ಗಣೇಶ್ ಇತರರಿದ್ದರು.

# ಕಾನೂನು ಹೇಳಿದಂತೆ ನಡೆಯುತ್ತೇವೆ ಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟನೆ

**ಬೆಂಗಳೂರು, ಆ.16:** ನೈಸ್ ಯೋಜನೆಗೆ ಸಂಬಂಧಿಸಿದಂತೆ ಕಾನೂನು ಏನು ಹೇಳುತ್ತದೆಯೋ ಹಾಗೆ ನಾವು ನಡೆದುಕೊಳ್ಳುತ್ತೇವೆ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಕುಮಾರಸ್ವಾಮಿ ಅವರು ನೈಸ್ ಯೋಜನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದ ಬಗ್ಗೆ ಕೇಳಿದಾಗ, ಮಾಜಿ ಸಿಎಂ ಕುಮಾರಸ್ವಾಮಿ ಅವರು ಪತ್ರ ಬರೆದಿರುವುದು ನಿಜ. ಪತ್ರ ಇನ್ನು ಓದಿಲ್ಲ. ಓದಿ, ವಿಚಾರ ತಿಳಿದು ಕಾನೂನಿನ ಚೌಕಟ್ಟಿನಲ್ಲಿ ಮಾಡಬಹುದಾದ ಕೆಲಸಗಳ ಬಗ್ಗೆ ಪರಿಶೀಲನೆ ನಡೆಸುತ್ತೇನೆ' ಎಂದರು

# ನೈಸ್‌ರಸ್ತೆಯಲ್ಲಿ ಟೋಲ್ ಸಂಗ್ರಹ ಸ್ಥಗಿತಗೊಳಿಸಿ: ಸರ್ಕಾರಕ್ಕೆ ಒತ್ತಾಯ

## ಮುಖ್ಯಮಂತ್ರಿ ಡಿಕೆಶಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪತ್ರ



**ಬೆಂಗಳೂರು, ಆ.16:** ರಾಜ್ಯ ಸರ್ಕಾರವು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ನೈಸ್ ಸಂಸ್ಥೆ ಅನಧಿಕೃತವಾಗಿ ಸಂಗ್ರಹಿಸುತ್ತಿರುವ ಶುಲ್ಕವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸ್ಥಗಿತಗೊಳಿಸಬೇಕೆಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ. 23 ವರ್ಷಗಳ ಹಿಂದೆ – ಬಿ.ಎಂ.ಐಸಿ. ಯೋಜನೆಗಾಗಿ ಹಾಗೂ 5 ಟೌನ್‌ಶಿಪ್‌ಗಳ ನಿರ್ಮಾಣಕ್ಕಾಗಿ 2 ಸಾವಿರ ಎಕರೆ ಭೂಮಿಯನ್ನು ಅತ್ಯಂತ ಕಡಿಮೆ ದರಕ್ಕೆ ನೈಸ್ ಸಂಸ್ಥೆಗೆ ಮಂಜೂರು ಮಾಡಲಾಗಿತ್ತು. ಆದರೆ, ಭೂಸ್ವಾಧೀನ ಪ್ರಕ್ರಿಯೆ ವಿಳಂಬ ಹಾಗೂ ಸಂಸ್ಥೆಯು ಸರ್ಕಾರ ನೀಡಿರುವ ಜಮೀನನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಂಡು ದುರುಪಯೋಗ ಮಾಡಿಕೊಂಡಿದೆ. ಇದು ಈಗಾಗಲೇ ವಿಧಾನಸಭೆಯ ಸದನ ಸಮಿತಿ ಹಾಗೂ ಸಚಿವ ಸಂಪುಟದ ಉಪಸಮಿತಿಗಳ ವರದಿಗಳಲ್ಲೂ ಸ್ಪಷ್ಟವಾಗಿ ತಿಳಿದು ಬಂದಿದೆ.

ಇದಲ್ಲದೆ, ಕರ್ನಾಟಕ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ಗಳು ಸಹ ನೈಸ್ ಅಕ್ರಮದ ಬಗ್ಗೆ ಸ್ಪಷ್ಟವಾದ ತೀರ್ಪು ನೀಡಿವೆ. ಇದುವರೆಗೂ ಈ ಯೋಜನೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಭೂ ಪರಿಹಾರ ನೀಡದೆ ಅನ್ಯಾಯ–ವೆಸಗಲಾಗಿದೆ. ಹಾಗಾಗಿ ಸರ್ಕಾರ ಕೂಡಲೇ ನೈಸ್ ಸಂಸ್ಥೆ ರಸ್ತೆಗಳಲ್ಲಿ ಅನಧಿಕೃತವಾಗಿ ಸಂಗ್ರಹಿಸುತ್ತಿರುವ ಟೋಲ್ ವ್ಯವಸ್ಥೆಯನ್ನು ತಕ್ಷಣವೇ ನಿಲ್ಲಿಸಬೇಕು ಹಾಗೂ ನೈಸ್ ಸಂಸ್ಥೆಯ ವಿರುದ್ಧ ಕಠಿಣ ಕಾನೂನು ಕ್ರಮವನ್ನು ಕೈಗೊಳ್ಳಬೇಕೆಂದು ಕುಮಾರಸ್ವಾಮಿ ತಮ್ಮ ಪತ್ರದಲ್ಲಿ ಒತ್ತಾಯಿಸಿದ್ದಾರೆ.

**ನೈಸ್ ಯೋಜನೆ: ಎಚ್‌ಡಿಕೆ ಹೇಳಿಕೆಗೆ ಬೆಂಬಲ**

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನೈಸ್ ಬಗ್ಗೆ ಹೇಳಿರುವುದನ್ನು ನಾನು ಬೆಂಬಲಿಸುತ್ತೇನೆ. ಜೆ.ಎಚ್.ಪಟೇಲ್ ಅವಧಿಯಲ್ಲಿ ಉದ್ಘಾಟನೆ ನಡೆದಾಗಲೇ ನಾನು ಅದನ್ನು ಬಹಿಷ್ಕರಿಸಿದ್ದೆ. ನೈಸ್ ಸಂಸ್ಥೆ ಟೋಲ್ ಹೆಸರಲ್ಲಿ ಜನರನ್ನು ಲೂಟಿ ಮಾಡಿದೆ. ಕಾಂಕ್ರೀಟ್ ರಸ್ತೆ, ಮೇಲ್ಸೇತುವೆ ಎಂದು ಒಪ್ಪಂದದಲ್ಲಿದ್ದರೂ ಅದನ್ನು ಪಾಲಿಸಿಲ್ಲ. 30 ವರ್ಷ ಟೋಲ್ ಸಂಗ್ರಹಿಸಬೇಕೆಂದು ಒಪ್ಪಂದ ಇದ್ದರೂ ಆ ಅವಧಿಯನ್ನು ದಾಟಿಯಾಗಿದೆ. ಈಗ ಕಾಂಗ್ರೆಸ್ ಸರ್ಕಾರ ನೈಸ್ ಜೊತೆ ಶಾಮೀಲಾಗಿ ಅವರಿಗೆ ಆಶ್ರಯ ನೀಡುತ್ತಿದೆ. ಕೋರ್ಟ್ ಆದೇಶದಂತೆ ಟೋಲ್ ತೆಗೆದುಹಾಕಬೇಕು. ಇದರಿಂದ ಬೆಂಗಳೂರಿನ ಜನರಿಗೆ ಹೊರೆ ಕಡಿಮೆಯಾಗುತ್ತದೆ. ಇಡೀ ಸರ್ಕಾರ ನೈಸ್ ಜೊತೆ ಶಾಮೀಲಾಗಿರುವುದರಿಂದ ಅದನ್ನು ಪಾಲಿಸಲ್ಲ. ನೈಸ್ ಬಗ್ಗೆ ಸದನ ಸಮಿತಿ ವರದಿ ನೀಡಿದ್ದು, ಅದನ್ನು ಸರ್ಕಾರ ಅನುಷ್ಠಾನ ಮಾಡಬೇಕಿದೆ. 130 ಕಿ.ಮೀ. ಉದ್ದದಲ್ಲಿ 6 ಕಿ.ಮೀ. ಮಾತ್ರ ನೈಸ್ ರಸ್ತೆ ಮಾಡಲಾಗಿದೆ. ಎಕ್ಸ್‌ಪ್ರೆಸ್ ಹೈವೇ ಇರುವುದರಿಂದ ಬೇರೆ ರಸ್ತೆ ಅಗತ್ಯವಿಲ್ಲ. ಸ್ವಾಧೀನಪಡಿಸಿಕೊಂಡ ಭೂಮಿಯನ್ನು ರೈತರಿಗೆ ನೀಡಬೇಕು. ಇವೆಲ್ಲವನ್ನೂ ಸಿಬಿಐ ತನಿಖೆ ಮಾಡಿ ತಪ್ಪಿತಸ್ಥರನ್ನು ಪತ್ತೆ ಮಾಡಬೇಕು ಎಂದು ಆಗ್ರಹಿಸಿದರು. ಕೋರ್ಟ್ ಆದೇಶ ಬಂದ ದಿನವೇ ಕಾಂಗ್ರೆಸ್ ಸರ್ಕಾರ ಟೋಲ್ ಸ್ಥಗಿತಗೊಳಿಸಬೇಕಿತ್ತು. ಪರಿಷ್ಕೃತ ಒಪ್ಪಂದದಲ್ಲಿ ನೈಸ್‌ನಿಂದ ನಯಾಪೈಸೆ ಹೂಡಿಕೆ ಮಾಡದೆ ಜಮೀನಿನ ಮೇಲೆ ಸಾಲ ಪಡೆಯಲಾಗಿದೆ. ಸಿಬಿಐ ತನಿಖೆ ಮಾಡಿದರೆ ಮಾತ್ರ ಲೂಟಿ ಮಾಡಿರುವುದು ಪತ್ತೆಯಾಗುತ್ತದೆ ಎಂದರು.

# ಚಾಮರಾಜನಗರದಲ್ಲಿ ಎನ್‌ಕೌಂಟರ್: ನ್ಯಾಯಾಂಗ ತನಿಖೆಗೆ ಪ್ರತಿಪಕ್ಷ ನಾಯಕ ಅಶೋಕ್ ಆಗ್ರಹ

ಬೆಂಗಳೂರು, ಆ.16: ಚಾಮರಾಜನಗರದಲ್ಲಿ ಮೂವರ ಎನ್‌ಕೌಂಟರ್ ಆಗಿರುವುದು ಸೂಕ್ಷ್ಮವಾದ ವಿಚಾರ. ಇದರ ಅಗತ್ಯ ನಿಜಕ್ಕೂ ಇತ್ತಾ, ಹಾಗೂ ಈ ಘಟನೆ ನಡೆದಿದ್ದೇಕೆ ಎಂದು ತಿಳಿಯಲು ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರದಲ್ಲಿ ಅರಣ್ಯಾಧಿಕಾರಿಗಳು ಮೂವರ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ್ದಾರೆ. ಅರಣ್ಯ ಇಲಾಖೆಯಲ್ಲಿ ಕಳೆದ ಹತ್ತು ವರ್ಷದಲ್ಲಿ ಮೊದಲ ಬಾರಿ ಇಂತಹ ಘಟನೆ ನಡೆದಿದೆ. ತಪ್ಪು ಮಾಡಿದರೆ ಅವರಿಗೆ ಎಚ್ಚರಿಕೆ ನೀಡಬೇಕು ಅಥವಾ ಬಂಧಿಸಬೇಕು. ಆದರೆ ಈ ಘಟನೆಯಲ್ಲಿ ನೇರವಾಗಿ ಎದೆಗೆ ಗುಂಡು ಹಾರಿಸಲಾಗಿದೆ. ಪೊಲೀಸರು ಮಹಜರು ಮಾಡುವ ಮುನ್ನವೇ ಶವಗಳನ್ನು ತೆಗೆದುಕೊಂಡು ಮೈಸೂರಿಗೆ ಬರಲಾಗಿದೆ. ಬೇಟೆಗಾರರು ಎನ್ನಲಾದ ಈ ಮೂವರು ಹಿಂದೆ ಯಾವ ತಪ್ಪು ಮಾಡಿದ್ದರು ಎಂಬ ಇತಿಹಾಸವನ್ನು ಇಲಾಖೆ ತಿಳಿಸಿಲ್ಲ. ಗುಂಡು ಹಾರಿಸಿದವರು ಪೊಲೀಸರಿಗೆ ಶರಣಾಗಿ ಹೇಳಿಕೆ ನೀಡಬೇಕಿತ್ತು. ಜನರು ಹೇಳುವುದಕ್ಕೂ, ಇಲಾಖೆ ಅಧಿಕಾರಿಗಳು ಹೇಳುವುದಕ್ಕೂ ಬಹಳ ಭಿನ್ನತೆ ಇದೆ. ಇಲಾಖಾ ತನಿಖೆಯಿಂದ ಇದಕ್ಕೆ ಪರಿಹಾರ ಸಿಗುವುದಿಲ್ಲ. ಸತ್ಯ ಹೊರಬರಲು ನ್ಯಾಯಾಂಗ ತನಿಖೆಯಾಗಬೇಕಿದೆ. ಅಲ್ಲಿವರೆಗೆ ಹೊಣೆ ಹೊತ್ತ ಅಧಿಕಾರಿಗಳು ಕರ್ತವ್ಯದಲ್ಲಿರಬಾರದು ಎಂದು ಆಗ್ರಹಿಸಿದರು.

ಈ ಘಟನೆಯಲ್ಲಿ ಮೂವರ ಮೇಲೆ ಗುಂಡು ಹಾರಿಸುವ ಅಗತ್ಯವೇನಿತ್ತು, ಇಲ್ಲಿ ಯಾವ ಮಾಂಸ ಇತ್ತು, ಬಂದೂಕು ಎಷ್ಟಿತ್ತು ಎಂಬ ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ. ಮೃತರಾದ ಮೂವರು ಏಕಾಏಕಿ ಬೇಟೆಗಾರರಾಗಿ ಗುಂಡು ಹಾರಿಸಲು ಸಾಧ್ಯವಿಲ್ಲ. ಅವರಿಗೆ ಅಪರಾಧಗಳ ಇತಿಹಾಸವಿದೆ ಎಂದು ಯಾರೂ ಹೇಳಿಲ್ಲ. ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಈ ಬಗ್ಗೆ ಸಭೆ ನಡೆಸಿ ಕ್ರಮ ವಹಿಸಬೇಕಿತ್ತು. ಆದರೆ ಅವರು ಇಲ್ಲೂ ಆಸಕ್ತಿ ತೋರಿಸಿಲ್ಲ. ಅವರು ಕೂಡಲೇ ಸ್ಪಂದಿಸಿ ಪರಿಶೀಲಿಸಬೇಕಿತ್ತು. ಕೂಡಲೇ ಸಚಿವರು ಸ್ಥಳಕ್ಕೆ ಹೋಗಿ ಸತ್ಯವನ್ನು ಜನರ ಮುಂದೆ ಇಡಬೇಕು. ಈ ಎನ್‌ಕೌಂಟರ್ ಅಸಲಿನಾ? ನಕಲಿನಾ? ಇದರ ಅಗತ್ಯ ಇತ್ತಾ ಎಂದು ತಿಳಿಸಬೇಕು ಎಂದು ಒತ್ತಾಯಿಸಿದರು.

# ಅರಣ್ಯ ಸಿಬ್ಬಂದಿಯಿಂದ ಶೂಟೌಟ್: ಎಸ್‌ಐಟಿ ರಚನೆಗೆ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹ




**ಬೆಂಗಳೂರು, ಆ.16:** ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ನಡೆಸಿದ ಶೂಟೌಟ್‌ನಲ್ಲಿ ಮೂವರು ಅಮಾಯಕರು ಹತ್ಯೆಯಾಗಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡ ರಚಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಭಾನುವಾರ ಮಾತನಾಡಿದ ಅವರು, ಅರಣ್ಯ ಪ್ರದೇಶದಲ್ಲಿ ಸ್ಥಳೀಯರಿಗೆ ಮತ್ತು ಅರಣ್ಯ ಇಲಾಖೆಗೆ ನಿರಂತರವಾಗಿ ಸಂಪರ್ಕವಿರುತ್ತದೆ. ಆದರೆ ಅತ್ಯಂತ ಕಡಿಮೆ ಅಂತರದಿಂದ ಮೂವರು ವ್ಯಕ್ತಿಗಳ ಮೇಲೆ ಗುಂಡು ಹಾರಿಸಿರುವುದು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಆರೋಪಿಸಿದರು. ಇಲಾಖೆಯ ಅಧಿಕಾರಿಗಳು ನೀಡುತ್ತಿರುವ ಸಮರ್ಥನೆಗಳು ಹಾಗೂ ಕಾರಣಗಳು ನಂಬಲು ಸಾಧ್ಯವಿಲ್ಲದ್ದು ಮತ್ತು ಸತ್ಯಕ್ಕೆ ದೂರವಾದವು. ಈ ಪ್ರಕರಣದ ತನಿಖೆ ಕೆಳಹಂತದ ಅಧಿಕಾರಿಗಳಿಂದ ನಡೆದರೆ ಸತ್ಯ ಹೊರಬರಲು ಸಾಧ್ಯವಿಲ್ಲ. ಬೇರೆ ಪ್ರಕರಣಗಳಿಗೆ ಸರ್ಕಾರ ಎಸ್‌ಐಟಿ ರಚನೆ ಮಾಡುವಂತೆ, ಈ ಘಟನೆಗೂ ನ್ಯಾಯಾಲಯದ ನೇರ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ಎಸ್‌ಐಟಿ ತನಿಖೆ ನಡೆಸಬೇಕು. ಘಟನೆಯ ಹಿಂದಿನ ಸತ್ಯಾಂಶ ಹೊರಬರದಿದ್ದರೆ ಇದೊಂದು ಕೋಲ್ಡ್ ಬ್ಲಡೆಡ್ ಮರ್ಡರ್ (ಯೋಜಿತ ಹತ್ಯೆ) ಎಂದು ಬಿಂಬಿತವಾಗುತ್ತದೆ. ಆದ್ದರಿಂದ ನಿಷ್ಪಕ್ಷಪಾತ ತನಿಖೆಯೊಂದೇ ಸತ್ಯವನ್ನು ಹೊರತ ಬರಲು ಸಾಧ್ಯ. ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಹೇಳಿದರು.

# ಹನೂರಿನಲ್ಲಿ ನಡೆದದ್ದು ಸರ್ಕಾರ ಪ್ರಾಯೋಜಿತ ಕೊಲೆ: ಎಂಎಲ್‌ಸಿ ರವಿಕುಮಾರ್ ಆರೋಪ



ಬೆಂಗಳೂರು, ಆ.16: ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಅರಣ್ಯ ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿಯಿಂದ ಮೂವರು ಅಮಾಯಕ ಗ್ರಾಮಸ್ಥರ ಹತ್ಯೆಯಾಗಿರುವುದನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಇದೊಂದು ಸರ್ಕಾರಿ ಪ್ರಾಯೋಜಿತ ಕೊಲೆ ಎಂದು ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಹತ್ಯೆಗೀಡಾದವರನ್ನು ಬೇಟೆಗಾರರು ಎಂದು ಬಿಂಬಿಸುವ ಮೂಲಕ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಹಂತಕರು ಹತಾಶ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿ ದ್ದಾರೆ. ವಾದಕ್ಕಾಗಿ ಮೃತರು ಬೇಟೆಗಾರರು ಎಂದು ಒಪ್ಪಿಕೊಂಡರೂ, ಗುಂಡು ಹಾರಿಸುವ ನಿಯಮಗಳ ಪ್ರಕಾರ ಅರಣ್ಯ ಸಿಬ್ಬಂದಿ ಸೊಂಟದ ಕೆಳಭಾಗಕ್ಕೆ ಗುಂಡು ಹಾರಿಸಬೇಕಿತ್ತು. ಆದರೆ ಅವರನ್ನು ಎದೆ ಮತ್ತು ತಲೆಗೆ ಏಕೆ ಗುಂಡಿಕ್ಕಲಾಗಿದೆ. ಇದಲ್ಲದೆ, ಮೃತರು ಪ್ರತಿದಾಳಿ ನಡೆಸಿದ್ದರಿಂದ ಗುಂಡಿನ ಚಕಮಕಿ ನಡೆಯಿತು ಎಂದು ಹೇಳುವ ಮೂಲಕ ತನಿಖೆಯನ್ನು ದಾರಿ ತಪ್ಪಿಸಲು ಮತ್ತೊಂದು ಸುಳ್ಳನ್ನು ಹೇಳಲಾಗಿದೆ. ವಾಸ್ತವವಾಗಿ ಗ್ರಾಮಸ್ಥರ ಬಳಿ ಯಾವುದೇ ಶಸ್ತ್ರಾಸ್ತ್ರಗಳಿರಲಿಲ್ಲ. ಇದು ನೇರವಾಗಿ ನಡೆದ ನಿರ್ದಯ ಹತ್ಯೆ ಎಂದು ರವಿಕುಮಾರ್ ವಿವರಿಸಿದ್ದಾರೆ.

ತಮ್ಮ ಆರೋಪಗಳಿಗೆ ಪೂರಕವಾಗಿ ಮತ್ತಷ್ಟು ಸಾಕ್ಷ್ಯಗಳನ್ನು ಮುಂದಿಟ್ಟಿರುವ ರವಿಕುಮಾರ್ ಅವರು, ಮರಣೋತ್ತರ ಪರೀಕ್ಷೆಯನ್ನು ಹನೂರಿನಲ್ಲಿ ನಡೆಸದೆ, ಮೃತದೇಹಗಳನ್ನು ತರಾತುರಿಯಲ್ಲಿ ಮೈಸೂರು ಆಸ್ಪತ್ರೆಗೆ ಸಾಗಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ ಅವರೇ ಈ ಗುಂಡಿನ ದಾಳಿ ಅನುಮಾನಾಸ್ಪದವಾಗಿದೆ ಎಂದು ಹೇಳಿದ್ದಾರೆ ಎಂದಿದ್ದಾರೆ ಎಂದು ರವಿಕುಮಾರ್ ಆಗ್ರಹಿಸಿದ್ದಾರೆ.

# ಕುಡಿಯುವ ನೀರೊದಗಿಸುವುದು ಸರ್ಕಾರದ ಆದ್ಯತೆ: ಸಚಿವ ಯತೀಂದ್ರ ಸಿದ್ದರಾಮಯ್ಯ



**ಮೈಸೂರು, ಆ.16:** ಕುಡಿಯುವ ನೀರು ಪೂರೈಕೆಗಾಗಿ ಅವಶ್ಯವಿರುವ ಕಡೆ ಹೊಸದಾಗಿ ಕೊಳವೆಬಾವಿ ಕೊರೆಯಲು, ದುರಸ್ತಿಗೆ, ಖಾಸಗಿಯವರಿಂದ ಬಾಡಿಗೆ ಪಡೆಯಲು, ಟ್ಯಾಂಕರ್ ಮೂಲಕ ಸರಬರಾಜು ಮಾಡಲು ಜಿಲ್ಲೆಗೆ 4.50 ಕೋಟಿ ರೂ. ಅನುದಾನ ಕೊಡಲಾಗಿತ್ತು.

ನಂತರ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1 ಕೋಟಿ ರೂ. ನೀಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ನಗರದ ಬನ್ನಿಮಂಟಪದ ಮೈದಾನದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಈ ಬಾರಿ ಜಿಲ್ಲೆಯಲ್ಲಿ ಮಳೆಯ ಕೊರತೆಯಾಗಿದ್ದು, ಜಲಾಶಯಗಳು ನಿರೀಕ್ಷಿತ ಮಟ್ಟದಲ್ಲಿ ತುಂಬಿಲ್ಲ. ಆದಾಗ್ಯೂ, ಕುಡಿಯುವ ನೀರು ಒದಗಿಸುವುದು ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ಜನಸಾಮಾನ್ಯರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಬೆಳೆಗಳು ಒಣಗಿರುವ ಕ್ಷೇತ್ರಗಳಿಗೆ ಖುದ್ದು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಲಾಗಿದೆ. ಜಲಾಶಯದಲ್ಲಿ ನೀರಿನ ಲಭ್ಯತೆ ಆಧರಿಸಿ ಮೊದಲು ಕೆರೆಗಳನ್ನು ತುಂಬಿಸಲು, ಕಡಿಮೆ ನೀರು ಬಯಸುವ ಬೆಳೆಗಳನ್ನು ಬೆಳೆಯುವಂತೆ ರೈತರನ್ನು ಪ್ರೇರೇಪಿಸುವ ಕೆಲಸ ನಡೆಯುತ್ತಿದೆ' ಎಂದರು.ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ–ಬಲಿದಾನವನ್ನು ಸ್ಮರಿಸಿದ ಅವರು, ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನದ ಬಗ್ಗೆ ಪ್ರಸ್ತಾಪಿಸಿದರು. ನಮ್ಮ ಸರ್ಕಾರದ ಜನಪ್ರಿಯ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳಿಗೆ ವ್ಯಾಪಕ ಬೆಂಬಲ ಸಿಕ್ಕಿದೆ. ಅವುಗಳಿಂದ ಜನರನ್ನು ಆರ್ಥಿಕವಾಗಿ ಸದೃಢಗೊಳಿಸಲಾಗುತ್ತಿದೆ ಎಂದರು.

# ಡಿ.ಎಸ್. ಮಾಳಗಿ ನಿಧನಕ್ಕೆ ಸಂಸದ ಬಸವರಾಜ ಬೊಮ್ಮಾಯಿ ಸಂತಾಪ



**ಹಾವೇರಿ, ಆ.15:** ಜಿಲ್ಲೆಯ ಹಿರಿಯ ದಲಿತ ಮುಖಂಡರು, ಡಾ. ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಮಾಜಿ ಉಪಾಧ್ಯಕ್ಷರು, ಭಾರತೀಯ ಜನತಾ ಪಾರ್ಟಿಯ ಹಾವೇರಿ ಜಿಲ್ಲಾ ಉಪಾಧ್ಯಕ್ಷರು ಹಾಗೂ ಆತ್ಮೀಯರಾದ ಡಿ.ಎಸ್. ಮಾಳಗಿ ಅವರು ಭಾನುವಾರ ಹೃದಯಾಘಾತದಿಂದ ನಿಧನರಾದ ಸುದ್ದಿ ತಿಳಿದು ತೀವ್ರ ದುಃಖವಾಯಿತು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಸಂತಾಪ ಸೂಚಿಸಿದ್ದಾರೆ

ಸವಣೂರ ತಾಲೂಕಿನ ತೆವರಮೆಳ್ಳಿಹಳ್ಳಿ ಗ್ರಾಮದಲ್ಲಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನನವನ್ನು ಪಡೆದು ಪತ್ರಿಕಾ ಪ್ರಕಟಣೆ ನೀಡಿರುವ ಅವರು,ಸದಾ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಮಾಳಗಿ ಅವರು ಶಿಕ್ಷಣದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಶಿಕ್ಷಣಪ್ರೇಮಿಯಾಗಿದ್ದರು. ಸಮಾಜದ ಹಿತಕ್ಕಾಗಿ ಸದಾ ಶ್ರಮಿಸುತ್ತಿದ್ದ ಅವರ ಅಗಲಿಕೆ ಸಮಾಜಕ್ಕೂ ಹಾಗೂ ವೈಯಕ್ತಿಕವಾಗಿ ನನಗೂ ತುಂಬಲಾರದ ನಷ್ಟವಾಗಿದೆ ಎಂದು ತಿಳಿಸಿದ್ದಾರೆ.

ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲಿ. ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದ ಸದಸ್ಯರು, ಬಂಧುಗಳು ಹಾಗೂ ಅಭಿಮಾನಿಗಳಿಗೆ ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಂತಾಪದಲ್ಲಿ ತಿಳಿಸಿದ್ದಾರೆ.

# ಮೃತರ ಕುಟುಂಬಕ್ಕೆ ತಲಾ 15 ಲಕ್ಷ ಪರಿಹಾರ: ಶಾಸಕ ಮಂಜುನಾಥ್ ಭರವಸೆ

## ಮನವೊಲಿಕೆ ನಂತರ ಪ್ರತಿಭಟನೆ ಕೈಬಿಟ್ಟ ಗ್ರಾಮಸ್ಥರು ಹಾಗೂ ಮೃತರ ಕುಟುಂಬದ ಸದಸ್ಯರು

**ಚಾಮರಾಜನಗರ, ಆ.16:** ಅರಣ್ಯ ಸಿಬ್ಬಂದಿಗಳ ಗುಂಡೇಟಿಗೆ ಮೂವರು ಬಲಿಯಾದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೃತಪ ಕುಟುಂಬದವರನ್ನು ಭಾನುವಾರ ಭೇಟಿಯಾದ ಹನೂರು ಶಾಸಕ ಮಂಜುನಾಥ್ ಅವರು ಪ್ರತಿಭಟನೆ ಕೈಬಿಡುವಂತೆ ಗ್ರಾಮಸ್ಥರು ಹಾಗೂ ಕುಟುಂಬಸ್ಥರ ಮನವೊಲಿಕೆ ಮಾಡಿದ್ದಾರೆ. ಹಾಗೂ ಮೃತರ ಕುಟುಂಬಕ್ಕೆ ತಲಾ 15 ಲಕ್ಷ ರೂಪಾಯಿ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ. ಸರ್ಕಾರದಿಂದ ತಲಾ ಐದು ಲಕ್ಷ ರೂಪಾಯಿ ಹಾಗೂ ಶಾಸಕ ಮಂಜುನಾಥ್ ಅವರು ವೈಯಕ್ತಿಕವಾಗಿ ತಲಾ 10 ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಿದ್ದಾರೆ. ಅಲ್ಲದೆ ಮೃತರ ಕುಟುಂಬಸ್ಥರಿಗೆ ಸರ್ಕಾರಿ ಉದ್ಯೋಗ ಕೊಡಿಸುವುದಾಗಿಯೂ ಭರವಸೆ ನೀಡಿದ್ದಾರೆ. ಅಲ್ಲದೆ ಮುಖ್ಯಮಂತ್ರಿ ಅವರ ಸೂಚನೆಯ ಮೇರೆಗೆ ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಲಾಗುತ್ತದೆ ಎಂದು ಹೇಳಿದ್ದಾರೆ. ಶಾಸಕರ ಮನವೊಲಿಕೆಯ ಬೆನ್ನಲ್ಲೆ, ಮೃತರ ಕುಟುಂಬಸ್ಥರ ಜೊತೆ ಸಂಧಾನವೂ ಯಶಸ್ವಿಯಾಗಿದ್ದು, ಮರಣೋತ್ತರ ಪರೀಕ್ಷೆಗೆ ಕುಟುಂಬಸ್ಥರು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

# ಉ.ಕ. ಜಿಲ್ಲೆಗಳ ಬೆಳೆಗಳಿಗೆ ಮಾರುಕಟ್ಟೆ ಲಭ್ಯ: ಸಚಿವ ತಂಗಡಗಿ

**ಕೊಪ್ಪಳ, ಆ.16:** ಜಿಲ್ಲೆಯಲ್ಲಿ ತೋಟಗಾರಿಕೆ ಪಾರ್ಕ್‌ನಿಂದ ಉತ್ತರ ಕರ್ನಾಟಕದ ಜಿಲ್ಲೆಗಳ ತೋಟಗಾರಿಕಾ ಬೆಳೆಗಳಿಗೆ ಸ್ಥಳೀಯವಾಗಿಯೇ ಮಾರುಕಟ್ಟೆ ಲಭ್ಯವಾಗಲಿದೆ. ಉದ್ಯೋಗ ಸೇರಿದಂತೆ ರೈತರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಹೇಳಿದರು. ಜಿಲ್ಲೆಯ ಕನಕಗಿರಿ ವಿಧಾನಸಭಾ ಕ್ಷೇತ್ರದ ಸಿರಿವಾರದಲ್ಲಿ ರೂ. 9.9 ಕೋಟಿ ಮೊತ್ತದ ತೋಟಗಾರಿಕೆ ಪಾರ್ಕ್‌ನ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವದ ಯೋಜನೆ ಇದಾಗಿದ್ದು, 194 ಎಕರೆ ಪ್ರದೇಶದಲ್ಲಿ ಪಾರ್ಕ್ ನಿರ್ಮಾಣ ಗೊಳ್ಳಲಿದೆ. ಯೋಜನೆಯಿಂದ ರೈತರಿಗೆ ಅನುಕೂಲ ಕಲ್ಪಿಸುವುದು, ತೋಟಗಾರಿಕಾ ಉತ್ಪನ್ನಗಳಿಗೆ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಸಿಗಲಿದೆ. ಇಂದು ಬೀಜ ಬಿತ್ತಿದ್ದು, ಭವಿಷ್ಯದಲ್ಲಿ ಹೆಮ್ಮರವಾಗಿ ಬೆಳೆಯಲಿದೆ ಎಂದರು.

**ಐದಾರು ಸಾವಿರ ಮಂದಿಗೆ ಉದ್ಯೋಗ –ಯೋಜನೆಯಿಂದ**

ಈ ಭಾಗದ ಐದಾರು ಸಾವಿರ ಮಂದಿಗೆ ಉದ್ಯೋಗ ಲಭಿಸಲಿದ್ದು, ರೈತರು ತಾವು ಬೆಳೆದ ಬೆಳೆಗೆ ಇಲ್ಲಿಯೇ ಮಾರುಕಟ್ಟೆ, ಕೋಲ್ಡ್ ಸ್ಟೋರೇಜ್ ಹಾಗೂ ಸಂಶೋಧನಾ ಕೇಂದ್ರ ಬರಲಿದೆ. ಪ್ರತಿಯೊಂದು ಕಾಮಗಾರಿಗೆ ಹಂತ–ಹಂತವಾಗಿ ಚಾಲನೆ ನೀಡಲಾಗುವುದು.

ಅಲ್ಲದೆ, ಬ್ಯಾಂಕ್, ರಸ್ತೆ ಸೇರಿದಂತೆ ಎಲ್ಲಾ ಮೂಲ ಸೌಲಭ್ಯಗಳು ದೊರಕಲಿವೆ. ಅಂದಿನ ಬಿಜೆಪಿ ಸರ್ಕಾರ ನಯಾಪೈಸೆ ಅನುದಾನ ಮೀಸಲಿಡದೆ ಈ ಯೋಜನೆಯನ್ನು ಘೋಷಿಸಿತ್ತು. ರೈತರಿಗೆ ಅನುಕೂಲವಾಗಲಿದೆ ಎಂಬ ಕಾರಣಕ್ಕೆ ಯೋಜನೆಯನ್ನು ಸಚಿವ ಸಂಪುಟಕ್ಕೆ ತಂದು ಅನುದಾನ ಮೀಸಲಿರಿಸಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಕೆಲಸ ಮಾಡಿದ್ದೇವೆ. ವಿಶೇಷವಾಗಿ ಅಮೆರಿಕಾಕ್ಕೆ ಭೇಟಿ ನೀಡಿ ಅಲ್ಲಿನ ತೋಟಗಾರಿಕಾ ಪಾರ್ಕ್ ಬಗ್ಗೆ ಅಧ್ಯಯನ ಕೂಡ ನಡೆಸಿದ್ದೆ ಎಂದು ತಿಳಿಸಿದರು.

# ಅಡುಗೆಕೋಣೆ ಸ್ವಚ್ಛತೆ, ಆಹಾರ ಗುಣಮಟ್ಟ ಕಾಪಾಡಿಕೊಳ್ಳುವುದು ಕಡ್ಡಾಯ

## ಆಹಾರ ತಯಾರಿಕಾ ಸಂಸ್ಥೆಗಳಿಗೆ ಸಚಿವ ಯು.ಟಿ. ಖಾದರ್ ಎಚ್ಚರಿಕೆ

ಮಂಗಳೂರು, ಆ.16: ಬೆಂಗಳೂರಿನಲ್ಲಿ ಈಗಾಗಲೇ ಆಹಾರ ತಯಾರಿಕಾ ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದರೂ, ಮಂಗಳೂರಿನಲ್ಲಿ ಇನ್ನೂ ಅದೇ ರೀತಿಯ ಪರಿಸ್ಥಿತಿ ಮುಂದುವರಿದಿರುವುದು ಆಹಾರ ಮಾರಾಟ ಸಂಸ್ಥೆಗಳ ಬೇಜವಾಬ್ದಾರಿತನವಲ್ಲದೆ ಬೇರೇನಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾರ್ವಜನಿಕರಿಂದ ದೂರು ಬಂದ ತಕ್ಷಣವೇ



ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಪರಿಶೀಲನೆ ವೇಳೆ ಅನಾರೋಗ್ಯಕರ ವಾತಾವರಣದಲ್ಲಿ ಆಹಾರ ತಯಾರಿಸುತ್ತಿರುವುದು ಕಂಡುಬಂದ ಹಿನ್ನೆಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಇಂತಹ ದಿಢೀರ್ ದಾಳಿಗಳು ಮುಂದೆಯೂ ನಿರಂತರವಾಗಿ ಮುಂದುವರಿಯಲಿವೆ ಎಂದರು.

ಎಲ್ಲ ಸಂಸ್ಥೆಗಳು ತಮ್ಮ ಅಡುಗೆ ಕೋಣೆ, ಆಹಾರ ಉತ್ಪನ್ನಗಳ ಸಂಗ್ರಹ ಕೊಠಡಿಗಳಲ್ಲಿ ಸ್ವಚ್ಛತೆ ಹಾಗೂ ಆಹಾರ ಪದಾರ್ಥಗಳಲ್ಲಿ ಗುಣಮಟ್ಟವನ್ನು ಕಡ್ಡಾಯವಾಗಿ ಕಾಪಾಡಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲಾದರೂ ಎಲ್ಲಿ ಬೇಕಾದರೂ ದಾಳಿ ಮಾಡಬಹುದು. ಎಷ್ಟೇ ದೊಡ್ಡ ಸಂಸ್ಥೆಯಾಗಿದ್ದರೂ ರಿಯಾಯಿತಿ ನೀಡುವ ಪ್ರಶ್ನೆಯೇ ಇಲ್ಲ, ನಮಗೆ ಸಾರ್ವಜನಿಕರ ಆರೋಗ್ಯವೇ ಮೊದಲ ಆದ್ಯತೆ ಎಂದು ಸ್ಪಷ್ಟಪಡಿಸಿದರು.

ಮುಂದಿನ ದಿನಗಳಲ್ಲಿ ಕ್ಯಾಟರಿಂಗ್ ಉದ್ದಿಮೆಗಳ ಆಹಾರ ತಯಾರಿಕಾ ಸ್ಥಳಗಳು, ಪೇಯಿಂಗ್ ಗೆಸ್ಟ್ ಕೇಂದ್ರಗಳು ಹಾಗೂ ಹಾಸ್ಟೆಲ್‌ಗಳ ಮೇಲೂ ತಪಾಸಣೆ ನಡೆಸಲಾಗುವುದು. ಸಂಬಂಧಪಟ್ಟ ಇತರ ಇಲಾಖೆಗಳ ಜತೆ ಚರ್ಚಿಸಿ ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಲಾಗುವುದು ಎಂದು ತಿಳಿಸಿದರು.

ಆಹಾರ ಸುರಕ್ಷತಾ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನದಲ್ಲಿದೆ. ಈ ರೀತಿಯ ತಪಾಸಣೆಗಳು ಹೆಚ್ಚಾದಂತೆ ಸರ್ಕಾರ ಹೊಸ ನೇಮಕಾತಿಗೆ ಅನುಮತಿ ನೀಡಲಿದೆ. ಸಿಬ್ಬಂದಿ ನೇಮಕಾತಿಯ ಜತೆಗೆ ವೈಜ್ಞಾನಿಕ ಪ್ರಯೋಗಾಲಯಗಳ ಅಗತ್ಯದ ಬಗ್ಗೆಯೂ ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ಸಚಿವರು ವಿವರಿಸಿದರು.

# ನಗರ ನಕ್ಸಲ್ ಆಗಿರುವುದಕ್ಕೆ ಹೆಮ್ಮೆ ಇದೆ ಪ್ರಧಾನಿ ಮೋದಿಗೆ ಚಿದಂಬರಂ ತಿರುಗೇಟು



**ನವದೆಹಲಿ, ಆ.16:** ಪ್ರಧಾನಿ ನರೇಂದ್ರ ಮೋದಿ ಅವರ ದಿಮಾಗಿ (ನಗರ)ನಕ್ಸಲ್ ಹೇಳಿಕೆಗೆ ತಿರುಗೇಟು ನೀಡಿರುವ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಅವರು, ನಾನು ದಿಮಾಗಿ ನಕ್ಸಲ್ ಆಗಿರುವುದಕ್ಕೆ ಹೆಮ್ಮೆಪಡುತ್ತೇನೆ ಎಂದು ಹೇಳಿದ್ದಾರೆ.

ದಿಮಾಗಿ ನಕ್ಸಲರು ವ್ಯವಸ್ಥೆಯೊಳಗೆ ಬೇರೂರಿದ್ದು, ನೀತಿಗಳ ಮೇಲೆ ಪ್ರಭಾವ ಬೀರುವ ಮೂಲಕ ಸಮಾಜಕ್ಕೆ ಅಪಾಯವನ್ನುಂಟುಮಾಡುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಶನಿವಾರ ದೆಹಲಿಯ ಕೆಂಪುಕೋಟೆಯ ಸ್ವಾತಂತ್ರ್ಯ ಭಾಷಣದಲ್ಲಿ ಹೇಳಿದ್ದರು. ಅಂತಹವರನ್ನು ಗುರುತಿಸಿ, ಪ್ರತ್ಯೇಕಿಸಿ ಎಂದು ಕರೆ ನೀಡಿದ್ದರು. ಕಾಡು ಪ್ರದೇಶಗಳಿಂದ ಸಶಸ್ತ್ರ ನಕ್ಸಲ್‌ವಾದ ಅನ್ನು ನಿರ್ಮೂಲನೆ ಮಾಡುವಲ್ಲಿ ದೇಶ ಯಶಸ್ವಿಯಾಗಿದೆ. ಆದರೆ ಅದರ ಸಿದ್ಧಾಂತವನ್ನು ಬೆಂಬಲಿಸುವವರು ಹಿಂಸೆ ಮತ್ತು ಅರಾಜಕತೆಯನ್ನು ಉತ್ತೇಜಿಸಲು ಅವಕಾಶಗಳನ್ನು ಹುಡುಕುತ್ತಿದ್ದಾರೆ ಎಂದು ಎಚ್ಚರಿಸಿದರು. ಮಾವೋವಾದಿ ಮನಸ್ಥಿತಿಯುಳ್ಳವರು ಹಲವು ವರ್ಷಗಳಿಂದ ಅಧಿಕಾರದ ಕೇಂದ್ರಗಳಲ್ಲಿ ತಮ್ಮ ಪ್ರಭಾವವನ್ನು ಸ್ಥಾಪಿಸಿಕೊಂಡಿದ್ದು, ಸರ್ಕಾರದ ವಿವಿಧ ಸಮಿತಿಗಳಲ್ಲಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಾ ಸಾರ್ವಜನಿಕ ನೀತಿಗಳ ಮೇಲೆ ಪ್ರಭಾವ ಬೀರುತ್ತಿದ್ದಾರೆ ಎಂದು ಮೋದಿ ಆರೋಪಿಸಿದ್ದರು.

ದಶಕಗಳ ಕಾಲ ನಡೆದ ನಕ್ಸಲಿಸಂ ಮತ್ತು ಮಾವೋವಾದಿ ಹಿಂಸಾಚಾರವು ಕೋಟ್ಯಂತರ ಯುವಜನರ ಜೀವನ ಹಾಗೂ ಭವಿಷ್ಯದ ಆಶಯಗಳನ್ನು ನಾಶಪಡಿಸಿದೆ. ಈ ಸಂಘರ್ಷದಲ್ಲಿ 3,500ಕ್ಕೂ ಹೆಚ್ಚು ಪೊಲೀಸ್ ಹಾಗೂ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಈ ಸಂಖ್ಯೆ ಯುದ್ಧಗಳಲ್ಲಿ ಮೃತಪಟ್ಟ ಸೈನಿಕರ ಸಂಖ್ಯೆಯನ್ನೂ ಮೀರಿದೆ ಎಂದು ಮೋದಿ ಹೇಳಿದ್ದರು.

ಹಿಂಸಾಚಾರದ ಮೂಲಕ ನಕ್ಸಲಿಸಂ ಒಂದು ಕಾಲದಲ್ಲಿ ಭಾರತದ ವಿಶಾಲ ಪ್ರದೇಶಗಳು ಮತ್ತು ದೊಡ್ಡ ಜನಸಂಖ್ಯೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತ್ತು, 2014ರಲ್ಲಿ ಅಧಿಕಾರಕ್ಕೆ ಬಂದ ತಮ್ಮ ಸರ್ಕಾರವು ನಕ್ಸಲಿಸಂ ನಿರ್ಮೂಲನೆಗೆ ಆದ್ಯತೆ ನೀಡಿದೆ ಎಂದು ತಿಳಿಸಿದ್ದರು.

ನಕ್ಸಲಿಸಂ ಮತ್ತು ಮಾವೋವಾದವು ಲಕ್ಷಾಂತರ ಯುವಜನರ ಭವಿಷ್ಯವನ್ನು ನಾಶಪಡಿಸಿದ್ದು, ಅಸಂಖ್ಯಾತ ಕುಟುಂಬಗಳ ಮಕ್ಕಳನ್ನು ಬಲಿ ತೆಗೆದುಕೊಂಡಿದೆ. ಒಂದು ಕಾಲದಲ್ಲಿ ಬಂಡಾಯ ಚಟುವಟಿಕೆಗಳಿಂದ ಬಾಧಿತವಾಗಿದ್ದ ಪ್ರದೇಶಗಳಲ್ಲಿ ಇದೀಗ ಹಿಂಸೆ ಮತ್ತು ರಕ್ತಪಾತದ ಬದಲಿಗೆ ಅಭಿವೃದ್ಧಿ ಹಾಗೂ ರಾಷ್ಟ್ರಧ್ವಜ ಕಾಣಿಸಿಕೊಳ್ಳುತ್ತಿದ್ದು, ನಕ್ಸಲೈಟ್ ಮತ್ತು ಮಾವೋವಾದಿ ಹಿಂಸಾಚಾರಕ್ಕೆ ಅಂತ್ಯ ಹಾಡಲಾಗುತ್ತಿದೆ ಎಂದು ಪ್ರಧಾನಿ ಹೇಳಿದ್ದರು.

### ಬಿಹಾರ ಚುನಾವಣೆ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್- ಜಪಾನ್ ಮೀರಿಸಿದೆ

# ಎಸ್‌ಐಆರ್ ಭಾರಿ ಯಶಸ್ಸು: ಸಿಇಸಿ ಜ್ಞಾನೇಶ್ ಕುಮಾರ್




**ಪಟನಾ, ಆ.16:** ಇತ್ತೀಚೆಗೆ ಮುಕ್ತಾಯಗೊಂಡ ಪ್ರಜಾಪ್ರಭುತ್ವ ಉತ್ಸವದಲ್ಲಿ ನಾಗರಿಕರ ಭಾಗವಹಿಸುವಿಕೆಯಲ್ಲಿ ಬಿಹಾರವು ವಿಶ್ವದ ಪ್ರಮುಖ ದೇಶಗಳಿಗಿಂತ ಮುಂದಿದೆ ಎಂದು ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಬಣ್ಣಿಸಿದರು.

ಎರಡು ದಿನಗಳ ಭೇಟಿಗಾಗಿ ಬಿಹಾರಕ್ಕೆ ಆಗಮಿಸಿದ್ದ ಅವರು, ಪಟನಾದಲ್ಲಿ ಚುನಾವಣಾ ಸಾಕ್ಷರತೆಯ ಕುರಿತಾದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಬಿಹಾರ ಪ್ರಜಾಪ್ರಭುತ್ವದ ತಾಯಿ ಮತ್ತು ಪವಿತ್ರ ಭೂಮಿ. ದೇಶಾದ್ಯಂತ ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಮತ್ತು ನವೀಕರಿಸುವ ಅತ್ಯಂತ ಯಶಸ್ವಿ ಮತ್ತು ಐತಿಹಾಸಿಕ ಉಪಕ್ರಮವು ಈ ಭೂಮಿಯಿಂದ ಪ್ರಾರಂಭವಾಯಿತು ಎಂದು ಬಣ್ಣಿಸಿದರು.2025ರಲ್ಲಿ ನಡೆದ ಬಿಹಾರ ವಿಧಾನಸಭಾ ಚುನಾವಣೆಗಳು ಸಂಪೂರ್ಣವಾಗಿ ಶಾಂತಿಯುತ ಮತ್ತು ನ್ಯಾಯಯುತವಾಗಿದ್ದವು. ಈ ಚುನಾವಣೆಯಲ್ಲಿ ಮತದಾರರ ಮತದಾನವು ಹೊಸ ದಾಖಲೆಯನ್ನು ಸ್ಥಾಪಿಸಿತು. ಇದು ಭಾರತದ ಸ್ವಾತಂತ್ರ್ಯದ ನಂತರ ರಾಜ್ಯದ ಇತಿಹಾಸದಲ್ಲಿ ಅತ್ಯಧಿಕವಾಗಿದೆ. ಆದರೆ ವಿಶ್ವದ ಅನೇಕ ಪ್ರಮುಖ ಅಭಿವೃದ್ಧಿ ಹೊಂದಿದ ದೇಶಗಳ ಸಾರ್ವತ್ರಿಕ ಚುನಾವಣೆಗಳನ್ನು ಮೀರಿಸಿದೆ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್ ಮತ್ತು ಜಪಾನ್‌ನಂತಹ ಜಾಗತಿಕ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಾರ್ವತ್ರಿಕ ಚುನಾವಣೆಗಳಲ್ಲಿ ದಾಖಲಾದ ಮತದಾನಕ್ಕಿಂತ ಬಿಹಾರದ ಮತದಾರರ ಸಂಖ್ಯೆ ಹೆಚ್ಚಾಗಿದೆ ಎಂದು ಅವರು ಹೇಳಿದರು. ಎಸ್‌ಐಆರ್ ಮತ್ತು ಮತದಾರರ ಪಟ್ಟಿಗಳ ಡಿಜಿಟಲೀಕರಣವನ್ನು ಸಹ ಉಲ್ಲೇಖಿಸಿದ ಅವರು, ಅತ್ಯಂತ ಪಾರದರ್ಶಕ ಮತ್ತು ನಿಖರವಾದ ಮತದಾರರ ಪಟ್ಟಿಗಳನ್ನು ತಯಾರಿಸಲು ದೇಶದ ಪ್ರಜಾಪ್ರಭುತ್ವ ರಚನೆಯನ್ನು ಬಲಪಡಿಸಲು ಅಳವಡಿಸಿಕೊಂಡ ಮಾದರಿಯು ಬಿಹಾರದಲ್ಲಿ ಆರಂಭವಾಯಿತು ಎಂದರು. ಕಠಿಣ ಸಾರ್ವಜನಿಕ ಮೇಲ್ವಿಚಾರಣೆ ಮತ್ತು ಮೂಲಭೂತ ಕಾರ್ಯದ ಮೂಲಕ, ಬಿಹಾರ ಇಡೀ ದೇಶಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಇದು ಚುನಾವಣಾ ಆಯೋಗವು ರಾಜ್ಯದಲ್ಲಿ ಪಾರದರ್ಶಕ ಮತ್ತು ದೋಷರಹಿತ ಚುನಾವಣಾ ಪ್ರಕ್ರಿಯೆಯನ್ನು ನಡೆಸಲು ಅನುವು ಮಾಡಿಕೊಟ್ಟಿದೆ ಎಂದರು.

ಸೋಮವಾರ, ಮುಖ್ಯ ಚುನಾವಣಾ ಆಯುಕ್ತರು ನಳಂದ ವಿಶ್ವವಿದ್ಯಾಲಯದ ಸುಷ್ಮಾ ಸ್ವರಾಜ್ ಸಭಾಂಗಣದಲ್ಲಿ ಸುಮಾರು 500 ಬೂತ್ ಮಟ್ಟದ ಅಧಿಕಾರಿಗಳೊಂದಿಗೆ (ಬಿಎಲ್ಒ) ನೇರವಾಗಿ ಸಂವಾದ ನಡೆಸಲಿದ್ದಾರೆ. ಈ ಸಭೆಯ ಉದ್ದೇಶವು ಈ ಜನಸಾಮಾನ್ಯರ ಕಾರ್ಯಕರ್ತರಿಂದ ಅವರ ಪ್ರಾಯೋಗಿಕ ಅನುಭವಗಳು ಮತ್ತು ಸವಾಲುಗಳ ಬಗ್ಗೆ ನೇರವಾಗಿ ಕೇಳುವುದಾಗಿದೆ. ಇದರ ನಂತರ, ಅವರು ಪಾಟ್ನಾದ ಜ್ಞಾನ ಭವನದಲ್ಲಿ "ಚುನಾವಣಾ ಸಾಕ್ಷರತಾ ಕ್ಲಬ್ 2.0" ಅನ್ನು ಭವ್ಯವಾಗಿ ಉದ್ಘಾಟಿಸಲಿದ್ದಾರೆ. 400ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ವಿಶ್ವವಿದ್ಯಾಲಯದ ಉಪಕುಲಪತಿಗಳು ಮತ್ತು ಕಾಲೇಜು ಪ್ರಾಂಶುಪಾಲರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಆಯೋಗದ ಹೊಸ ಡಿಜಿಟಲ್ ಪರಿಸರ ವ್ಯವಸ್ಥೆ "ECINET" ಗೆ ಅವರನ್ನು ಪರಿಚಯಿಸಲಿದ್ದಾರೆ.

# ಪಂಜಾಬ್: ಉಗ್ರ ದಾಳಿ ಸಂಚು ವಿಫಲ, 690 ಗ್ರಾಂ ಐಇಡಿ ವಶ

**ಚಂಡೀಗಢ, ಆ.16:** ಅಮೃತಸರ ಗ್ರಾಮೀಣ ಪೊಲೀಸರು ಭಾನುವಾರ ಪೊಲೀಸ್ ಠಾಣೆಯನ್ನು ಗುರಿಯಾಗಿಸಿಕೊಂಡು ನಡೆಸಲಾಗುತ್ತಿದ್ದ ಭಯೋತ್ಪಾದಕರ ಸಂಚನ್ನು ವಿಫಲಗೊಳಿಸಿರುವುದಾಗಿ ಹೇಳಿದ್ದಾರೆ.

ಪೊಲೀಸ್ ಕಾರ್ಯಾಚರಣೆ ವೇಳೆ 690 ಗ್ರಾಂ ತೂಕದ ಐಇಡಿ ಹಾಗೂ ಎಲೆಕ್ಟ್ರಾನಿಕ್ ಡಿಟೋನೇಟರ್ ಪತ್ತೆಯಾಗಿದೆ.

"ಅಮೃತಸರ ಗ್ರಾಮೀಣ ಪೊಲೀಸರು ಪೊಲೀಸ್ ಠಾಣೆಯನ್ನು ಗುರಿಯಾಗಿಸಿಕೊಂಡು ನಡೆಸಲಾಗಿದ್ದ ಭಯೋತ್ಪಾದಕರ ಸಂಚನ್ನು ತಪ್ಪಿಸಿದ್ದಾರೆ ಮತ್ತು 690 ಗ್ರಾಂ ತೂಕದ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಜೊತೆಗೆ ಎಲೆಕ್ಟ್ರಾನಿಕ್ ಡಿಟೋನೇಟರ್, ಬ್ಯಾಟರಿ, ಟೈಮರ್ ಮತ್ತು ಕಬ್ಬಿಣದ ಪೆಟ್ಟಿಗೆಯನ್ನು ವಶಪಡಿಸಿಕೊಂಡಿದ್ದಾರೆ" ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಅವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆಗಸ್ಟ್ 15ಕ್ಕೆ ಉಗ್ರ ದಾಳಿಗೆ ಪಾಕ್ ಸಂಚು; ಪಂಜಾಬ್ ಪೊಲೀಸರಿಂದ ಃಐಖ ಏಜೆಂಟ್ ಬಂಧನ; ಚೀನಾದ 86–ಕ ಗ್ರೆನೇಡ್ ವಶಕ್ಕೆ

"ವಶಪಡಿಸಿಕೊಂಡ ನಂತರ, ಸ್ಫೋಟಕ ವಸ್ತುವನ್ನು ಸ್ಥಾಪಿತ ಭದ್ರತಾ ಪ್ರೋಟೋಕಾಲ್‌ಗಳ ಪ್ರಕಾರ ನಿರ್ವಹಿಸಲಾಗಿದೆ ಮತ್ತು ಬಾಂಬ್ ನಿಷ್ಕ್ರಿಯ ದಳವು ಅದನ್ನು ನಿಷ್ಕ್ರಿಯಗೊಳಿಸಿತು" ಎಂದು ಗೌರವ್ ಯಾದವ್ ಹೇಳಿದ್ದಾರೆ. ಅಮೃತಸರ ಗ್ರಾಮೀಣ ಪೊಲೀಸರು ರಾಷ್ಟ್ರವಿರೋಧಿ ಅಂಶಗಳ ಯೋಜನೆಯನ್ನು ವಿಫಲಗೊಳಿಸಿದ್ದಾರೆ ಮತ್ತು ಸಾರ್ವಜನಿಕ ಸುರಕ್ಷತೆಗೆ ಸಂಭಾವ್ಯ ಅಪಾಯವನ್ನು ತಪ್ಪಿಸಿದ್ದಾರೆ ಎಂದು ಅವರು ಹೇಳಿದರು.




# ಲಖನೌ: ಶಸ್ತ್ರಾಸ್ತ್ರ ತಪಾಸಣೆ ವೇಳೆ ಏರ್‌ಇಂಡಿಯಾ ಪ್ರಯಾಣಿಕನಿಂದ ಏಕಾಏಕಿ ಗುಂಡಿನ ದಾಳಿ




**ಲಖನೌ, ಆ.16:** ಮುಂಬೈಗೆ ತೆರಳುತ್ತಿದ್ದ ಏರ್‌ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಹತ್ತುವಾಗ ಶಸ್ತ್ರಾಸ್ತ್ರ ತಪಾಸಣೆ ನಡೆಸುವ ವೇಳೆ ಪ್ರಯಾಣಿಕನೊಬ್ಬ ಏಕಾಏಕಿ ಗುಂಡು ಹಾರಿಸಿರುವ ಘಟನೆ ವಾರಣಾಸಿ ಏರ್‌ಪೋರ್ಟ್‌ನಲ್ಲಿ ಭಾನುವಾರ ಬೆಳಗ್ಗೆ ನಡೆದಿದೆ.

ಬೆಳಗ್ಗೆ 9:30ರ ಸುಮಾರಿಗೆ ಘಟನೆ ನಡೆದಿದೆ. ತನ್ನ ಪತ್ನಿಯೊಂದಿಗೆ ಪ್ರಯಾಣಿಸುತ್ತಿದ್ದ ಪ್ರಯಾಣಿಕ ಶಸ್ತ್ರಾಸ್ತ್ರ ತಪಾಸಣೆ ವೇಳೆ ಏಕಾಏಕಿ ಗುಂಡು ಹಾರಿಸಿದ್ದಾನೆ. ಈ ವೇಳೆ ತಪಾಸಣೆ ನಡೆಸುತ್ತಿದ್ದ ಇಬ್ಬರು ಸ್ಕ್ರೀನಿಂಗ್ ಸಿಬ್ಬಂದಿ ಗಾಯಗೊಂಡಿದ್ದಾರೆ.

ಪ್ರಯಾಣಿಕನು ತನ್ನ ಬಳಿ ಶಸ್ತ್ರಾಸ್ತ್ರ ಇರುವುದಾಗಿ ಹೇಳಿಕೊಂಡಿದ್ದಾನೆ. ಬಳಿಕ ಏರ್ ಇಂಡಿಯಾ ಸಿಬ್ಬಂದಿ ತಪಾಸಣೆ ನಡೆಸಲು ಶುರು ಮಾಡಿದ್ದಾರೆ. ಈ ವೇಳೆ ಗನ್ ತೆಗೆದ ಪ್ರಯಾಣಿಕ ಒಂದು ಸುತ್ತು ಗುಂಡು ಹಾರಿಸಿದ್ದಾನೆ.

ಇದರಿಂದ ಇಬ್ಬರು ಸ್ಕ್ರೀನಿಂಗ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಅವರಿಬ್ಬರನ್ನೂ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವಿಮಾನ ನಿಲ್ದಾಣ ನಿರ್ದೇಶಕರು ಮಾಹಿತಿ ನೀಡಿದ್ದಾರೆ. ಘಟನೆ ಬಳಿಕ ಸ್ಥಳೀಯ ಪೊಲೀಸರಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದ್ದು, ತನಿಖೆ ನಡೆಯುತ್ತಿದೆ.

### ಅಭ್ಯರ್ಥಿ ಆಕ್ಷೇಪಣೆ ಸಲ್ಲಿಸುವ ಪ್ರತಿ ಪ್ರಶ್ನೆಗೆ 200 ಶುಲ್ಕ, ಆಕ್ಷೇಪಣೆ ಸಲ್ಲಿಸಲು ನಾಳೆ ಕೊನೇ ದಿನ

# 84 ವಿಷಯಗಳ ಪ್ರಾವಿಷನಲ್ ಕೀ ಉತ್ತರ ಪ್ರಕಟಿಸಿದ ಎನ್‌ಟಿಎ




ನವದೆಹಲಿ, ಆ.16: ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಜೂನ್ 2026ರ ಯುಜಿಸಿ–ನೆಟ್ ಪರೀಕ್ಷೆಯ 84 ವಿಷಯಗಳ ಪ್ರಾವಿಷನಲ್ ಕೀ ಉತ್ತರಗಳನ್ನು ಭಾನುವಾರ ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳಿಗೆ ಕೀ ಉತ್ತರಗಳನ್ನು ಪ್ರಶ್ನಿಸಲು ಅವಕಾಶ ಕಲ್ಪಿಸಲಾಗಿದ್ದು, ಆಗಸ್ಟ್ 16 ರಿಂದ ಆ.18ರ ರಾತ್ರಿ 11:59 ರವರೆಗೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ನೀಡಲಾಗಿದೆ ಎಂದು ಎನ್‌ಟಿಎ ತಿಳಿಸಿದೆ. ಅಭ್ಯರ್ಥಿಗಳು ಪ್ರಶ್ನಿಸುವ ಪ್ರತಿ ಪ್ರಶ್ನೆಗೆ 200 ರೂ. ಸೇವಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಶುಲ್ಕ ಪಾವತಿಗೆ ಆಗಸ್ಟ್ 18ರ ರಾತ್ರಿ 11:59 ಕೊನೆಯ ಸಮಯವಾಗಿದೆ.

ಉಳಿದ ಮೂರು ಪ್ರಮುಖ ವಿಷಯಗಳಾದ ಇಂಗ್ಲಿಷ್, ಕಾಮರ್ಸ್ ಮತ್ತು ಸಮಾಜಶಾಸ್ತ್ರ ಪ್ರಶ್ನೆಪತ್ರಿಕೆಗಳಲ್ಲಿನ ದೋಷಗಳ ಕುರಿತು ಬಂದ ದೂರುಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಈ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಾರ್ವಜನಿಕ ಪ್ರಕಟಣೆಯನ್ನು ಶೀಘ್ರದಲ್ಲೇ ಹೊರಡಿಸಲಾಗುವುದು ಎಂದು ಎನ್‌ಟಿಎ ಸ್ಪಷ್ಟಪಡಿಸಿದೆ. ಅಭ್ಯರ್ಥಿಗಳು ಕೇವಲ ಅಧಿಕೃತ ಎನ್‌ಟಿಎ ವೆಬ್‌ಸೈಟ್ ಮತ್ತು ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಮಾಹಿತಿಯನ್ನು ಮಾತ್ರ ಅವಲಂಬಿಸುವಂತೆ ಸೂಚಿಸಲಾಗಿದೆ. ಜಂಟಿ ಸಿಎಸ್‌ಐಆರ್ ಯುಜಿಸಿ–ನೆಟ್ ಜೂನ್ 2026 ಪರೀಕ್ಷೆಯ ಅಭ್ಯರ್ಥಿಗಳಿಗೂ ಪ್ರೊವಿಷನಲ್ ಕೀ ಉತ್ತರಗಳು ಹಾಗೂ ಆಕ್ಷೇಪಣೆ ಸಲ್ಲಿಸುವ ವಿಂಡೋ ಲಭ್ಯವಾಗಿದ್ದು, ಆಗಸ್ಟ್ 16 ರಿಂದ 18ರ ರಾತ್ರಿ 11:00 ಗಂಟೆಯೊಳಗೆ ಅಧಿಕೃತ ಪೋರ್ಟಲ್ ಮೂಲಕ ಆಕ್ಷೇಪಣೆ ಸಲ್ಲಿಸಬಹುದಾಗಿದೆ. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಅರ್ಹತೆ, ಕಿರಿಯ ಸಂಶೋಧನಾ ಫೆಲೋಶಿಪ್ ಹಾಗೂ ಪಿಎಚ್ಡಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಈ ರಾಷ್ಟ್ರಮಟ್ಟದ ಅರ್ಹತಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

# ಟಿಎಂಸಿ ಕಚೇರಿಯಲ್ಲಿ ಶವವಾಗಿ ಆಶೀಶ್ ಬ್ಯಾನರ್ಜಿ ಪತ್ತೆ



ಕೊಲ್ಕತ್ತಾ, ಆ.16: ಪಶ್ಚಿಮ ಬಂಗಾಳದ ಮಾಜಿ ಉಪ ಸಭಾಪತಿ ಹಾಗೂ ತೃಣಮೂಲ ಕಾಂಗ್ರೆಸ್ ಪಕ್ಷದ ಮಾಜಿ ಶಾಸಕ ಆಶೀಶ್ ಬ್ಯಾನರ್ಜಿ ಪಕ್ಷದ ಕಚೇರಿಯಲ್ಲೇ ಶವವಾಗಿ ಪತ್ತೆಯಾಗಿದ್ದಾರೆ. ಟಿಎಂಸಿ ನಾಯಕಿ ಹಾಗೂ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರ ಅತ್ಯಂತ ನಿಕಟವರ್ತಿ ಹಾಗೂ ಆಪ್ತರಾಗಿದ್ದರು. ಸುದೀರ್ಘ ಕಾಲದಿಂದ ತೃಣಮೂಲ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದ ಅವರು, ಪಕ್ಷದ ಸಂಘಟನೆ ಹಾಗೂ ಪಶ್ಚಿಮ ಬಂಗಾಳ ವಿಧಾನಸಭಾ ಕಾರ್ಯಕಲಾಪಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಅವರ ದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳೀಯ ಪೊಲೀಸರು ಹಾಗೂ ಹಿರಿಯ ರಾಜಕೀಯ ನಾಯಕರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಶವವನ್ನು ವಶಕ್ಕೆ ಪಡೆದಿರುವ ಪೊಲೀಸರು ಘಟನೆಗೆ ಸಂಬಂಧಿಸಿದಂತೆ ತನಿಖೆಯನ್ನು ಆರಂಭಿಸಿದ್ದು, ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವೇ ಸಾವಿಗೆ ನಿಖರ ಕಾರಣ ಏನೆಂಬುದು ತಿಳಿಯಲಿದೆ.

ಈ ಸುದ್ದಿ ಹರಡುತ್ತಿದ್ದಂತೆಯೇ ಟಿಎಂಸಿ ನಾಯಕರು ಮತ್ತು ಕಾರ್ಯಕರ್ತರು ತೀವ್ರ ಕಂಬನಿ ಮಿಡಿದಿದ್ದಾರೆ. ಅಸೀಶ್ ಬ್ಯಾನರ್ಜಿ ಅವರ ಸಾವು ಪಕ್ಷಕ್ಕೆ ತುಂಬಲಾರದ ನಷ್ಟ ಎಂದು ಹಲವು ನಾಯಕರು ಕಂಬನಿ ಮಿಡಿದಿದ್ದಾರೆ.

# ಕನ್ನಡ ಸಂಘ ಸಾಂತಾಕ್ರೂಜ್ ಸಂಭ್ರಮಿಸಿದ ೮೦ನೇ ಸ್ವಾತಂತ್ರ್ಯ ದಿನಾಚರಣೆ

## ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ಭಾವಿ ಪೀಳಿಗೆ ಸಿದ್ಧವಾಗಲಿ: ಸುಜಾತ ಆರ್.ಶೆಟ್ಟಿ



**ಮುಂಬಯಿ, ಆ.16:** ನಾವು ಇಂದು ರಾಷ್ಟ್ರದ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಹಿರಿಯರು ಮಾಡಿದ ಹೋರಾಟದಿಂದ ಬಹಳ ಹೆಮ್ಮೆಯಿಂದ ಆಚರಿಸುತ್ತೇವೆ. ನಮ್ಮ ದೇಶವು ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಕೃಷಿ, ಕ್ರೀಡೆ, ಅಂತರೀಕ್ಷಾ ಕ್ಷೇತ್ರ, ಡಿಜಿಟಲ್‌ನಲ್ಲೂ ಮುಂದುವರಿದು ವಿಶ್ವದ ಗಮನ ಸೆಳೆಯುವಲ್ಲಿ ಯಶಕಂಡಿದ್ದೇವೆ. ದೇಶದ ಕಾನೂನು ಪಾಲಿಸುವುದಲ್ಲದೆ ಸ್ವಚ್ಛತೆಯನ್ನೂ ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ದೇಶದ ಪ್ರತಿಯೊಬ್ಬ ಯುವಜನತೆಯೂ ರಾಷ್ಟ್ರದ ಏಳಿಗೆಗೆ ಶ್ರಮಿಸುವ ಸಂಕಲ್ಪ ಮಾಡಬೇಕಿದೆ. ನಮ್ಮ ಪೂರ್ವಜರು ತಂದಿತ್ತ ಈ ರಕ್ತತರ್ಪಿತ ಸ್ವಾತಂತ್ರ್ಯವನ್ನು ಗೌರವಿಸಿ, ಬಲಿಷ್ಠ ಹಾಗೂ ಸ್ವಾವಲಂಬಿ ಭಾರತ ನಿರ್ಮಾಣದಲ್ಲಿ ಭಾವಿ ಪೀಳಿಗೆಯ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ಸತ್ಯ, ಶಾಂತಿ ಮತ್ತು ಭಾವೈಕ್ಯತೆಯ ಮಾರ್ಗದಲ್ಲಿ ಸಾಗಿ, ತಂತ್ರಜ್ಞಾನ ಹಾಗೂ ಜ್ಞಾನದ ಕ್ಷೇತ್ರದಲ್ಲಿ ದೇಶವನ್ನು ವಿಶ್ವಗುರುವಿನ ಸ್ಥಾನಕ್ಕೇರಿಸುವುದು ನಮ್ಮೆಲ್ಲರ ಆಶಯವಾಗಲಿ ಎಂದು ಕನ್ನಡ ಸಂಘ ಸಾಂತಾಕ್ರೂಜ್ ಸುಜಾತ ಆರ್.ಶೆಟ್ಟಿ ತಿಳಿಸಿದರು.

ಸಂಘದ ಪದಾಧಿಕಾರಿಗಳು, ಸದಸ್ಯರು, ನೆರೆಹೊರೆಯ ನಾಗರಿಕರು ಮತ್ತು ಮಕ್ಕಳ ಉಪಸ್ಥಿತಿಯಲ್ಲಿ ಸುಜಾತ ಆರ್.ಶೆಟ್ಟಿ ರಾಷ್ಟ್ರಧ್ವಜವನ್ನು ಆರಿಸಿದರು. ಉಪಸ್ಥಿತರು ರಾಷ್ಟ್ರಧ್ವಜಕ್ಕೆ ಗೌರವ ವಂದನೆ ಸಲ್ಲಿಸಿ ರಾಷ್ಟ್ರ ಗೀತೆಯೊಂದಿಗೆ ರಾಷ್ಟ್ರಪ್ರೇಮ ಮೆರೆದರು. ಬಳಿಕ ಅಧ್ಯಕ್ಷೀಯ ಭಾಷಣವನ್ನುದ್ದೇಶಿಸಿ ಸುಜಾತ ಶೆಟ್ಟಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಗದ ಉಪಾಧ್ಯಕ್ಷ ಭಜಂಗ ಆರ್.ಶೆಟ್ಟಿ, ಗೌರವ ಕೋಶಾಧಿಕಾರಿ ಸುಧಾಕರ್ ಉಚ್ಚಿಲ್, ಗೌರವ ಜೊತೆ ಕೋಶಾಧಿಕಾರಿ ಬನ್ನಂಜೆ ರವೀಂದ್ರ ಅಮೀನ್, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷೆ ವನಿತಾ ವೈ.ನೋಂಡಾ, ಶಿಕ್ಷಣ ಸಮಿತಿ ಕಾರ್ಯಾಧ್ಯಕ್ಷ ವಿಜಯಕುಮಾರ್ ಕೆ.ಕೋಟ್ಯಾನ್, ಕಾರ್ಯದರ್ಶಿ ಶಕಿಲಾ ಪಿ.ಶೆಟ್ಟಿ, ಶಾಲಿನಿ ಜಿ.ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಸುಮಿತ್ರಾ ಜಿ.ದೇವಾಡಿಗ, ಲಿಂಗಪ್ಪ ಬಿ.ಅಮೀನ್, ಗಿರೀಶ್ ಶೆಟ್ಟಿ, ರೇಖಾ ಆರ್.ಶೆಟ್ಟೀ, ಸೇರಿದಂತೆ ಪರಿಸರದ ಜನರು, ಮಕ್ಕಳು ಮತ್ತನೇಕರು ಹಾಜರಿದ್ದರು.

ಧ್ವಜ ವಂದನೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಆದಿ ಗೊಂಡಿತು. ಗೌರವ ಜೊತೆ ಕಾರ್ಯದರ್ಶಿ ಚಂದ್ರಹಾಸ ಜೆ.ಕೋಟ್ಯಾನ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ವನಿತಾ ವೈ.ನೋಂಡಾ ವಂದಿಸಿದರು.

# ಇ–ಕ್ಯಾಬಿನೆಟ್ ವ್ಯವಸ್ಥೆ ಜಾರಿಗೆ ದೆಹಲಿ ಸರ್ಕಾರ ಸಜ್ಜು

■ ಒಂದನೇ ಪುಟದಿಂದ...

ಸಿಎಂ ಪ್ರಕಾರ, ಆಡಳಿತದಲ್ಲಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಇಂದಿನ ಅಗತ್ಯವಾಗಿದೆ. ಪ್ರಕ್ರಿಯೆಗಳನ್ನು ಸರಳೀಕರಿಸುವ, ವೇಗವಾಗಿ ನಿರ್ಧಾರ ತೆಗೆದುಕೊಳ್ಳಲು ನೆರವಾಗುವ ಮತ್ತು ಅನುಷ್ಠಾನದ ನಿರಂತರ ಮೇಲ್ವಿಚಾರಣೆಗೆ ಅವಕಾಶ ನೀಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ತಮ್ಮ ಸರ್ಕಾರದ ಉದ್ದೇಶವಾಗಿದೆ.

ಈ ನೂತನ ವ್ಯವಸ್ಥೆಯ ಮೂಲಕ, ಸಂಪುಟ ಟಿಪ್ಪಣಿಗಳು, ಕಾರ್ಯಸೂಚಿಗಳು (ಅಜೆಂಡಾ) ಮತ್ತು ಸಭೆಯ ನಡಾವಳಿಗಳು ಸೇರಿದಂತೆ ಸಂಪುಟ ಸಭೆಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸುರಕ್ಷಿತ ಡಿಜಿಟಲ್ ಮಾಧ್ಯಮದ ಮೂಲಕ ಸಿದ್ಧಪಡಿಸಬಹುದು, ಹಂಚಿಕೊಳ್ಳಬಹುದು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಲಭ್ಯವಾಗುವಂತೆ ಮಾಡಬಹುದು.

ಈ ವ್ಯವಸ್ಥೆಯ ಪ್ರಮುಖ ವೈಶಿಷ್ಟ್ಯವೆಂದರೆ, ಪ್ರತಿಯೊಬ್ಬ ಸಚಿವರು ಮತ್ತು ಅಧಿಕಾರಿಗೆ ಅವರ ಜವಾಬ್ದಾರಿಗಳ ಆಧಾರದ ಮೇಲೆ ಬೇರೆ ಬೇರೆ ಹಂತದ ಡಿಜಿಟಲ್ ಪ್ರವೇಶಾವಕಾಶವನ್ನು (ಆಕ್ಸೆಸ್) ನೀಡಬಹುದು ಎಂದು ಸಿಎಂ ತಿಳಿಸಿದರು.

ಸಚಿವರು, ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳು ಮತ್ತು ಇಲಾಖೆಯ ಕಾರ್ಯದರ್ಶಿಗಳು ಸೇರಿದಂತೆ ಎಲ್ಲಾ ಅಧಿಕೃತ ಅಧಿಕಾರಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಸಂಬಂಧಿತ ದಾಖಲೆಗಳನ್ನು ಮಾತ್ರ ವೀಕ್ಷಿಸಲು ಸಾಧ್ಯವಾಗುತ್ತದೆ.

ಈ ವ್ಯವಸ್ಥೆಯ ಮತ್ತೊಂದು ಪ್ರಮುಖ ಪ್ರಯೋಜನವನ್ನು ಎತ್ತಿ ತೋರಿಸಿದ ಗುಪ್ತಾ, ಯಾವುದೇ ಸಂಪುಟ ನಿರ್ಧಾರದ ಕುರಿತು ಸಂಬಂಧಪಟ್ಟ ಇಲಾಖೆಗಳು ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಬಹುದು ಎಂದು ಹೇಳಿದರು.

ಇದು ನಿರ್ಧಾರಗಳನ್ನು ಸಮಯಕ್ಕೆ ಸರಿಯಾಗಿ ಅನುಷ್ಠಾನಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಸಭೆಯ ಸಮಯದಲ್ಲಿ, ದೇಶದ ವಿವಿಧ ರಾಜ್ಯಗಳಲ್ಲಿ ಜಾರಿಗೆ ತರಲಾದ ಇ–ಕ್ಯಾಬಿನೆಟ್ ವ್ಯವಸ್ಥೆಗಳ ಅನುಭವ ಮತ್ತು ಕಾರ್ಯವೈಖರಿಯ ಬಗ್ಗೆ ತಜ್ಞರು ಸಿಎಂ ಗುಪ್ತಾ ಅವರಿಗೆ ಮಾಹಿತಿ ನೀಡಿದರು. ಹಲವಾರು ರಾಜ್ಯಗಳಲ್ಲಿ ಡಿಜಿಟಲ್ ವ್ಯವಸ್ಥೆಗಳನ್ನು ಯಶಸ್ವಿಯಾಗಿ ಬಳಸಲಾಗುತ್ತಿದ್ದು, ಆಡಳಿತದ ವೇಗ, ದಕ್ಷತೆ ಮತ್ತು ಪಾರದರ್ಶಕತೆಯನ್ನು ಸುಧಾರಿಸುವಲ್ಲಿ ಅವು ಧನಾತ್ಮಕ ಫಲಿತಾಂಶಗಳನ್ನು ನೀಡಿವೆ ಎಂದು ಅವರು ತಿಳಿಸಿದರು. ಲಭ್ಯವಿರುವ ಅತ್ಯುತ್ತಮ ತಾಂತ್ರಿಕ ಪರಿಹಾರಗಳನ್ನು ಅಧ್ಯಯನ ಮಾಡುವ ಮೂಲಕ ರಾಜಧಾನಿಯಲ್ಲಿ ಆಧುನಿಕ, ಸುರಕ್ಷಿತ ಮತ್ತು ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ದೆಹಲಿ ಸರ್ಕಾರವು ನಿರಂತರವಾಗಿ ಶ್ರಮಿಸುತ್ತಿದೆ ಎಂದು ಅವರು ಸೇರಿಸಿದರು.

# ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಧ್ಯೇಯದೊಂದಿಗೆ ಅರ್ಥಪೂರ್ಣವಾಗಿಸಿದ ಆಚರಣೆ

## ತುಳು ಸಂಘ ಬರೋಡಾ ಮಹಿಳಾ ವಿಭಾಗ ಸಂಭ್ರಮಿಸಿದ ೮೦ನೇ ಸ್ವಾತಂತ್ರ್ಯೋತ್ಸವ




**ಮುಂಬಯಿ, ಆ.16:** ಇಂಡಿಯಾ ಬುಲ್ಸ್ ಮೆಘಾ ಮಾಲ್‌ನಲ್ಲಿ ತುಳು ಸಂಘ ಬರೋಡಾ ನಿರ್ಮಿತ ವಿಶ್ವದ ಪ್ರಪ್ರಥಮ ಹಾಗೂ ಏಕೈಕ ತುಳು ಚಾವಡಿಯಲ್ಲಿ ಗುಜರಾತ್‌ನಲ್ಲಿನ ತುಳು ಸಂಘ ಬರೋಡ ಇದರ ಮಹಿಳಾ ವಿಭಾಗವು ಭಾರತ ರಾಷ್ಟ್ರದ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಇಂದಿಲ್ಲಿ ಶನಿವಾರ 'ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ' ಎಂಬ ವಿಶಿಷ್ಟ ಆಶಯದೊಂದಿಗೆ ಅರ್ಥಪೂರ್ಣವಾಗಿಸಿ ವಿಜೃಂಭನೆಯಿಂದ ಸಂಭ್ರಮಿಸಿತು.

ದಿಶಾನ್ ದಿನಕರ್ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟ ಕಾರ್ಯಕ್ರಮದಲ್ಲಿ ಕು। ದಿಶಾ ಸಾಲಿಯಾನ್ ಹಾಗೂ ಕು। ದೀಪ್ತಿ ರತ್ನಾಕರ್ ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿದ್ದರು.

ತುಳು ಸಂಘ ಬರೋಡಾ ಗೌರವಾಧ್ಯಕ್ಷ ದಯಾನಂದ ಬೋಂಟ್ರ, ಅಧ್ಯಕ್ಷ ಶಶಿಧರ್ ಬಿ.ಶೆಟ್ಟಿ ಗುರುವಾಯನಕೆರೆ ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನೀಡಿ ಮಕ್ಕಳಿಗೆ ದೇಶಭಕ್ತಿ, ಸಂಸ್ಕೃತಿ, ಉತ್ತಮ ಮೌಲ್ಯಗಳು ಮತ್ತು ಸಮಾಜದ ಜವಾಬ್ದಾರಿಯ ಮಹತ್ವವನ್ನು ತಿಳಿಸಿದರು. ಆಧುನಿಕ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಜಾಲತಾಣಗಳು ಮಾನವನ ದೈನಂದಿನ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿದ್ದು, ಇವು ಮಾಹಿತಿ ಹಂಚಿಕೆ ಮತ್ತು ಜಾಗತಿಕ ಸಂಪರ್ಕಕ್ಕೆ ಅತ್ಯಂತ ಪ್ರಯೋಜನಕಾರಿ ಆಗಿದ್ದರೂ, ಅತಿಯಾದ ಬಳಕೆಯು ಮಾನಸಿಕ ಒತ್ತಡ ಹಾಗೂ ಸಮಯ ವ್ಯರ್ಥಕ್ಕೆ ಕಾರಣವಾಗಿ ಹಾನಿಕಾರಕವಾಗಿಯೂ ಪರಿಣಮಿಸುತ್ತಿವೆ. ಆದ್ದರಿಂದ ಎಲ್ಲರೂ ನಮ್ಮ ಮೂಲ ಸಂಸ್ಕೃತಿಯನ್ನೂ ಪಾಲಿಸಿ ಜೀವನ ಸಾರ್ಥಕ ಪಡಿಸಿಕೊಳ್ಳುವತ್ತ ಗಮನ ಹರಿಸಬೇಕು.

ಈ ಎಲ್ಲಾ ತಾಂತ್ರಿಕ ಮತ್ತು ಕೌಟುಂಬಿಕ ಒತ್ತಡಗಳ ನಡುವೆ, ಮಧ್ಯವಯಸ್ಕ ಮಹಿಳೆಯರು ಮತ್ತು ಪುರುಷರು ತಮ್ಮ ಜೀವನ ಪಯಣವನ್ನು ಸುಗಮ ಹಾಗೂ ಸಕ್ರಿಯವಾಗಿರಿಸಿಕೊಳ್ಳಲು ಪೌಷ್ಟಿಕ ಆಹಾರ ಸೇವನೆ, ನಿಯಮಿತ ದೈಹಿಕ ವ್ಯಾಯಾಮ, ವಾರ್ಷಿಕ ವೈದ್ಯಕೀಯ ತಪಾಸಣೆ ಮತ್ತು ಮಾನಸಿಕ ಆರೋಗ್ಯದ ಕಡೆಗೆ ವಿಶೇಷ ಗಮನ ಹರಿಸುವುದು ಅತ್ಯಂತ ಕಡ್ಡಾಯವಾಗಿದೆ ಎಂದು ದಯಾನಂದ ಬೋಂಟ್ರ ತಿಳಿಸಿದರು.

ಇಂದಿನ ವಾಣಿಜ್ಯ ಮತ್ತು ಉದ್ಯಮ ರಂಗದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅಳವಡಿಕೆಯು ಕಾರ್ಯಕ್ಷಮತೆ, ನಿಖರತೆ ಹಾಗೂ ಉತ್ಪಾದಕತೆಯನ್ನು ಅಭೂತಪೂರ್ವ ಮಟ್ಟದಲ್ಲಿ ಹೆಚ್ಚಿಸುತ್ತಿದ್ದು, ಉದ್ಯೋಗ ಮಾರುಕಟ್ಟೆಯಲ್ಲಿ ತರುವ ಬದಲಾವಣೆಗಳು ಮತ್ತು ವ್ಯಕ್ತಿಗತ ದತ್ತಾಂಶದ ಗೌಪ್ಯತೆಯ ಮೇಲಿನ ಸವಾಲುಗಳು ಜನರ ನಿತ್ಯಜೀವನದಲ್ಲಿ ಕೆಲವೊಂದು ಆತಂಕಗಳನ್ನು ಸೃಷ್ಟಿಸಿವೆ. ಈ ಬಗ್ಗೆ ಜಾಗರುಕರಾಗಿ ಸ್ವಭವಿಷ್ಯದತ್ತ ಸ್ವತಃ ಹುಷಾರುವಾಗಿರಬೇಕು. ಸ್ವಗೌರವದಂತೆ ರಾಷ್ಟ್ರಪ್ರೇಮವೂ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿರಿ. ಮುಂದಿನ ಪೀಳಿಗೆಗೆ ಹಸುಗೂಡಿದ ಮತ್ತು ಸಮೃದ್ಧ ಭಾರತವನ್ನು ಕೊಡುಗೆಯಾಗಿ ನೀಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಲಿ ಎಂದು ಶಶಿಧರ್ ಶೆಟ್ಟಿ ಮನವರಿಸಿದರು.

ತುಳುಸಂಘದ ಮಹಿಳಾ ವಿಭಾಗಧ್ಯಕ್ಷೆ ಶರ್ಮಿಳಾ ಎಂ.ಜೈನ್ ಹಾಗೂ ಕಾರ್ಯದರ್ಶಿ ಬೇಬಿ ಗಣೇಶ್ ಶೆಟ್ಟಿ ಅವರ ಮುಂದಾಳುತ್ವಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಹಾಗೂ ಮಕ್ಕಳಿಗಾಗಿ ಛದ್ಮವೇಷ ಸ್ಪರ್ಧೆ, ದೇಶಭಕ್ತಿ ಗೀತೆ ಗಾಯನ ಸ್ಪರ್ಧೆ, ತುಳು ಭಾಷಣ ಸ್ಪರ್ಧೆಗಳ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದ್ದು ವಿಜೇತರಿಗೆ ಪಾರಿತೋಷಕಗಳನ್ನು ನೀಡಿ ಗೌರವಿಸಲಾಯಿತು.

ಮಹಿಳಾ ವಿಭಾಗದ ಸದಸ್ಯೆಯರಾದ ಪ್ರಮೀಳಾ ಶೆಟ್ಟಿ, ಮಂಜುಳಾ ಗೌಡ, ಮನೋಹರಿ ಶೆಟ್ಟಿ, ಜಯಶ್ರೀ ಜಿನ್‌ರಾಜ್, ಕವಿತಾಗೌಡ, ಗಾನವಿಗೌಡ, ಹಾಗೂ ಕಾರ್ತಿಕ್‌ಗೌಡ, ರವೀಂದ್ರ ಶೆಟ್ಟಿ ಮತ್ತು ಮದನ್ ಗೌಡ ಮೂಡಿಗೆರೆ ಅವರ ಸೇವೆ ಮತ್ತು ಸಹಕಾರವನ್ನು ವಿಶೇಷವಾಗಿ ಸ್ಮರಿಸಲಾಯಿತು.

ಮಕ್ಕಳ ಪ್ರತಿಭೆ, ದೇಶಭಕ್ತಿ ಹಾಗೂ ತುಳು ಸಂಸ್ಕೃತಿಯನ್ನು ಒಂದೇ ವೇದಿಕೆಯಲ್ಲಿ ಸಂಭ್ರಮಿಸಿದ ಈ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ತುಳು ಸಂಘ ಬರೋಡಾದ ಈ ವಿಶಿಷ್ಟ ಆಚರಣೆಯು ಮಕ್ಕಳಲ್ಲಿ ದೇಶಪ್ರೇಮದ ಜೊತೆಗೆ ನಮ್ಮ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಅಭಿಮಾನವನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು ಎಂದು ಶರ್ಮಿಳಾ ಎಂ.ಜೈನ್ ತಿಳಿಸಿದರು. ಕು। ಮಾನ್ಯ ಗೌಡ ಹಾಗೂ ಕು। ಅವಣಿ ಕೋಟ್ಯಾನ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕು। ರಿತಿ ಶೆಟ್ಟಿ ವಂದಿಸಿದರು.

ಕೆಐಎಸ್‌ಎಸ್, ಕೆಐಐಟಿಯಲ್ಲಿ ೮೦ ನೇ ಸ್ವಾತಂತ್ರ್ಯ ದಿನದ ಸಂಭ್ರಮ

# ಬಡತನ, ಅನಕ್ಷರತೆಯಿಂದ ಸ್ವಾತಂತ್ರ್ಯ ಬೇಕಿದೆ ಹಿರಿಯ ಪತ್ರಕರ್ತ ವಿಶ್ವೇಶ್ವರ್ ಭಟ್ ಅಭಿಮತ

**ಭುವನೇಶ್ವರ, ಆಗಸ್ಟ್ 15:** ಇಲ್ಲಿನ ಕಳಿಂಗಾ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ–ಡಿಯು) ಹಾಗೂ ಕಳಿಂಗಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್(ಕೆಐಎಸ್‌ಎಸ್) ನ ವಿವಿಧ ಕ್ಯಾಂಪಸ್‌ಗಳಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮ, ಸಡಗರದಿಂದ ಆಚರಿಸಲಾಯಿತು.



ಕೆಐಐಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಸರನ್ಜಿತ್ ಸಿಂಗ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ರಾಷ್ಟ್ರ ಧ್ವಜಾರೋಹಣ ಮಾಡಿದರು. ಕೆಐಐಟಿ ಸಿಬ್ಬಂದಿ, ಎನ್ಸಿಸಿ ಕೆಡೆಟ್‌ಗಳು ಮತ್ತು ಭದ್ರತಾ ವಿಭಾಗದ ಸದಸ್ಯರು ಉಪಸ್ಥಿತರಿದ್ದರು.

**ಕಿಸ್‌ನಲ್ಲಿ ಮುಖ್ಯ ಅತಿಥಿಯಾಗಿದ್ದ ವಿಶ್ವೇಶ್ವರ ಭಟ್:** ಕಿಸ್‌ನಲ್ಲಿ ನಡೆದ ಸ್ವಾತಂತ್ರ್ಯ ದಿನದ ಸಮಾರಂಭದಲ್ಲಿ ಹಿರಿಯ ಪತ್ರಕರ್ತ, ವಿಶ್ವವಾಣಿ ಹಾಗೂ ಪ್ರವಾಸಿ ಪ್ರಪಂಚದ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಧ್ವಜಾರೋಹಣ ನೆರವೇರಿಸಿದ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಈ ವೇಳೆ ಮಾತನಾಡಿದ ಭಟ್ ಅವರು, "ನಾವೀಗ ಬಡತನ ಮತ್ತು ಅನಕ್ಷರತೆಯಿಂದ ಮುಕ್ತಿ ಪಡೆಯಬೇಕು ಹಾಗೂ ಶಿಕ್ಷಣದ ಮೂಲಕ ಸ್ವಾತಂತ್ರ್ಯವನ್ನು ಸಾಧಿಸಬೇಕು. ಕೆಐಐಟಿ ಮತ್ತು ಕಿಸ್ ಸಂಸ್ಥೆಗಳ ಸ್ಥಾಪಕರಾದ ಡಾ. ಅಚ್ಯುತ ಸಮಂತ ಅವರ ಅಪಾರ ಬದ್ಧತೆ ಮತ್ತು ಸ್ಫೂರ್ತಿಯನ್ನು ನಾನು ಯಾವಾಗಲೂ ನೆನಪಿಸಿಕೊಳ್ಳುತ್ತೇನೆ.

ಸಮಂತ ಅವರು ಅನೇಕ ತಲೆಮಾರುಗಳಿಗೆ ಸ್ಫೂರ್ತಿಯಾಗಿದ್ದಾರೆ. ನಿಮ್ಮ ಭವಿಷ್ಯವು ಅತ್ಯುತ್ತಮ ಹಾಗೂ ಸುರಕ್ಷಿತ ಕೈಗಳಲ್ಲಿದೆ ಎಂದರು.

'ಸಮಂತ ಅವರು ಸರಳತೆಯ ಸಾಕಾರಮೂರ್ತಿ. ಅವರ ಕಾರ್ಯ ವೈಖರಿ ಮತ್ತು ದೂರದೃಷ್ಟಿ ಇಡೀ ದೇಶಕ್ಕೇ ಮಾದರಿ. ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಯನ್ನು ಇಲ್ಲಿ ಆಚರಿಸಿದ್ದು ನನ್ನ ಜೀವನದ ಅವಿಸ್ಮರಣೀಯ ಅನುಭವ ಗಳಲ್ಲಿ ಒಂದು. ನೈಜ ಸ್ವಾತಂತ್ರ್ಯ ಎಂದರೆ ಕೇವಲ ರಾಜಕೀಯ ಮುಕ್ತಿಯಲ್ಲ, ಅದು ಪ್ರತಿಯೊಬ್ಬ ದೀನ–ದಲಿತನಿಗೂ ಸಿಗುವ ಶಿಕ್ಷಣ ಮತ್ತು ಆರ್ಥಿಕ ಸಮಾನತೆ ಎಂಬುದನ್ನು ಈ ಕ್ಯಾಂಪಸ್ ಜಗತ್ತಿಗೆ ಸಾರುತ್ತಿದೆ? ಎಂದು ಬಣ್ಣಿಸಿದರು.

* ಶಿಕ್ಷಣದ ಮೂಲಕ ಸ್ವಾತಂತ್ರ್ಯವನ್ನು ಸಾಧಿಸಬೇಕು
* ಡಾ. ಅಚ್ಯುತ ಸಮಂತ ಅವರ ಬದ್ಧತೆ, ಸ್ಫೂರ್ತಿ ಮಾದರಿ
* ಪ್ರಗತಿಶೀಲ ರಾಷ್ಟ್ರದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು

**ದೇಶದಲ್ಲಿ ವಿದ್ಯಾರ್ಥಿಗಳದ್ದೇ ಪ್ರಮುಖ ಪಾತ್ರ: ಡಾ. ಸಮಂತ:** "ನಮ್ಮ ಪ್ರಗತಿಯೇ ನಿಮ್ಮ ಪ್ರಗತಿ. ನೀವು ಪ್ರಗತಿ ಸಾಧಿಸುವವರೆಗೂ ನಮಗೆ ಸಂತೋಷವಾಗಲಿ ಅಥವಾ ತೃಪ್ತಿ ಸಿಗುವುದಿಲ್ಲ. ಭಾರತ ಇಂದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಇದರಲ್ಲಿ ನೀವೆಲ್ಲ ಪ್ರಮುಖ ಪಾತ್ರ ವಹಿಸಲಿದ್ದೀರಿ," ಎಂದು ಡಾ. ಅಚ್ಯುತ ಸಮಂತ ಅವರು ಹೇಳಿದರು.

ಕಿಸ್ ಕಳೆದ 35 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ನಮ್ಮ ಈ ಸಂಸ್ಥೆಯನ್ನು ಅತ್ಯುತ್ತಮ ಮಾಡುವ ಪ್ರಯತ್ನ ನಿರಂತರವಾಗಿರಲಿದೆ ಎಂದರು.

ಕಿಸ್ ಕಾರ್ಯದರ್ಶಿ ಆರ್. ಎನ್. ಡ್ಯಾಶ್, ಸಹ–ಕುಲಪತಿ ಪ್ರೊ. ರಾಜು ಕೆ. ಡಿ., ಕುಲಸಚಿವ ಜ್ಞಾನ ರಂಜನ್ ಮೊಹಂತಿ, ಹಿರಿಯ ಮಹಾನಿರ್ದೇಶಕ ಡಾ. ದೇಬಾಶಿಶ್ ಬಂಡೋಪಾಧ್ಯಾಯ ಮತ್ತು ಕಿಸ್ ವಿಶ್ವವಿದ್ಯಾಲಯದ ಕುಲಸಚಿವ ಡಾ. ಪ್ರಶಾಂತ್ ರೌತ್ರೇ ಸೇರಿದಂತೆ ಇತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕಿಮ್ಸ್‌ನಲ್ಲಿ ನಡೆದ ಸಮಾರಂಭದಲ್ಲಿ ಉಪಕುಲಪತಿ ಪ್ರೊ. ಸಿ.ಬಿ.ಕೆ. ಮೊಹಂತಿ ಅವರು ಧ್ವಜಾರೋಹಣ ನೆರವೇರಿಸಿದರು.

ಕೆಐಐಟಿ ಇಂಟರ್ ನ್ಯಾಷನಲ್ ಸ್ಕೂಲ್ ಪ್ರಾಂಶುಪಾಲ ಡಾ. ಸಂಜಯ್ ಸುವಾರ್ ಹಾಗೂ ಕೆಐಐಟಿ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ದಿಲೀಪ್ ಕುಮಾರ್ ತ್ರಿಪಾಠಿ ಅವರು ರಾಷ್ಟ್ರಧ್ವಜಾರೋಹಣ ಮಾಡಿದರು.

ವಿದ್ಯಾರ್ಥಿಗಳ ಮೆರವಣಿಗೆಯೊಂದಿಗೆ ಸಂಭ್ರಮಾಚರಣೆಗಳು ಮುಕ್ತಾಯಗೊಂಡವು. ಇದರ ನಂತರ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



ಚಾಮರಾಜನಗರ ಜಿಲ್ಲೆಯ ಹನೂರಿನಲ್ಲಿ ಭಾನುವಾರ ಅರಣ್ಯದೊಳಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಶಂಕಿತ ಬೇಟೆಗಾರರು ಸಾವನ್ನಪ್ಪಿದ ನಂತರ ಗ್ರಾಮಸ್ಥರು ಕುಟುಂಬಗಳಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

# ಕಳೆದ 24 ಗಂಟೆಯಲ್ಲಿ ಆಗುಂಬೆಯಲ್ಲಿ 52 ಮಿ.ಮೀ. ಮಳೆ

**ಬೆಂಗಳೂರು, ಆ.16:** ಕರ್ನಾಟಕದ ಚಿರಾಪುಂಜಿ ಎಂದೇ ಕರೆಯಿಸಿಕೊಳ್ಳುವ ಮಲೆನಾಡಿನ ಶಿವಮೊಗ್ಗದ ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಉತ್ತಮ ಮಳೆಯಾಗಿದೆ. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ ಬಿಡುಗಡೆ ಮಾಡಿರುವ ಮಾಹಿತಿ ಪ್ರಕಾರ, ಕಳೆದ 24 ಗಂಟೆ ಅವಧಿಯಲ್ಲಿ ಆಗುಂಬೆಯಲ್ಲಿ 52 ಮಿ.ಮೀ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ನಡುಮಸ್ಕೇರಿಯಲ್ಲಿ 46.5 ಮಿ.ಮೀ, ಹೊನ್ನಾವರ ತಾಲ್ಲೂಕಿನ ಹಿರೇಯಂಗಡಿಯಲ್ಲಿ 45 ಮಿ.ಮೀ, ನಾಗರ ಬಸ್ತಿಕೇರಿಯಲ್ಲಿ 43.5 ಮಿ.ಮೀ, ಅಂಕೋಲಾದ ತಾಲ್ಲೂಕಿನ ಅಗರಕ ಗೋಣದಲ್ಲಿ 43 ಮಿ.ಮೀ ಮಳೆಯಾಗಿದೆ.

ಹೊನ್ನಾವರ ತಾಲ್ಲೂಕಿನ ಬಳಕೂರು ಹಾಗೂ ಸಿದ್ದಾಪುರ ತಾಲ್ಲೂಕಿನ ನೀಲಕುಂದದಲ್ಲಿ 42.5 ಮಿ.ಮೀ, ಅಂಕೋಲಾ ತಾಲ್ಲೂಕಿನ ಬೇಳಂಬೂರಿನಲ್ಲಿ 42 ಮಿ.ಮೀ, ಕುಮಟಾ ತಾಲ್ಲೂಕಿನ ಹನೇಹಳ್ಳಿಯಲ್ಲಿ



41.5 ಮಿ.ಮೀ, ಅಂಕೋಲಾ ತಾಲ್ಲೂಕಿನ ಸಗಡಗೇರಿಯಲ್ಲಿ 41 ಮಿ.ಮೀ, ಕಾರವಾರ ತಾಲ್ಲೂಕಿನ ವೈಲವಾಡ, ಕುಮಟಾ ತಾಲ್ಲೂಕಿನ ಹಿರೇಗುತ್ತಿ ಹಾಗೂ ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ಕಂಬದಕೋಣೆಯಲ್ಲಿ ತಲಾ 40 ಮಿ.ಮೀ ಹೊನ್ನಾವರ ಸಾಲ್ಕೋಡದಲ್ಲಿ 38.5 ಮಿ.ಮೀ, ಜಾಲವಳ್ಳಿ 38 ಮಿ.ಮೀ, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಶಿರಾಡಿ ಹಾಗೂ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನಡಪಾಲುವಿನಲ್ಲಿ ತಲಾ 37.5 ಮಿ.ಮೀ ಮಳೆಯಾಗಿದೆ. ಅಂಕೋಲಾ ತಾಲ್ಲೂಕಿನ ಶೆಟಗೇರಿಯಲ್ಲಿ 36 ಮಿ.ಮೀ, ಬೈಂದೂರು ತಾಲ್ಲೂಕಿನ ಕೆರಗಾಲುವಿ 35.5 ಮಿ.ಮೀ, ಅಂಕೋಲಾ–ಹಟ್ಟಿಕೇರಿಯಲ್ಲಿ 35 ಮಿ.ಮೀ, ಸಿದ್ದಾಪುರ ತಾಲ್ಲೂಕಿನ ದೊಡ್ಮನೆಯಲ್ಲಿ 34.5 ಮಿ. ಮೀ ಅಂಕೋಲಾ ತಾಲ್ಲೂಕಿನ ಬೊಬ್ರವಾಡದಲ್ಲಿ 33.5 ಮಿ. ಮೀ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯ ನಗರದಲ್ಲಿ 33 ಮಿ.ಮೀ, ಹೊನ್ನಾವರ ಇಡಗುಂಜಿಯಲ್ಲಿ 30.5 ಮಿ.ಮೀ, ಉಡುಪಿ–ಬೈಂದೂರು ತಾಲ್ಲೂಕಿನ ಉಪ್ಪುಂದದಲ್ಲಿ 30 ಮಿ.ಮೀ ಮಳೆಯಾಗಿದೆ.

# ರಾಜ್ಯದ ವಿವಿಧೆಡೆ ಮುಂದುವರಿದ ಮಳೆ ಜಲಾಶಯಗಳ ಮಟ್ಟದಲ್ಲಿ ಭಾರೀ ಸುಧಾರಣೆ

**ಬೆಂಗಳೂರು, ಆ.16:** ರಾಜ್ಯದ ವಿವಿಧೆಡೆ ಧಾರಾಕಾರ ಮಳೆ ಮುಂದುವರಿದಿದೆ. ಆಗಸ್ಟ್ 21ರವರೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಮಳೆ ಇರಲಿದೆ. ಆಗಸ್ಟ್ 21ರ ವರೆಗೆ ಕರ್ನಾಟಕವೂ ಸೇರಿದಂತೆ ಭಾರತದ 14 ರಾಜ್ಯಗಳಲ್ಲಿ ಭಾರೀ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಅಲ್ಲಲ್ಲಿ ಉತ್ತಮ ಮಳೆ ಆಗುತ್ತಿರುವುದರಿಂದ ಕರ್ನಾಟಕದ ಪ್ರಮುಖ ಜಲಾಯಶಗಳಲ್ಲಿ ನೀರಿನ ಮಟ್ಟವು ಸುಧಾರಿಸಿದೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ವಿವಿಧ ಭಾಗದಲ್ಲಿ ಉತ್ತಮ ಮಳೆ ಆಗುತ್ತಿದೆ. ಆಗ್ನೇಯ ಜಾರ್ಖಂಡ್ ಮತ್ತು ನೆರೆಹೊರೆ ಪ್ರದೇಶಗಳಲ್ಲಿ ಕಡಿಮೆ ಒತ್ತಡದ ಪ್ರದೇಶ ಮತ್ತು ಪ್ರದೇಶವು ಅದೇ ಪ್ರದೇಶದಲ್ಲಿ ಮುಂದುವರೆದಿದೆ. ಸಂಬಂಧಿತ ಆವರ್ತನ ಪರಿಚಲನೆಯು ಸರಾಸರಿ ಸಮುದ್ರ ಮಟ್ಟಕ್ಕಿಂತ 4.5 ಕಿ.ಮೀ ವರೆಗೆ ವಿಸ್ತರಿಸಿದೆ. ಸರಾಸರಿ ಸಮುದ್ರ ಮಟ್ಟದಲ್ಲಿ ಮಾನ್ಸೂನ್ ತಗ್ಗು ಈಗ ಫಿರೋಜ್ಪುರ, ರೋಹಕ್, ಒರೆ, ಸಿಧಿ ಮೂಲಕ ಹಾದುಹೋಗುತ್ತದೆ. ಇದು ಆಗ್ನೇಯ ಜಾರ್ಖಂಡ್ ಮತ್ತು ನೆರೆಹೊರೆಗಳಲ್ಲಿ ಕಡಿಮೆ ಒತ್ತಡದ ಪ್ರದೇಶದ ಕೇಂದ್ರವಾಗಿದೆ ಮತ್ತು ಅಲ್ಲಿಂದ ಆಗ್ನೇಯಕ್ಕೆ ಪೂರ್ವ ಮಧ್ಯ ಬಂಗಾಳ ಕೊಲ್ಲಿಗೆ ಹಾದು ಹೋಗುತ್ತದೆ. ವಾಯುವ್ಯ ಬಂಗಾಳ ಕೊಲ್ಲಿಯ ಮೇಲೆ ಸರಾಸರಿ ಸಮುದ್ರ ಮಟ್ಟಕ್ಕಿಂತ 5.8 ಮತ್ತು 7.6 ಕಿ.ಮೀ ನಡುವೆ ಮೇಲ್ಭಾಗದ ವಾಯುವ್ಯ ಆವರ್ತನ ಪರಿಚಲನೆ ಮುಂದುವರೆದಿದೆ ಎಂದು ಭಾರತೀಯ ಹವಾಮಾನ ಇಲಾಖೆ ವರದಿ ತಿಳಿಸಿದೆ.

**ಕರ್ನಾಟಕದ 14 ಪ್ರಮುಖ ಜಲಾಶಯಗಳ ನೀರಿನ ಮಟ್ಟ (ಅಡಿಗಳಲ್ಲಿ)**

| ಜಲಾಶಯ | ಗರಿಷ್ಠ ಮಟ್ಟ | ಇಂದಿನ ಮಟ್ಟ | ಒಳಹರಿವು | ಹೊರಹರಿವು |
|---|---|---|---|---|
| ಕೆಆರ್‌ಎಸ್ | 124.80 | 109.75 | 2,274 | 2,699 |
| ಹಾರಂಗಿ | 2,859 | 2,858.26 | 4,195 | 3,300 |
| ಕಬಿನಿ | 2,284 | 2281.63 | 8701 | 11,896 |
| ಹೇಮಾವತಿ | 2,922 | 2916.65 | 3,331 | 595 |
| ಲಿಂಗನಮಕ್ಕಿ | 1,819 | 1,794.05 | 13,9212 | 306 |
| ಸೂಪಾ | 564 | 546.73 | 11,015.50 | |
| ಮಾಣಿ | 595 | 585.78 | 2,203 | |
| ತುಂಗಭದ್ರಾ | 1,633 | 1,629.20 | 25,263 | 5,768 |
| ಮಲಪ್ರಭಾ | 2,079 | 2,065.75 | 2,428 | 794 |
| ಘಟಪ್ರಭಾ | 2,175 | 2,173.96 | 7,898 | 2,790 |
| ತುಂಗಾ | 588.24 | 588.24 | 13,707 | 13,707 |
| ಭದ್ರಾ | 186172 | 4,438 | 202 | |
| ಆಲಮಟ್ಟಿ | 519.60ಮೀ | 519.51ಮೀ | 33,891 | 22,155 |
| ನಾರಾಯಣಪುರ | 492.25ಮೀ | 492.25 | 25,000 | 16,440 |

# ಫ್ರೀಡಂ ಹಬ್ಬದ ಬೆನ್ನಲ್ಲೇ ಹಳ್ಳಿ ಸೊಗಡಿನ ಊರಹಬ್ಬ; ಡಿಸೆಂಬರ್‌ನಲ್ಲಿ ಬೆಂಗಳೂರು ಜಾತ್ರೆ

**ಬೆಂಗಳೂರು, ಆ.16:** ಸ್ವಾತಂತ್ರ್ಯ ದಿನಾಚರಣೆ ವೇಳೆ ಫ್ರೀಡಂ ಹಬ್ಬದ ಮೂಲಕ ಸಿಲಿಕಾನ್ ಸಿಟಿ ಜನರು ಮನರಂಜನೆಯ ರಸದೌತಣಕ್ಕೆ ರಾಜ್ಯ ಸರ್ಕಾರ ವೇದಿಕೆ ಮಾಡಿ ಕೊಟ್ಟಿತ್ತು. ಇದರ ಬೆನ್ನಲ್ಲೇ ಮತ್ತೊಂದು ಹಬ್ಬ, ಹಬ್ಬ ಅಲ್ಲ ಈ ಭಾರಿ ಅದ್ದೂರಿ ಜಾತ್ರೆಗೆ ರಾಜ್ಯ ಸರ್ಕಾರ ತಯಾರಿ ಮಾಡಿಕೊಳ್ಳುತ್ತಿದೆ.



ಅದರಂತೆ, ಮುಂಬರುವ ಡಿಸೆಂಬರ್‌ನಲ್ಲಿ ಬೆಂಗಳೂರು ಜಾತ್ರೆ ಆಯೋಜಿಸುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಣೆ ಮಾಡಿದ್ದಾರೆ.

ಫ್ರೀಡಂ ಹಬ್ಬದ ವೇಳೆ ಬೆಂಗಳೂರು ಜಾತ್ರೆ ಬಗ್ಗೆ ಘೋಷಣೆ ಮಾಡಿದ ಸಿಎಂ ಡಿ.ಕೆ. ಶಿವಕುಮಾರ್, "ಡಿಸೆಂಬರ್‌ನಲ್ಲಿ ಬೆಂಗಳೂರು ಜಾತ್ರೆ ಆಚರಣೆ ಮಾಡಬೇಕು ಎಂದು ಹೇಳಿದ್ದು, ಈಗಾಗಲೇ ಸಚಿವ ಕೃಷ್ಣ ಬೈರೇಗೌಡ ಅವರು ಈ ನಿಟ್ಟಿನಲ್ಲಿ ಸಿದ್ಧತೆ ನಡೆಸುತ್ತಿದ್ದಾರೆ ಎಂದರು.

ಇದಕ್ಕೆ ಧನಿಗೂಡಿಸಿದ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ, ನೀವು ನಿಮ್ಮ ಊರಿನಲ್ಲಿ ದೊಡ್ಡ ಜಾತ್ರೆಗಳನ್ನ ನೋಡಿರ್ತೀರ. ಅದೇ ತರಹದ ಜಾತ್ರೆಯನ್ನ ಬೆಂಗಳೂರಿನಲ್ಲೂ ಕೂಡಾ ಊರಹಬ್ಬವನ್ನ, ಬೆಂಗಳೂರು ಜಾತ್ರೆಯನ್ನ, ಸಿಎಂ ಡಿಕೆ ಶಿವಕುಮಾರ್ ಸೂಚನೆಯ ಮೇರೆಗೆ ಇದೆ ಡಿಸೆಂಬರ್‌ನಲ್ಲಿ ಆಯೋಜನೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

# 2027ರ ಆಗಸ್ಟ್ ವೇಳೆಗೆ ಮೇಕೆದಾಟು ಯೋಜನೆಗೆ ಶಂಕುಸ್ಥಾಪನೆ: ಸಚಿವ ಚಲುವರಾಯಸ್ವಾಮಿ

ಬೆಂಗಳೂರು/ಮಂಡ್ಯ, ಆ.16: ಮುಂದಿನ ವರ್ಷದ ಆಗಸ್ಟ್ ವೇಳೆಗೆ ಮೇಕೆದಾಟು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ ಎಂದು ಕೃಷಿ, ನೀರಾವರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಮಂಡ್ಯದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ರಾಜ್ಯದ ನೀರಾವರಿ ಯೋಜನೆಗಳು ಹಾಗೂ ಕಾವೇರಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಘೋಷಣೆ ಮಾಡಿದರು. ನೀರಾವರಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಮೇಕೆದಾಟು ಯೋಜನೆಯ ಕಾಮಗಾರಿಯನ್ನು ತ್ವರಿತಗೊಳಿಸ ಲಾಗಿದೆ. ಯೋಜನೆಯ ವಿವರವಾದ ಯೋಜನಾ ವರದಿಯನ್ನು ಅನುಮೋದನೆಗಾಗಿ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಚಲುವರಾಯ ಸ್ವಾಮಿ ಹೇಳಿದರು.



ಯೋಜನೆಗೆ 12,500 ಎಕರೆ ಭೂಮಿ ಅಗತ್ಯವಿದ್ದು, ಈಗಾಗಲೇ ಸುಮಾರು 20,000 ಎಕರೆ ಭೂಮಿಯನ್ನು ಗುರುತಿಸಲಾಗಿದೆ. ಅರಣ್ಯ ಭೂಮಿಗೆ ಪರ್ಯಾಯವಾಗಿ ಸೂಕ್ತ ಭೂಮಿಯನ್ನು ಗುರುತಿಸಲಾಗಿದ್ದು, ಅರಣ್ಯ ಪ್ರದೇಶಗಳಿಗೆ ಹಾನಿಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಜನರ ಹಿತದೃಷ್ಟಿ ಯಿಂದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಮೇಕೆದಾಟು ಯೋಜನೆಯಿಂದ ಕಾವೇರಿ ನೀರು ವಿವಾದಕ್ಕೆ ಶಾಶ್ವತ ಪರಿಹಾರ ದೊರೆಯಲಿದೆ. ಯೋಜನೆಯ ಕಾಮಗಾರಿಯನ್ನು ತ್ವರಿತಗೊಳಿಸಲು ತಾಂತ್ರಿಕ ಹಾಗೂ ಕಾನೂನು ತಂಡಗಳು ಕಾರ್ಯನಿರ್ವಹಿಸಲಿವೆ. ಕೇಂದ್ರ ಸರ್ಕಾರದೊಂದಿಗೆ ಪ್ರತಿನಿತ್ಯ ಈ ವಿಚಾರವಾಗಿ ಮಾತುಕತೆ ನಡೆಸಲು ಇಬ್ಬರು ನೀರಾವರಿ ಅಧಿಕಾರಿಗಳನ್ನು ದೆಹಲಿಯಲ್ಲೇ ನಿಯೋಜಿಸಲಾಗಿದೆ ಎಂದರು.

**ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸಿಲ್ಲ:** ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸಲಾಗಿದೆ ಎಂಬ ವರದಿಗಳ ಕುರಿತು ಸ್ಪಷ್ಟನೆ ನೀಡಿದ ಚಲುವರಾಯಸ್ವಾಮಿ, ಕೆಆರ್‌ಎಸ್ನಿಂದ ನೆರೆಯ ರಾಜ್ಯಕ್ಕೆ ನೀರನ್ನು ಹರಿಸಿಲ್ಲ

ಜೂನ್‌ನಿಂದಲೇ ತಮಿಳುನಾಡಿಗೆ ನೀರು ಹರಿಸಬೇಕಿತ್ತು. ಆದರೆ ಜೂನ್ ಅಥವಾ ಜುಲೈನಲ್ಲಿ ನೀರು ಹರಿಸಿಲ್ಲ. 3,500 ಕ್ಯುಸೆಕ್ ನೀರು ಹರಿಸುವಂತೆ ಆದೇಶ ಬಂದಾಗ, ವಾಸ್ತವವಾಗಿ ಅದಕ್ಕಿಂತ ಹೆಚ್ಚಿನ ಪ್ರಮಾಣದ ನೀರು ಹರಿಯಿತು. ಇದೀಗ 12,000 ಕ್ಯುಸೆಕ್ ನೀರು ಹರಿಸುವಂತೆ ಆದೇಶ ನೀಡಲಾಗಿದೆ. ತಾಂತ್ರಿಕ ಕಾರಣಗಳಿಂದಾಗಿ ಸದ್ಯಕ್ಕೆ ಒಳಹರಿವು ಹಾಗೂ ಹೊರಹರಿವಿನ ಪ್ರಮಾಣದ ವಿವರಗಳನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಜನರು ಅನಗತ್ಯ ಗೊಂದಲ ಸೃಷ್ಟಿಸ ಬಾರದು ಎಂದು ಮನವಿ ಮಾಡಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

# 80ನೇ ಸ್ವಾತಂತ್ರ್ಯ ದಿನಾಚರಣೆ: ವಿಶ್ವವಿದ್ಯಾಲಯಗಳು ಡಿಗ್ರಿಗಳನ್ನು ಪೂರೈಸುವ ಕಾರ್ಖಾನೆಗಳಾಗಬಾರದು– ಪ್ರೊ.ರಮೇಶ್



ವಿಶ್ವವಿದ್ಯಾಲಯಗಳು ಕೇವಲ ಪದವಿ ಪ್ರಮಾಣಪತ್ರಗಳನ್ನು ಪೂರೈಸುವ ಕಾರ್ಖಾನೆಗಳಾಗದೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮೂಲಕ ಅವರನ್ನು ರಾಷ್ಟ್ರ ನಿರ್ಮಾಣದ ಶಿಲ್ಪಿಗಳಾಗಿ ರೂಪಿಸುವ ಜ್ಞಾನದಾಸೋಹ ಕೇಂದ್ರಗಳಾಗಬೇಕೆಂದು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ರಮೇಶ್.ಬಿ. ಪ್ರತಿಪಾದಿಸಿರುವರು.

ಬೆಂಗಳೂರಿನ ಪ್ರತಿಷ್ಠಿತ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಗಡಿಯಾರ ಗೋಪುರದ ಬಳಿ ತ್ರಿವರ್ಣ ಧ್ವಜಾರೋಹಣದ ನಂತರ ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದ ಅವರು 80ನೇ ಸ್ವಾತಂತ್ರ್ಯೋತ್ಸವದ ವಿಶೇಷ ಮಹತ್ವವನ್ನು ವಿವರಿಸಿದರು.

ಭಾರತ ಬಹುತ್ವದ ನೆಲೆಗಟ್ಟಿನ ಸಮಾಜವಾಗಿದ್ದು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ಬಿತ್ತಿನಾಯಕತ್ವದ ಗುಣಗಳನ್ನು ಬೆಳೆಸುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸದೃಢಗೊಳಿಸಬೇಕೆಂದು ಅವರು ಅಭಿಪ್ರಾಯಪಟ್ಟರು.

ಕಳೆದ ಎಂಟು ದಶಕಗಳಲ್ಲಿ ಅಗಾಧ ಪ್ರಗತಿಯನ್ನು ಸಾಧಿಸಿ ಇದೀಗ ವಿಶ್ವದ ಆರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿರುವ ಭಾರತದಲ್ಲಿ ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಆಂತರಿಕ ಪ್ರಜಾಪ್ರಭುತ್ವದ ಬಲವರ್ಧನೆಯತ್ತ ಹೆಚ್ಚಿನ ಪ್ರಯತ್ನ ನಡೆಯಬೇಕಿದೆ ಎಂದು ವಿಶ್ಲೇಷಿಸಿದರು.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 134ನೇ ಸ್ಥಾನದಲ್ಲಿರುವ ಭಾರತ ಲಿಂಗ ಅಂತರ ಸೂಚ್ಯಂಕದಲ್ಲೂ ಅಷ್ಟೇ ಹಿಂದಿದೆ. ಆಸ್ತಿ ಹಕ್ಕು, ಅಧಿಕಾರ ಮತ್ತು ಹಕ್ಕುಗಳ ವಿಚಾರದಲ್ಲಿ ಮಹಿಳೆಯರಿಗೆ ಇನ್ನೂ ಸಂಪೂರ್ಣ ನ್ಯಾಯ ದೊರೆತಿಲ್ಲವೆಂದು ಅವರು ವಿಷಾದಿಸಿದರು.

ಭಾರತೀಯ ವಿಶ್ವವಿದ್ಯಾನಿಲಯಗಳನ್ನು ಸಂಶೋಧನೆ ಮತ್ತು ಅನ್ವೇಷಣೆಯ ಉತ್ಕೃಷ್ಟ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವ ಮೂಲಕ ಉನ್ನತ ಶಿಕ್ಷಣ ಕ್ಷೇತ್ರ ಸಮೃದ್ಧ ಭಾರತ ನಿರ್ಮಾಣಕ್ಕೆ ಮಹತ್ತರ ಕೊಡುಗೆ ನೀಡುವತ್ತ ಗಂಭೀರ ಪ್ರಯತ್ನ ನಡೆಯಬೇಕೆಂದು ಅವರು ಆಶಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಿಂಡಿಕೇಟ್ ಸದಸ್ಯೆ ಆಯಿಷಾ ಫರ್ಜಾನ ಮಾತನಾಡಿ ಸಮಕಾಲೀನ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪುರವರ ವಿಶ್ವಮಾನವ ಸಂದೇಶದ ಉದಾತ್ತ ಆಶಯಗಳನ್ನು ಎತ್ತಿಹಿಡಿದು ರಾಷ್ಟ್ರೀಯ ಭಾವೈಕ್ಯತೆಯನ್ನು ಗಟ್ಟಿಗೊಳಿಸಲು ಮುಂದಾಗೋಣ ಎಂದು ಹಾರೈಸಿದರು.

ಮತ್ತೋರ್ವ ಅತಿಥಿಯಾಗಿ ಆಗಮಿಸಿದ್ದ ಸಿಂಡಿಕೇಟ್ ಸದಸ್ಯರಾದ ವಿ. ಶಿವಕುಮಾರ್ ಮಾತನಾಡಿ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ದೊರಕಿಸುವತ್ತ ತಕ್ಷಣ ಅಗತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಪಡಿಸಿದರು.


ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಶಿಲ್ಪಶ್ರೀ, ವಿದ್ಯಾ ವಿಷಯಕ ಪರಿಷತ್ತಿನ ಡಾ.ಬಿ.ಕೆ.ಗಿರಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ.ಕೆ.ಶಿವಶಂಕರ್, ಪ್ರೊ.ಪಿ.ಆರ್. ಚೇತನಾ. ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ. ಎಂ.ನಿರ್ಮಲ, ಪ್ರೊ.ಮೇಧಾ ಇಟಗಿ ಹುಯಿಲಗೋಳ ಇದ್ದರು. ಸಮಾರಂಭದ ಅಂಗವಾಗಿ ದೇಶಭಕ್ತಿ ಗೀತೆಗಳ ಗಾಯನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

# ಕನ್ನಡ ಸಾಹಿತ್ಯ ಪರಿಷತ್ತು ವ್ಯಕ್ತಿ ಕೇಂದ್ರಿತವಾದರೆ ಅಪಾಯಕಾರಿ: ಸಾಹಿತಿಗಳು, ಪತ್ರಕರ್ತರು, ಚಿಂತಕರ ಕಳವಳ

**ಬೆಂಗಳೂರು, ಆ.16:** ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಮೂಲ ಹಿತಾಸಕ್ತಿಗೆ ವಿರುದ್ಧವಾಗಿದ್ದು, ವ್ಯಕ್ತಿಕೇಂದ್ರಿತಕ್ಕೆ ಬದಲಾಗಿ ವಿಕೇಂದ್ರೀಕರಣವಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಸಂಸ್ಥೆಯಾಗಬೇಕು ಎಂದು ಹಲವು ಸಾಹಿತಿಗಳು, ಪತ್ರಕರ್ತರು, ಸಾಮಾಜಿಕ ಚಿಂತಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಆಯೋಜಿಸಲಾಗಿದ್ದ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು: ಸಮಸ್ಯೆ – ಸವಾಲು – ಸಂವಾದ – ಮುನ್ನೋಟ ಕುರಿತ ಸಾರ್ವಜನಿಕ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ದಿಕ್ಸೂಚಿ ನುಡಿಗಳನ್ನಾಡಿದ ಹಿರಿಯ ವಿಮರ್ಶಕ ಪ್ರೊ. ರಾಜೇಂದ್ರ ಚೆನ್ನಿ ಕನ್ನಡಿಗರ ಅಸ್ಮಿತೆ, ಭಾಷೆ, ಕಲೆ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ 1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರಿಂದ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಇಂದು ಮೂಲ ಧ್ಯೇಯೋದ್ದೇಶಗಳಿಂದ ವಿಮುಖವಾಗಿ, ವ್ಯಕ್ತಿ ಕೇಂದ್ರಿತ ಸಂಸ್ಥೆಯಾಗಿ ಬದಲಾಗುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿದರು.

ಕನ್ನಡ ಸೇವೆಯು ಇಂದು ಅಧಿಕಾರದ ರೂಪಾಂತರವಾಗಿ ಬದಲಾಗಿದೆ. ಯಾವುದೇ ಸಾಂಸ್ಕೃತಿಕ ಸಂಸ್ಥೆಯು ತನ್ನ ನಿಯಮಾವಳಿ ಹಾಗೂ ಮೂಲ ಧ್ಯೇಯಗಳನ್ನು ಬದಿಗೊತ್ತಿ ವ್ಯಕ್ತಿ ಕೇಂದ್ರಿತವಾಗಿ ಬೆಳೆದಾಗ ಇಂತಹ ಅವಗಡಗಳು ಸಂಭವಿಸುತ್ತವೆ. ಪರಿಷತ್ತಿನಲ್ಲಿ ಹೆಚ್ಚುತ್ತಿರುವ ಅಧಿಕಾರಶಾಹಿ ಧೋರಣೆಗೆ ತಕ್ಷಣವೇ ತಡೆ ಬೀಳಬೇಕಿದೆ ಎಂದರು.




ಸಂಸ್ಥೆಗಳು ಸಾರ್ವಜನಿಕರ ಮತ್ತು ಕನ್ನಡ ಮನಸ್ಸುಗಳ ಅಭಿಪ್ರಾಯಕ್ಕೆ ಬೆಲೆ ಕೊಡುವುದನ್ನು ಬಿಟ್ಟು, ಕೆಲವು ನಿರ್ದಿಷ್ಟ ಹಿತಾಸಕ್ತಿಗಳ ಕಬ್ಜಕ್ಕೆ ಒಳಗಾಗುತ್ತಿರುವುದು ದುರದೃಷ್ಟಕರ. ಪರಿಷತ್ತಿನ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿ ಪುನಃಸ್ಥಾಪನೆಯಾಗಬೇಕಿದೆ. ಇತ್ತೀಚಿನ ವಿದ್ಯಮಾನಗಳಿಂದಾಗಿ ಅಪಾರ ಸಂಖ್ಯೆಯ ಪ್ರಜ್ಞಾವಂತ ಕನ್ನಡಿಗರು ಮತ್ತು ಸಾಹಿತಿಗಳು ಪರಿಷತ್ತಿನಿಂದ ವಿಮುಖರಾಗಿದ್ದಾರೆ. ಪರಿಷತ್ತನ್ನು ಮತ್ತೆ ಜನಪರ ಹಾಗೂ ಸಾಹಿತ್ಯಿಕ ಚಟುವಟಿಕೆಗಳ ಕೇಂದ್ರವಾಗಿಸುವ ಮೂಲಕ ಅವರೆಲ್ಲರನ್ನೂ ಮರಳಿ ತರಬೇಕಿದೆ. ಸಮಸ್ಯೆಗಳನ್ನಷ್ಟೇ ಎತ್ತಿ ತೋರಿಸುವುದು ನಮ್ಮ ಉದ್ದೇಶವಾಗಬಾರದು. ಬಿಕ್ಕಟ್ಟುಗಳಿಗೆ ಪರಿಹಾರ ಕಂಡುಕೊಳ್ಳುವ ಮತ್ತು ಸಂಸ್ಥೆಗೆ ಹೊಸ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಚಿಂತಕರು ಒಂದಾಗಿ ಶ್ರಮಿಸಬೇಕಿದೆ ಎಂದು ಕರೆ ನೀಡಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ವಿಶ್ರಾಂತ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, ಸಂಸ್ಥೆಯೊಂದರ ಘನತೆ ನಿಂತಿರುವುದು ಅದರ ನೀತಿ–ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮತ್ತು ಹಣಕಾಸಿನ ಪಾರದರ್ಶಕತೆಯ ಮೇಲೆ. ಪರಿಷತ್ತು ಕೇವಲ ಆಡಳಿತಾತ್ಮಕ ಅಥವಾ ಚುನಾವಣಾ ಕೇಂದ್ರವಾಗದೆ, ನಾಡಿನ ಜ್ವಲಂತ ಸಾಂಸ್ಕೃತಿಕ, ಭಾಷಿಕ ಮತ್ತು ಸಾಹಿತ್ಯಿಕ ಚರ್ಚೆಗಳಿಗೆ ಮುಕ್ತ ವೇದಿಕೆಯಾಗಬೇಕು. ಪರಿಷತ್ತಿನಿಂದ ವಿಮುಖರಾಗಿರುವ ಸಾಹಿತಿಗಳು, ಚಿಂತಕರು ಹಾಗೂ ಸಾರ್ವಜನಿಕರನ್ನು ಮತ್ತೆ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡುವುದೇ ಇಂದಿನ ಅಗತ್ಯ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಹಾಗೂ ಹಿರಿಯ ವೈದ್ಯೆ ಡಾ. ವಸುಂಧರಾ ಭೂಪತಿ ಮಾತನಾಡಿ, ಸಾಹಿತ್ಯ ಪರಿಷತ್ತಿನ ಆಡಳಿತದಲ್ಲಿ ಮಹಿಳೆಯರ ಸೂಕ್ತ ಪ್ರಾತಿನಿಧ್ಯ ಕಾಯ್ದುಕೊಳ್ಳುವುದು, ಸಂಸ್ಥೆಯ ಹಣಕಾಸಿನ ದುರುಪಯೋಗ ತಡೆಯುವುದು ಹಾಗೂ ಪಾರದರ್ಶಕತೆ ತರುವುದು ಇಂದಿನ ತುರ್ತು ಅಗತ್ಯವಾಗಿದೆ. ಸಾಹಿತ್ಯ ಪರಿಷತ್ತು ವ್ಯಕ್ತಿಗತ ಹಿತಾಸಕ್ತಿಗಳಿಗೆ ಬಳಕೆಯಾಗದೆ, ಕನ್ನಡಿಗರ ಭಾಷೆ–ಸಾಹಿತ್ಯದ ಸೇವೆಗೆ ಮರಳಿ ಬದ್ಧವಾಗಬೇಕು ಎಂದರು.

ಹಿರಿಯ ಸಾಹಿತಿ ಹಾಗೂ ವಿಮರ್ಶಕ ಡಾ.ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ಒಬ್ಬ ವ್ಯಕ್ತಿಯ ಅಥವಾ ಗುಂಪಿನ ಖಾಸಗಿ ಸ್ವತ್ತಲ್ಲ, ಅದು ಇಡೀ ಕನ್ನಡಿಗರ ಸಾರ್ವಜನಿಕ ಆಸ್ತಿ. ಸಂಸ್ಥೆಗಳು ತಮ್ಮ ಮೂಲ ಉದ್ದೇಶ ಮರೆತು ಅಧಿಕಾರಶಾಹಿಯ ಕಬ್ಜಕ್ಕೆ ಒಳಗಾದಾಗ ಇಡೀ ಸಾಂಸ್ಕೃತಿಕ ವಲಯವೇ ಬಿಕ್ಕಟ್ಟು ಎದುರಿಸಬೇಕಾಗುತ್ತದೆ. ಪರಿಷತ್ತಿನ ಆಡಳಿತದಲ್ಲಿ ಪಾರದರ್ಶಕತೆ, ನಿಯಮಾವಳಿಗಳ ಕಟ್ಟುನಿಟ್ಟಿನ ಪಾಲನೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ತಕ್ಷಣವೇ ಪುನಃಸ್ಥಾಪಿಸಬೇಕಿದೆ. ಸಂಸ್ಥೆಯ ಹಣ ಹಾಗೂ ಅಧಿಕಾರ ದುರುಪಯೋಗವಾಗದಂತೆ ತಡೆಯುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದು ಎಚ್ಚರಿಸಿದರು.

ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ನಂಜುಂಡಪ್ಪ.ವಿ ನಿರೂಪಿಸಿದರು. ಹಿರಿಯ ಸಾಹಿತಿ ಡಾ. ಕರೀಗೌಡ ಬೀಚನಹಳ್ಳಿ ಸೇರಿದಂತೆ ಹಲವು ಸಾಹಿತಿಗಳು, ಸಾಹಿತ್ಯಾಸಕ್ತರು ಹಾಗೂ ಚಿಂತಕರು ಉಪಸ್ಥಿತರಿದ್ದರು.



61 ದಿನಗಳ ವಾರ್ಷಿಕ ಮೀನುಗಾರಿಕೆ ನಿಷೇಧ ಮುಗಿದ ನಂತರ, ಭಾನುವಾರ ಮಂಗಳೂರಿನ ಹಳೆಯ ಬಂದರು (ಬಂದರ್) ನಿಂದ ಮೀನುಗಾರಿಕೆಗಾಗಿ ಯಾಂತ್ರಿಕೃತ ಆಳ ಸಮುದ್ರ ಮೀನುಗಾರಿಕೆ ದೋಣಿಗಳು ಲಂಗರು ಹಾಕಿರುವುದು ಕಂಡುಬಂದರೆ, ಇನ್ನು ಕೆಲವು ದೋಣಿಗಳು ಸಮುದ್ರಕ್ಕೆ ತೆರಳಿವೆ.

### ಸಚಿವ ಅಜಯ್ ಸಿಂಗ್ ವಿರುದ್ಧ ರಾಯಚೂರಿನಲ್ಲಿ ಗೋ ಬ್ಯಾಕ್ ಘೋಷಣೆ

## ನಮಗೆ ಎರವಲು ಸಚಿವರು ಬೇಡ, ನಮ್ಮ ಜಿಲ್ಲೆಯವರೇ ಬೇಕು: ಪ್ರತಿಭಟನೆ

**ರಾಯಚೂರು, ಆ. 16:** ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಯವರಿಗೆ ಸಚಿವ ಸ್ಥಾನ ನೀಡದಿರುವುದನ್ನು ಖಂಡಿಸಿ ಹಾಗೂ ಹೊರ ಜಿಲ್ಲೆಯವರಿಗೆ ಉಸ್ತುವಾರಿ ಸಚಿವರಾಗಿ ನೀಡಿರುವುದನ್ನು ವಿರೋಧಿಸಿ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಅಜಯ್ ಸಿಂಗ್ ವಿರುದ್ಧ ಗೋ ಬ್ಯಾಕ್ ಎಂದು ಘೋಷಣೆ ಕೂಗುವ ಮೂಲಕ ಪ್ರತಿಭಟಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಡಾ.ಅಜಯಸಿಂಗ್ ಅವರೇ ನಮಗೆ ನಿಮ್ಮ ವಿರುದ್ಧ ಕೋಪವಿಲ್ಲ. ಆದರೆ ನಮಗೆ ನಮ್ಮ ಜಿಲ್ಲೆಗೆ ಸಚಿವ ಸ್ಥಾನದ ಪ್ರಾತಿನಿಧ್ಯ ನೀಡಬೇಕು. ನಮ್ಮ ಪ್ರತಿಭಟನೆ ಮತ್ತು ಹೋರಾಟ ಇರುವುದು ರಾಜ್ಯ ಸರ್ಕಾರದ ವಿರುದ್ಧ ಎಂದು




ಪ್ರತಿಭಟನಾಕರರು ಘೋಷಣೆಗಳನ್ನು ಕೂಗಿದರು.

ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಹಾಗೂ ರಾಯಚೂರು ಜಿಲ್ಲಾ ವೇದಿಕೆಗಳ ಒಕ್ಕೂಟದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಯಕರ್ತರು 'ಡಾ.ಅಜಯ ಸಿಂಗ್ ಗೋ ಬ್ಯಾಕ್' ಎಂದು ಘೋಷಣೆ ಕೂಗಿದರು. ಜಿಲ್ಲೆಯ ಜನಪ್ರತಿನಿಧಿಗಳನ್ನು ಕಡೆಗಣಿಸಿರುವ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಧ್ವಜಾರೋಹಣ ಮಾಡಲು ಆಗಮಿಸುತ್ತಿದ್ದ ಡಾ.ಅಜಯ್ ಸಿಂಗ್ ಅವರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು. ರಾಯಚೂರು ಜಿಲ್ಲೆಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ.

ಸರ್ಕಾರದ ಮೇಲೆ ಒತ್ತಡ ಹಾಕಲಾಗುವುದು. ನಮಗೆ ಹಿಂದಿನಿಂದಲೂ ಅನ್ಯಾಯವಾಗುತ್ತಿದೆ. ಜಿಲ್ಲೆಗೆ ಸಚಿವ ಸಂಪುಟದಲ್ಲಿ ಮುಂಬರುವ ದಿನಗಳಲ್ಲಿ ಪ್ರಾತಿನಿಧ್ಯ ನೀಡದಿದ್ದರೆ ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

### ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ

## ಮನುವಾದಿಗಳ ಅತಿರೇಕದ ವರ್ತನೆ ಸಚಿವ ಈಶ್ವರ್ ಖಂಡ್ರೆ ಖಂಡನೆ

**ಬೀದರ್, ಆ. 16:** ಉತ್ತರಾಖಂಡ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಮೈದಾನವನ್ನು ಶುದ್ಧೀಕರಣ ಮಾಡಿರುವ ಕ್ರಮ ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವಂತದ್ದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ತೀವ್ರವಾಗಿ ಖಂಡಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಈ ದೇಶದಲ್ಲಿ ಬಿಜೆಪಿ ಬೆಂಬಲಿತ ಮನುವಾದಿಗಳು ಇನ್ನೂ ಅಸ್ಪೃಶ್ಯತೆಯನ್ನು ಜೀವಂತವಾಗಿಟ್ಟಿರುವುದಕ್ಕೆ ಇದು ಜ್ವಲಂತ ಉದಾಹಣೆಯಾಗಿದೆ.

ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಸಚಿವರಾಗಿ, ಲೋಕಸಭೆಯ ಹಾಗೂ ಪ್ರಸ್ತುತ ರಾಜ್ಯಸಭೆ ಪ್ರತಿಪಕ್ಷ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೇ ಹೀಗಾದರೆ ಸಾಮಾನ್ಯರ ಗತಿಯೇನು ಎಂದು ಪ್ರಶ್ನಿಸಿದ್ದಾರೆ

ಬಲಪಂತೀಯ ಸಂಘಟನೆಗಳಿಗೆ ಇಂತಹ ಧೈರ್ಯ ಬರಲು ಬಿಜೆಪಿಯ ಬೆಂಬಲವೇ ಕಾರಣ. ಬಿಜೆಪಿಯಲ್ಲಿ ದಲಿತ ನಾಯಕರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಮತಕ್ಕಾಗಿ ದಲಿತರ ಓಲೈಕೆ ಮಾಡುವ ಬಿಜೆಪಿ ಆಂತರ್ಯದಲ್ಲಿ ಅಸ್ಪೃಶ್ಯತೆಯನ್ನು ಜೀವಂತವಾಗಿಟ್ಟಿದೆ. ದೇಶದ ಜನತೆ ಇದನ್ನು ಅರ್ಥ ಮಾಡಿಕೊಂಡು ಮನುವಾದಿಗಳನ್ನು ಹಾಗೂ ಅದನ್ನು ಬೆಂಬಲಿವ ಬಿಜೆಪಿಯನ್ನು ಅಧಿಕಾರ 'ದಿಂದ ದೂರ ಇಡುವ ಕಾಲ ದೂರ ಇಲ್ಲ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ.

ಈ ಕೂಡಲೇ ಶುದ್ಧೀಕರಣದಂತಹ ಅಮಾನವೀಯ ಮತ್ತು ಸಂವಿಧಾನ ವಿರೋಧಿ ಕೃತ್ಯ ಎಸಗಿದವರನ್ನು ಬಂಧಿಸಿ. ಕಾನೂನು ರೀತ್ಯ ಕಠಿಣ ಶಿಕ್ಷೆ ಕೊಡಿಸಬೇಕು ಎಂದೂ ಒತ್ತಾಯಿಸಿದ್ದಾರೆ.

### ಗೋವು ಕಳ್ಳರ ಬೆನ್ನತ್ತಿದವರ ಮೇಲಿನ ಹಲ್ಲೆಗೆ ವಿಜಯೇಂದ್ರ ಖಂಡನೆ

## ಘಟನೆ ಮರುಕಳಿಸದಂತೆ ಸರ್ಕಾರ ಎಚ್ಚೆತ್ತುಕೊಳ್ಳುವಂತೆ ಆಗ್ರಹ

**ಶಿವಮೊಗ್ಗ, ಆ.16:** ಹಿಂದುತ್ವದ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು, ಬೇರೆ ವಿಚಾರ ಮಾತನಾಡುವ ಗೃಹ ಸಚಿವರು ಕೂಡಲೇ ಎಚ್ಚೆತ್ತುಕೊಳ್ಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.



ಗೋವು ಕಳ್ಳಸಾಗಾಣಿಕೆದಾರರಿಂದ ಗಾಯಗೊಂಡವರನ್ನು ಶಿಕಾರಿಪುರದ ಆಸ್ಪತ್ರೆಯಲ್ಲಿ ಭಾನುವಾರ ಭೇಟಿ ಮಾಡಿದ ಧೈರ್ಯ ಹೇಳಿದರು.

ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡಬೇಕೆಂಬ ಇಚ್ಛಾಶಕ್ತಿ ರಾಜ್ಯ ಸರಕಾರಕ್ಕೆ ಇದ್ದಲ್ಲಿ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಈಗಾಗಲೇ ಶಿವಮೊಗ್ಗ ಎಸ್ಪಿ, ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಮಾತನಾಡಿದ್ದೇನೆ. ವಾಹನಗಳನ್ನು ಈಗಾಗಲೇ ವಶಕ್ಕೆ ಪಡೆದಿದ್ದಾರೆ. ಅಷ್ಟೇ ಆದರೆ ಸಾಲದು. ದೇಶದ್ರೋಹಿಗಳನ್ನು ಒದ್ದು ಒಳಗೆ ಹಾಕಬೇಕು ಎಂದು ಆಗ್ರಹಿಸಿದರು. ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಸರಕಾರ ಎಚ್ಚತ್ತುಕೊಳ್ಳಬೇಕು. ಇಂಥ ಘಟನೆಗಳು ಮರುಕಳಿಸಿದರೆ ಕಾನೂನು– ಸುವ್ಯವಸ್ಥೆ ಕೈಮೀರಿ ಹೋಗಲಿದೆ ಎಂದು ತಿಳಿಸಿದರು.

ನಿನ್ನೆ ಮಧ್ಯರಾತ್ರಿ ಹರತಾಳು ಹತ್ತಿರ ಕೆಲವು ದುಷ್ಕರ್ಮಿಗಳು ಚಂದನ್ ಅವರ ಮನೆಯಿಂದ ಗೋವುಗಳನ್ನು ಹೇರಿಕೊಂಡು ಹೋಗುವ ಸಂದರ್ಭದಲ್ಲಿ ಬಜರಂಗ ದಳದ ಅಲ್ಲಿನ ಕಾರ್ಯಕರ್ತ ಚಂದನ್ ಮತ್ತು ಇತರರು ಜಾಗೃತರಾದರು. ಚಂದನ್, ಕಿರಣ್, ಅಭಿಲಾಷ್ ಅವರು ಆ ವಾಹನವನ್ನು ಬೆನ್ನಟ್ಟಿದರು. ಪಿಕಪ್ ವಾಹನದಲ್ಲಿ ಗೋವುಗಳನ್ನು ಕದ್ದು ಸಾಗಿಸುತ್ತಿದ್ದರು. ಪೊಲೀಸ್ ತಪಾಸಣಾ ಸ್ಥಳದಲ್ಲಿ ವಾಹನ ನಿಲ್ಲಿಸದೇ ತೆರಳಿದ್ದರು ಎಂದು ವಿವರಿಸಿದರು. ಬಜರಂಗದಳದ ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸುವ ಪ್ರಯತ್ನ ಮಾಡಿದ್ದಾರೆ. ಇಂಥ ಗಂಭೀರ ಪ್ರಕರಣವು ರಾಜ್ಯದ ಕಾನೂನು– ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ನಿದರ್ಶನ ಎಂದು ಟೀಕಿಸಿದರು.

## ವಂದೇಮಾತರಂಗೆ ಅವಮಾನ: ಸೋನಿಯಾ ವಿರುದ್ಧ ಉರ್ವ ಠಾಣೆಯಲ್ಲಿ ದೂರು ದಾಖಲು

**ಮಂಗಳೂರು, ಆ.16:** ವಂದೇ ಮಾತರಂ ಗೀತೆಗೆ ಅವಮಾನಿಸಿದ ಆರೋಪದ ಮೇರೆಗೆ ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ವಿರುದ್ಧ ದೂರು ದಾಖಲಾಗಿದೆ. ಸೋನಿಯಾ ಗಾಂಧಿ ವಿರುದ್ಧ ಮಂಗಳೂರಿನ ಉರ್ವ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ.ಬಿಜೆಪಿ ಮುಖಂಡ ವಿಕಾಸ್ ಪುತ್ತೂರು ಸೋನಿಯಾ ಗಾಂಧಿ ವಿರುದ್ಧ ದೂರು ನೀಡಿದ್ದಾರೆ. ಸೋನಿಯಾ ಗಾಂಧಿ ವಿರುದ್ಧ ಈಖಖ ದಾಖಲಿಸುವಂತೆ ಆಗ್ರಹಿಸಿದ್ದಾರೆ. ಸೋನಿಯಾ ಗಾಂಧಿ ರಾಷ್ಟ್ರಗಾನಕ್ಕೆ ಅಪಮಾನ ಮಾಡಿದ್ದಾರೆ., ಉದ್ದೇಶಪೂರ್ವಕವಾಗಿ ಶಾಂತಿಭಂಗ ತಂದ ಆರೋಪ ಕೇಳಿಬಂದಿದ್ದು, ಸೋನಿಯಾ ಗಾಂಧಿ ಎಫ್ಐಆರ್ ದಾಖಲಿಸುವಂತೆ ವಿಕಾಸ್ ಪುತ್ತೂರು ಇದೀಗ ಮಂಗಳೂರಿನ ಉರ್ವ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.

## ಗುಂಡಿನ ದಾಳಿಗೆ ಮೂವರ ಬಲಿ ಪ್ರಕರಣ: ಅರಣ್ಯ ಅಧಿಕಾರಿಗಳ ವಿರುದ್ಧ ಹನೂರು ಠಾಣೆಗೆ ದೂರು

**ಬೆಂಗಳೂರು, ಆ.16:** ಕಾವೇರಿ ವನ್ಯಜೀವಿಧಾಮದ ಶಾಗ್ಯ ವಲಯದಲ್ಲಿ ಅರಣ್ಯ ಸಿಬ್ಬಂದಿಯ ಗುಂಡಿನ ದಾಳಿಗೆ ಮೂವರು ಬಲಿಯಾದ ಘಟನೆಗೆ ಸಂಬಂಧಿಸಿದಂತೆ ಅರಣ್ಯಾಧಿಕಾರಿಗಳ ವಿರುದ್ಧ ಹನೂರು ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಎಫ್ಐಆರ್ ದಾಖಲಾಗಿದೆ. ತೋಮಿಯಾರ್ ಪಾಳ್ಯದ ಮೃತ ಆಂತೋಣಿಸ್ವಾಮಿ ಪತ್ನಿ ಲೂರ್ದಾ ಮೇರಿ ನೀಡಿರುವ ದೂರಿನಲ್ಲಿ, ರಾತ್ರಿ ಬಂಡೆ ಬಳಿ ಮಲಗಿದ್ದವರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಗುಂಡು ಹಾರಿಸಿ ಕೊಂದಿದ್ದಾರೆಂದು ತಿಳಿಸಿದ್ದಾರೆ.



ಆ.14ರಂದು ಕಾಡಿಗೆ ಮೇಯಲು ಬಿಟ್ಟಿದ್ದ ಜಾನುವಾರುಗಳ ಪೈಕಿ ಎರಡು ಹಸುಗಳು ಮನೆಗೆ ವಾಪಸ್ ಬಂದಿರಲಿಲ್ಲ, ಹುಡುಕಿಕೊಂಡು ಬರುವುದಾಗಿ ಪತಿ ಆಂತೋಣಿಸ್ವಾಮಿ, ತಮ್ಮ ಸೆಬಾಸ್ಟಿಯನ್ ಡೇವಿಡ್ ಕುಮಾರ್, ಮೈದುನನಾದ ಜಾನ್ ರೋಸ್ ಪೀಟರ್ ಹಾಗೂ ದೊಡ್ಡಪ್ಪನ ಮಗನಾದ ಮಹಿಮಾದಾಸ್ ಸಂಜೆ ತೆರಳಿದ್ದವರು ಮುಂಜಾನೆ ಆದರೂ ಬರಲಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಬೆಳಗ್ಗೆ ಮಹಿಮಾದಾಸ್ ಫೋನ್ ಮಾಡಿ, ಹಸುಗಳನ್ನು ಹುಡುಕಿದರೂ ಸಿಗದಿದ್ದರಿಂದ ಕಾಡಿನ ಮಧ್ಯೆ ಒಂದು ಬಂಡೆ ಬಳಿ ಮಲಗಿದ್ದೆವು. ಮಧ್ಯರಾತ್ರಿ ತನಗೆ ಎಚ್ಚರವಾಗಿ ನಿದ್ರೆ ಬಂದಿರಲಿಲ್ಲ, ಉಳಿದ ಮೂವರು ಮಲಗಿದ್ದರು. ಅಂದಾಜು ಸುಮಾರು 5 ರ ಸುಮಾರಿಗೆ ಅರಣ್ಯ ಸಿಬ್ಬಂದಿ ಮಲಗಿದ್ದ ಮೂವರ ಮೇಲೂ ಗುಂಡು ಹಾರಿಸಿದ್ದು ಎಲ್ಲರೂ ಸ್ಥಳದಲ್ಲೇ ಮೃತಪಟ್ಟರು, ತಾನು ಅಲ್ಲಿಂದ ಓಡಿ ತಪ್ಪಿಸಿಕೊಂಡೆ ಎಂದು ತಿಳಿಸಿದನು.

ಅದಾದ ಬಳಿಕ, ನಾನು ಸಂಬಂಧಿಕರಿಗೆ ಮೃತಪಟ್ಟ ಮಾಹಿತಿ ತಿಳಿಸಿದ್ದು, ಮಲಗಿದ್ದವರನ್ನು ಕೊಲೆ ಮಾಡಿದ್ದು ಅರಣ್ಯ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ. ದೂರಿನಲ್ಲಿ ಅರಣ್ಯ ಸಿಬ್ಬಂದಿ ಅಥವಾ ಅರಣ್ಯಾಧಿಕಾರಿಗಳ ಹೆಸರನ್ನು ಉಲ್ಲೇಖಿಸಿಲ್ಲ.

**ಅರಣ್ಯ ಇಲಾಖೆ ಪ್ರಕಟಣೆ:**

ಅರಣ್ಯ ಇಲಾಖೆ ಮಾಧ್ಯಮ ಪ್ರಕಟಣೆ ಹೊರಡಿಸಿದ್ದು ಕಾವೇರಿ ವನ್ಯಜೀವಿಧಾಮದ ಹನೂರು ವಲಯದ ಶಾಗ್ಯ ಗಸ್ತಿನ ಹೊಳೆಮುರಿ ದಟ್ಟ ಅರಣ್ಯ ಪ್ರದೇಶದಲ್ಲಿ ಕಳ್ಳಬೇಟೆಗಾರರು ಬಂದೂಕು ಸಮೇತ ಪ್ರವೇಶಿಸಿರುತ್ತಾರೆ ಎಂಬ ಮಾಹಿತಿ ಲಭಿಸಿತ್ತು. ಅದರ ಮೇರೆಗೆ ಎರಡು ತಂಡ ರಚಿಸಿ ಕಾರ್ಯಾಚರಣೆ ಕೈಗೊಂಡ ವೇಳೆ, ಬೆಳಗಿನ ಜಾವ 5 ರಿಂದ 5.30ರ ವೇಳೆಗೆ ಕಲ್ಲುಬಂಡೆಗಳು, ಪೊದೆಗಳಲ್ಲಿ ಅವಿತಿದ್ದ ಕಳ್ಳಬೇಟೆಗಾರರು ಏಕಾಏಕಿ ನಾಡ ಬಂದೂಕಿನಿಂದ ದಾಳಿ ಮಾಡಿದಾಗ ಆತ್ಮರಕ್ಷಣೆಗಾಗಿ ಪ್ರತಿದಾಳಿ ಮಾಡಿದೆವು. ಕಳ್ಳಬೇಟೆಗಾರರು ನರಳಾಟ ಕೇಳಿ ಹತ್ತಿರ ಹೋಗಿ ಟಾರ್ಚ್ ಹಿಡಿದು ಪರಿಶೀಲಿಸಿದಾಗ ಮೂವರು ನರಳಾಡುತ್ತಿರುವುದು ಓರ್ವ ಓಡುತ್ತಿರುವುದು ಕಂಡು ಬಂದಿತು. ಬಳಿಕ, ಕೂಡಲೇ ಮೂವ ರನ್ನು ಕೊಳ್ಳೇಗಾಲ ಉಪ ವಿಭಾಗ ಆಸ್ಪತ್ರೆಗೆ ಕರೆದೊಯ್ದಾಗ ಮೂವರು ಕೂಡ ಮೃತಪಟ್ಟಿದ್ದಾರೆ ಎಂದು ವೈದ್ಯರು ದೃಢಪಡಿಸಿದರು ಎಂದು ಅರಣ್ಯ ಇಲಾಖೆ ತಿಳಿಸಿದೆ.



**20 ಕೆಜಿ ಮಾಂಸ ಪತ್ತೆ:**

ಆಂತೋಣಿಸ್ವಾಮಿ(50), ಜಾನ್ ರೋಸ್ ಪೀಟರ್(45) ಹಾಗೂ ಕುಮಾರ್(33) ಮೃತಪಟ್ಟಿದ್ದು, ಮಹಿಮಾದಾಸ್ ಎಂಬಾತ ತಲೆಮರೆಸಿಕೊಂಡಿದ್ದಾನೆ. ಘಟನಾ ಸ್ಥಳದಲ್ಲಿ ಎರಡು ನಾಡಬಂದೂಕು, ಎರಡು ಚೀಲದಲ್ಲಿ ಅಂದಾಜು 20 ಕೆಜಿ ಮಾಂಸ, ಹೆಡ್ ಟಾರ್ಚ್, ಬ್ಯಾಟರಿ, ಮದ್ದಿನ ಪೌಡರ್, ಗುಂಡುಗಳು, ಪಾತ್ರೆ, ಲೋಟ, ಸಾಂಬಾರ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದೇವೆ. ಮನವೊಲಿಕೆ ವಿಫಲವಾಗಿ ಕೈ ಮೀರಿದ ಸನ್ನಿವೇಶದಲ್ಲಿ ಗುಂಡು ಪ್ರತಿದಾಳಿ ನಡೆಸಲಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

**ಕೂಲಂಕಷ ತನಿಖೆ:**

ಐಜಿಪಿ ವನ್ಯಜೀವಿಧಾಮದ ಶಾಗ್ಯ ಅರಣ್ಯದಲ್ಲಿ ನಡೆದಿರುವ ಗುಂಡಿನ ದಾಳಿ ಸಂಬಂಧ ಕೂಲಂಕಷ ತನಿಖೆ ನಡೆಸಿ ಸತ್ಯಾಸತ್ಯತೆಯನ್ನು ಬೆಳಕಿಗೆ ತರಲಾಗುವುದು ಎಂದು ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ತಿಳಿಸಿದ್ದಾರೆ. ನಿನ್ನೆ ಸಂಜೆ ಹನೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮೃತ ಆಂತೋಣಿಸ್ವಾಮಿ ಪತ್ನಿ ಲೂರ್ದಾಮೇರಿ ಅರಣ್ಯಾಧಿಕಾರಿಗಳ ವಿರುದ್ಧ ದೂರು ಕೊಟ್ಟು ಮಲಗಿದ್ದವರ ಮೇಲೆ ಗುಂಡು ಹಾರಿಸಲಾಗಿದೆ ಎಂದಿದ್ದಾರೆ. ಅರಣ್ಯ ಇಲಾಖೆಯು ಆತ್ಮರಕ್ಷಣೆಗಾಗಿ ಪ್ರತಿದಾಳಿ ನಡೆಸಿರುವುದಾಗಿ ತಿಳಿಸಿದೆ. ಎರಡೂ ಆಯಾಮಗಳಲ್ಲಿ ತನಿಖೆ ನಡೆಸಿ ಸಾಕ್ಷ್ಯಾಧಾರಗಳ ಮೂಲಕ ತನಿಖೆ ನಡೆಸಲಿದ್ದು ಸತ್ಯಾಸತ್ಯತೆ ತಿಳಿಯಲಿದೆ ಎಂದಿದ್ದಾರೆ.

### ಬುದ್ಧ ಭಾರತ ಮಹಾಕಾವ್ಯ ಲೋಕಾರ್ಪಣೆ ಪ್ರೊ. ಟಿ.ಎಂ ಭಾಸ್ಕರ್ ಅಭಿನಂದನೆ

## ಬುದ್ಧ ತತ್ವಕ್ಕೆ ಮರು ಪಯಣದ ಕೃತಿ ಬುದ್ಧ ಭಾರತ ಮಹಾಕಾವ್ಯ: ವಿಕ್ರಂ ವಿಸಾಜಿ

**ಕಲಬುರಗಿ,ಆ.16–** ವಿಶ್ರಾಂತ ಕುಲಪತಿಗಳಾದ ನಾಡಿನ ಖ್ಯಾತ ಕವಿ, ನಾಟಕಕಾರ ಪ್ರೊ. ಟಿಎಂ ಭಾಸ್ಕರ್ ಅವರ ಮಹಾಕಾವ್ಯ ಬುದ್ಧ ಭಾರತವು ಬುದ್ಧನ ತತ್ವಕ್ಕೆ ಮರುಪಯಣ ಮಾಡಿಸುವ ಶ್ರೇಷ್ಠ ಮಹಾಕಾವ್ಯವಾಗಿದೆ ಎಂದು ಕವಿ,ವಿಮರ್ಶಕ ಪ್ರೊ. ವಿಕ್ರಮ್ ವಿಸಾಜಿ ಅಭಿಪ್ರಾಯ ಪಟ್ಟರು.

ಕಲಬುರಗಿ ರಂಗಾಯಣದಲ್ಲಿ ಆಗಸ್ಟ್ 16ರಂದು ಸಿರಿಗನ್ನಡ ವೇದಿಕೆ ಜಿಲ್ಲಾ ಘಟಕ,ಕರ್ನಾಟಕ ಬೌದ್ಧ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್, ಸಾಕ್ಷಿ ಪ್ರತಿಷ್ಠಾನ ಇವುಗಳ ಜಂಟಿ ಆಶ್ರಯದಲ್ಲಿ ನಡೆದ ಮಹಾಕಾವ್ಯ ಬುದ್ಧ ಭಾರತ ಕೃತಿ ಲೋಕಾರ್ಪಣೆ ಹಾಗೂ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಟಿ.ಎಂ ಭಾಸ್ಕರ್ ಅವರ ಅಭಿನಂದನಾ ಸಮಾರಂಭದಲ್ಲಿ ಕೃತಿಯ ಕುರಿತು ಮಾತನಾಡಿ 400 ಪುಟಗಳ ಮಹಾಕಾವ್ಯದಲ್ಲಿ ಬುದ್ಧನ ಜೀವನ ಮತ್ತು ಬುದ್ಧನ ತತ್ವ ಪ್ರಮುಖ ಅಂಶಗಳಾಗಿ ಶಾಂತ ರಸದಲ್ಲಿ ಮಹಾಕಾವ್ಯ ರಚನೆಗೊಂಡಿದೆ. ಜಾನಪದ, ವಚನ, ತತ್ವಪದಗಳ ಪ್ರೇರಣೆಯಿಂದ ಹಾಡುಗಬ್ಬವಾಗಿ ಮಹಾಕಾವ್ಯವು ಮೂಡಿಬಂದಿದೆ. ಭಾಷೆಯ ಜೊತೆ ತಾದತಮ್ಯ ಹೊಂದಿ ಬುದ್ಧನ ಶೀಲ,ಪ್ರಜ್ಞೆ, ಕರುಣೆಯನ್ನು 29 ಭಾಗಗಳಲ್ಲಿ ಮಹಾಕಾವ್ಯದಲ್ಲಿ ಕಟ್ಟಿಕೊಡಲಾಗಿದೆ. ಭಾಸ್ಕರ್ ಅವರು ಮಹಾಕಾವ್ಯವನ್ನು ವಿಭಿನ್ನ ಶೈಲಿಯಲ್ಲಿ ಹುಡುಕಾಟ, ವಿನಯ ಪೂರ್ವಕ ಶೈಲಿಯಲ್ಲಿ ಸ್ವರಾಕ್ಷರಗಳ ಮೂಲಕ ವೈಚಾರಿಕತೆಯನ್ನು ಕಟ್ಟಿಕೊಡಲು ಪ್ರಯತ್ನಿಸಿ ಬುದ್ಧ ತತ್ವದೆಡೆಗೆ ಓದುಗನನ್ನು ಮರುಪಯಣ ಮಾಡುವಂತೆ ರಚಿಸಿದ್ದಾರೆ ಎಂದು ವಿಸಾಜಿ ಹೇಳಿದರು.



ಕೃತಿಯನ್ನು ಲೋಕಾರ್ಪಣೆ ಮಾಡಿದ ಪುಸ್ತಕ ಉದ್ಯಮಿ ಡಾ. ಬಸವರಾಜ್ ಜಿ ಕೊನೆಕ್ ಮಾತನಾಡಿ ಮಹಾಕಾವ್ಯಗಳ ಯುಗ ಮುಗಿಯಿತು ಎಂಬ ಕಾಲಘಟ್ಟದಲ್ಲಿ ಕಲ್ಯಾಣ ಕರ್ನಾಟಕದ ನೆಲದಿಂದ ಬುದ್ಧ ಭಾರತ ಮಹಾಕಾವ್ಯವನ್ನು ಪ್ರೊ ಭಾಸ್ಕರ್ ಮಹಾಕಾವ್ಯವನ್ನು ಉತ್ಕೃಷ್ಟವಾಗಿ ರಚನೆ ಮಾಡಿಕೊಟ್ಟಿದ್ದಾರೆ ಎಂದು ಬಣ್ಣಿಸಿದರು. ಕನ್ನಡ ಲೇಖಕರು ಓದುಗರ ಸಹಕಾರಿ ಸಂಘದ ಅಧ್ಯಕ್ಷರಾದ ಅಪರಾವು ಅಕ್ಕೋಣಿ ಮಾತನಾಡಿ ಮಹಾಕಾವ್ಯ ಬುದ್ಧ ಭಾರತದಲ್ಲಿ ಸಾರುವ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿ ಬಾಳಬೇಕು ಎಂದು ಹೇಳಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯರಾದ ಡಾ. ಜಯದೇವಿ ಗಾಯಕವಾಡ ಮಾತನಾಡಿ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ಪ್ರೊ. ಟಿ ಎಂ ಭಾಸ್ಕರ್ ಬುದ್ಧ ಭಾರತ ಮಹಾಕಾವ್ಯವನ್ನು ರಚನೆ ಮಾಡಿ ಮಹಾಕವಿಯಾಗಿ ಗುರುತಿಸಿಕೊಂಡಿದ್ದಾರೆ. ಸಾಹಿತ್ಯ ಲೋಕದ ಮಹಾಕಾವ್ಯ ಪ್ರಕಾರಕ್ಕೆ ಈ ಕೃತಿಯ ಮೂಲಕ ಹೊಸ ಭಾಷ್ಯವನ್ನು ಬರೆದು ಬುದ್ಧ ಜೀವನ ತತ್ವ ಸಂದೇಶಗಳನ್ನು ಅನಾವರಣ ಮಾಡಿಕೊಟ್ಟಿದ್ದಾರೆ ಎಂದರು.

ಆರ್ ಕೆ ಹುಡುಗಿ ಬಸವರಾಜ್ ಪೊಲೀಸ್ ಪಾಟೀಲ್ ಡಾ. ಸದಾನಂದ ಪೆರ್ಲ ಡಾ. ಕೆ ಎಸ್ ಬಂದು ಎ.ಬಿ ಹೊಸಮನಿ ಶಿವರಂಜನ ಸತ್ಯಂಪೇಟೆ ಡಾ. ಶೀಲಾ ಬಿರಾದಾರ ಡಾ ನಾರಾಯಣ ರೋಲೆಕರ್, ಡಾ. ಸಂಧ್ಯಾ ಕಾನೇಕರ್, ಪ್ರೊ ವೆಂಕಟರೆಡ್ಡಿ, ವೀರಭದ್ರ ಸಿಂಪಿ, ವೆಂಕಟೇಶ ಜನಾದ್ರಿ, ನಾರಾಯಣರಾವ್ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.

ಅಧ್ಯಯನ ಶೀಲ ಮನೋವೃತ್ತಿಯ ಪ್ರೊ ಟಿ ಎಂ ಭಾಸ್ಕರ್ ಅವರು ಮಹಾಕಾವ್ಯದ ಮೂಲಕ ನಾಡಿನ ಶ್ರೇಷ್ಠ ಮಹಾ ಕಾವ್ಯ ರಚನೆಕಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. **–ವರ ಜ್ಯೋತಿ ಬಂತೇಜಿ ಅಣದೂರು**

– ಮಹಾಕಾವ್ಯವನ್ನು ರಚಿಸಲು ಅಪಾರ ಶ್ರಮ ಅಧ್ಯಯನ ನಂತರ 30 ವರ್ಷಗಳ ಪರಿಶ್ರಮಕ್ಕೆ ಉತ್ತರ ರೂಪದಲ್ಲಿ ಬುದ್ಧಭಾರತ ಮಹಾ ಕಾವ್ಯದ ಮೊದಲ ಸಂಪುಟ ಬಂದಿದೆ. ಎರಡನೇ ಸಂಪುಟವು ಮುಂದಿನ ಏಪ್ರಿಲ್ ಒಳಗೆ ಪ್ರಕಾಶನಗೊಳ್ಳಲಿದೆ. **–ಪ್ರೊಫೆಸರ್ ಟಿ ಎಂ ಭಾಸ್ಕರ್ ವಿಶ್ರಾಂತ ಕುಲಪತಿಗಳು**

– ಪ್ರೊಫೆಸರ್ ಟಿ ಎಂ ಭಾಸ್ಕರ್ ಬಡತನದಲ್ಲಿ ಹುಟ್ಟಿ ಸಾಧನೆಯ ಮೂಲಕ ಹಂತ ಹಂತವಾಗಿ ವಿವಿಧ ಸ್ಥಾನಗಳನ್ನು ಅಲಂಕರಿಸಿ ಶಿಕ್ಷಣ, ಸಾಹಿತ್ಯ ಆಡಳಿತ ಕ್ಷೇತ್ರದಲ್ಲಿ ಕಪ್ಪು ಚುಕ್ಕೆ ಇಲ್ಲದೆ ನಿಸ್ಪೃಹ ಸೇವೆ ಸಲ್ಲಿಸಿದ ಕಲ್ಯಾಣ ಕರ್ನಾಟಕದ ಭಾಗದ ಹೆಮ್ಮೆಯ ಸಾಹಿತಿ.**– ಡಾಕ್ಟರ್ ಹನುಮಂತ ರಾವ್ ಬಿ ದೊಡ್ಡಮನಿ ಸಾಹಿತಿ.**

## ಪಂಚಾಯತ್‌ರಾಜ್ ಇಲಾಖೆಯ 1,400 ಖಾಲಿ ಹುದ್ದೆ ಭರ್ತಿಗೆ ಶೀಘ್ರ ಅಧಿಸೂಚನೆ: ಸಚಿವ ಈಶ್ವರ ಖಂಡ್ರೆ

**ಬೀದರ್, ಆ. 16:** ಪಂಚಾಯತ್ ಚುನಾವಣೆಗಳನ್ನು ಶೀಘ್ರ ನಡೆಸುವುದರೊಂದಿಗೆ ಪಂಚಯತ್ ರಾಜ್ ಇಲಾಖೆಗಳಲ್ಲಿ ಖಾಲಿ ಇರುವ 1400 ಹುದ್ದೆಗಳನ್ನು ಶೀಘ್ರ ಭರ್ತಿ ಮಾಡುವ ಮೂಲಕ ಪಂಚಾಯತ್ ವ್ಯವಸ್ಥೆ ಮತ್ತು ಆಡಳಿತ ಸುಗಮವಾಗಿ ನಡೆಯುವಂತೆ ಕ್ರಮ ಕೈಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.



ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಗರದ ಜಿಲ್ಲಾ ನೆಹರೂ ಕ್ರೀಡಾಂಗಣದಲ್ಲಿ ಜಿಲ್ಲಡಳಿತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ತ್ರಿವರ್ಣ ಧ್ವಜಾರೋಹಣ ನೆರವೇರಿಸಿ, ತೆರೆದ ಜೀಪಿನಲ್ಲಿ ತೆರಳಿ ಗೌರವ ವಂದನೆ ಸ್ವೀಕರಿಸಿದರು. ಇದಾದ ಬಳಿಕ ವಿವಿಧ ತುಕಡಿಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು. ಪೊಲೀಸ್, ಡಿಎಆರ್, ಎನ್.ಸಿ.ಸಿ., ಸ್ಕೌಟ್ಸ್ ಮತ್ತು ಗೈಡ್ಸ್, ಗೃಹರಕ್ಷಕ ದಳ, ಮಹಿಳಾ ಪೊಲೀಸ್ ತಂಡ, ಅರಣ್ಯ ಇಲಾಖೆ ತಂಡ, ಅಗ್ನಿಶಾಮಕ ದಳ, ಸೇವಾ ದಳ ತಂಡ ಪಥ ಸಂಚಲನದಲ್ಲಿ ಪಾಲ್ಗೊಂಡಿತು.

ನಂತರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವ ಈಶ್ವರ ಖಂಡ್ರೆ ಅವರು, ರಾಜ್ಯದಲ್ಲಿ ಒಟ್ಟಾರೆ 72 ಸಾವಿರ ಹುದ್ದೆಗಳ ನೇಮಕಾತಿಗೆ ಸರ್ಕಾರ ಕ್ರಮ ಕೈಗೊಂಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಹೊಸದಾಗಿ 1,400 ಹುದ್ದೆಗಳ ಭರ್ತಿಗೆ ಶೀಘ್ರವೇ ಅಧಿಸೂಚನೆ ಹೊರಡಿಸಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ನಿತ್ಯ ಐದು ಲಕ್ಷ ಜನರಿಗೆ ಉದ್ಯೋಗ ನೀಡಲು ಅವಕಾಶವಿದ್ದು, 1.5 ಕೋಟಿ ಮಾನವ ದಿನಗಳ ಸೃಜನೆ ನಮ್ಮ ಗುರಿ. ಈ ಮೂಲಕ ಶಾಶ್ವತ ಹಾಗೂ ದೀರ್ಘಕಾಲ ಬಾಳಿಕೆ ಬರುವ ಗ್ರಾಮೀಣ ಆಸ್ತಿಗಳ ಸೃಷ್ಟಿ ಮಾಡುವುದು ಸಂಕಲ್ಪವಾಗಿದೆ ಎಂದರು.

ಕ್ಷೇತ್ರ ಪುನರ್ ವಿಂಗಡಣೆ ಕಾರ್ಯ ಮುಗಿಯುತ್ತ ಬಂದಿದ್ದು, ಮೀಸಲು ಪ್ರಕಟಿಸಿ ಸಚಿವ ಸಂಪುಟದ ಅನುಮೋದನೆಯೊಂದಿಗೆ ರಾಜ್ಯ ಚುನಾವಣೆ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು. ಈ ವರ್ಷಾಂತ್ಯದೊಳಗೆ ಎಲ್ಲಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ ಎಂದು ತಿಳಿಸಿದರು.

ರೈತರು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಅನುಕೂಲವಾಗಲೆಂದು ರೈತರ ಹೊಲ ಗದ್ದೆಗಳಿಗೆ ಸಂಪರ್ಕ ರಸ್ತೆ ನಿರ್ಮಿಸಲು 'ನಮ್ಮ ಹೊಲ, ನಮ್ಮ ದಾರಿ' ಯೋಜನೆಯ ಅಡಿಯಲ್ಲಿ ಮೊದಲ ಹಂತದಲ್ಲಿ 100 ಕಿ.ಮೀ ರಸ್ತೆ ಅಭಿವೃದ್ಧಿಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಶಾಸಕರಾದ ರಹೀಂಖಾನ್, ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಭೀಮರಾವ್ ಪಾಟೀಲ್, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಸಂಸದ ಸಾಗರ್ ಖಂಡ್ರೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಬೀದರ್ ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್ ಉಪಸ್ಥಿತರಿದ್ದರು.

## ಕುಡಿಯುವ ನೀರು, ರೈತರ ಹಿತ ಕಾಪಾಡುವುದೇ ನಮ್ಮ ಸರ್ಕಾರ ಮೊದಲ ಆದ್ಯತೆ- ಸಚಿವ ನಾಗೇಂದ್ರ

**ಎಲ್.ಎಲ್.ಸಿ. ಕೆಳಮಟ್ಟದ ಕಾಲುವೆಗೆ ಸಮರ್ಪಕ ನೀರಿನ ಪೂರೈಕೆ ವಿಚಾರವಾಗಿ ಆಂಧ್ರಪ್ರದೇಶದ ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ**

**ಬೆಂಗಳೂರು ಆ 16.** 126ನೇ ಸಲಹಾ ಸಮಿತಿ ಸಭೆಯ ನಿರ್ಣಯ ಮೇರೆಗೆ ಎಲ್. ಎಲ್. ಸಿ ಕೆಳಮಟ್ಟದ ಕಾಲುವೆಗಳಿಗೆ ಕರ್ನಾಟಕದ ಪಾಲಿನಲ್ಲಿ ನೀಡಲಾಗಿದ್ದ 650 ಕೂಸೆಕ್ಸ್ ನೀರು ಬಳ್ಳಾರಿ ಜಿಲ್ಲೆಯ ಜನರ ಬೆಳೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಸಾಲದೇ ಇರುವ ಹಿನ್ನೆಲೆಯಲ್ಲಿ ಇಂದು ಯೋಜನೆ, ಕಾರ್ಯಕ್ರಮ ಹಾಗೂ ಸಂಯೋಜನೆ ಮತ್ತು ಸಾಂಖಿಕ್ಯ ಇಲಾಖೆ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ. ನಾಗೇಂದ್ರ ರವರು ತಮ್ಮ ಟಿಬಿ ಡ್ಯಾಂ ನ ಹಿರಿಯ ಅಧಿಕಾರಿಗಳು ಹಾಗೂ ರೈತರ ಸಂಘಟದ ಅಧ್ಯಕ್ಷರೊಂದಿಗೆ ಮಾತುಕತೆ ನಡೆಸಿದ್ದಾರೆ.

ಟಿಬಿ ಡ್ಯಾಂ ನೀರಿನ ವಿಚಾರದಲ್ಲಿ ಆಂಧ್ರಪ್ರದೇಶ ಮತ್ತು ಕರ್ನಾಟಕದ ಒಪ್ಪಂದದಂತೆ 1973ರಿಂದ 2025 ರವರೆಗೂ ಎಲ್. ಎಲ್. ಸಿ. ಕೆಳಮಟ್ಟದ ಕಾಲುವೆಗಳಿಗೆ ಕರ್ನಾಟಕ ಪಾಲು ಮತ್ತು ಆಂಧ್ರ ಪಾಲು ಎರಡು ಸೇರಿ ಒಟ್ಟಿಗೆ ತೆಗೆದು ಹೋಗುವ ಪದ್ಧತಿ ಇತ್ತು ಇದೀಗ ಏಕಾ ಏಕಿ ತಮ್ಮ ಪಾಲನ್ನು ತೆಗೆದುಕೊಳ್ಳದ ಕಾರಣ ಆಂಧ್ರಪ್ರದೇಶದ ನೀರಾವರಿ ಇಲಾಖೆಯ ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ ಕೂಡಲೇ ನೀರಾವರಿ ಸಲಹಾ ಸಮಿತಿ ಸಭೆ ಕರೆದು ತಮ್ಮ ಪಾಲಿನ ನೀರನ್ನು ಅಗತ್ಯವಾಗಿ ಬಿಡಿಸಿಕೊಳ್ಳಬೇಕು ಇಲ್ಲವಾದಲ್ಲಿ ಎರಡು ರಾಜ್ಯಗಳ ರೈತರಿಗೆ ಹಾಗೂ ಸಾರ್ವಜನಿಕವಾಗಿ ಕುಡಿಯುವ ನೀರಿಗೆ ತೊಂದರೆ ಆಗುತ್ತದೆ ಎಂದು ತಿಳಿಸಿದ್ದಾರೆ.

ವಿಶೇಷವಾಗಿ ನಮ್ಮ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಡಿಕೆ ಶಿವಕುಮಾರ್ ರವರೊಂದಿದೆ ದೂರವಾಣಿ ಕರೆಯ ಮೂಲಕ



ಸಚಿವ ಬಿ. ನಾಗೇಂದ್ರ ರವರು ಮಾತನಾಡಿದಾಗ ರಾಜ್ಯದ ರೈತಾಪಿ ವರ್ಗದ ಜನರ ಸಮಸ್ಯೆಗೆ ನಮ್ಮ ಮೊದಲ ಆದ್ಯತೆ ನೀಡಬೇಕು ನಾಡಿನ ನೀರಿನ ವಿಚಾರದಲ್ಲಿ ನಾನು ಹಾಗೂ ನಮ್ಮ ಎಲ್ಲಾ ಸಚಿವರು ಹಗಲಿರುಳು ಶ್ರಮಿಸುತ್ತೇವೆ ಎಂದು ತಿಳಿಸಿದ್ದಾರೆ.

ಇಂದು ನಡೆದ ಸಭೆಯಲ್ಲಿ ಮುಖ್ಯಮಂತ್ರಿಗಳ ಸಹಕಾರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ ರವರ ಸಹಕಾರಕ್ಕೆ ತುಂಗಭದ್ರಾ ರೈತ ಸಂಘದ ಅಧ್ಯಕ್ಷರಾದ ದರೂರು ಪುರುಷೋತ್ತಮ್ ಗೌಡರು ರಾಜ್ಯ ಸರ್ಕಾರಕ್ಕೆ ಹಾಗೂ ಬಳ್ಳಾರಿ ಜಿಲ್ಲೆಯ ಮಂತ್ರಿಗಳಿಗೆ ಮತ್ತು ಶಾಸಕರಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ.

## ರಾಯಚೂರಿನಲ್ಲಿ ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ

# ಗ್ಯಾರಂಟಿ ಯೋಜನೆ ಜಾರಿ: ನುಡಿದಂತೆ ನಡೆಯುವ ಸರ್ಕಾರ- ಅಜಯಸಿಂಗ್

**ರಾಯಚೂರು, ಆ. 16:** ಚುನಾವಣೆಯಲ್ಲಿ ಭರವಸೆ ನೀಡಿದಂತೆ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ನುಡಿದಂತೆ ನಡೆಯುತ್ತಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಯೋಜನೆಗಳನ್ನು ತಲುಪಿಸುವ ಮೂಲಕ ರಾಜ್ಯವನ್ನು ಬಡತನದಿಂದ ಮೇಲೆತ್ತುವ ಕೆಲಸ ಮಾಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯಸಿಂಗ್ ಹೇಳಿದರು.



ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ 80 ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನಡೆಸಿದ ಬಳಿಕ ಮಾತನಾಡಿದ ಸಚಿವರು, ರಾಜ್ಯದಲ್ಲಿ ತೀವ್ರ ಬರ ಆವರಿಸಿದ್ದು, ಈ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ಬಹಳ ಉಪಕಾರವಾಗುತ್ತಿವೆ ಎಂದ ಅವರು, ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ 29 ರಷ್ಟು ಮಳೆಯ ಕೊರತೆಯಾಗಿದೆ. ಮುಂಗಾರು ಬಿತ್ತನೆಗೆ ಹಿನ್ನೆಡೆಯಗಿದೆ. ಅನೇಕ ಕಡೆಗಳಲ್ಲಿ ಬಿತ್ತನೆ ಮಾಡಿರುವದೂ ಹಾಳಾಗಿದೆ. ಮತ್ತೆ ಎಕವೊಂದೆಡೆ ಬಿತ್ತನೆಯೇ ನಡೆದಿಲ್ಲ. ಇದು ರೈತರಿಗೆ ಮಾತ್ರವಲ್ಲ ಆಹಾರ ಧಾನ್ಯ ಉತ್ಪಾದನೆಯ ಹಾನಿಯಾಗಿದ್ದು, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ರಯತರ ನೆರವಿಗೆ ಬರಲಿದೆ ಎಂದೂ ಹೇಳಿದರು.

ಜಿಲ್ಲೆಯ ಸಿಂಧನೂರು, ಅರಕೇರ, ದೇವದುರ್ಗ, ಮಸ್ಕಿಯಲ್ಲಿ ಮಳೆ ಬಹಳ ಕೊರತೆಯಾಗಿದೆ. ಜಿಲ್ಲೆಯಲ್ಲಿ 5 ಲಕ್ಷ ಹೆಕ್ಟರ್ ಪ್ರದೇಶ ಬಿತ್ತನೆ ಗುರಿ ಇತ್ತು. ಕೇವಲ 2.36 ಲಕ್ಷ ಬಿತ್ತನೆಯಾಗಿದೆ. ಬೆಳೆ ಹಾನಿಯ ಬಗ್ಗೆ ಎಲ್ಲಾ ತಾಲೂಕುಗಳಿಗೆ ಭೇಟಿ ನೀಡಿ ವೀಕ್ಷಣೆ ಮಾಡಿ, ರೈತರ ಸಮಸ್ಯೆ ಆಲಿಸಿದ್ದೇವೆ. ಶೀಘ್ರವೇ ಸರ್ಕಾರಕ್ಕೆ ವರದಿ ಸಲ್ಲಿಸಿ ಪರಿಹಾರ ಕೊಡಿಸಲಾಗುವುದು ಎಂದರು.

ಬರ ನಿರ್ವಹಣೆಗೆ ಸರ್ಕಾರ ಮುಂದಾಗಿದ್ದು ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಜಿಲ್ಲಾಡಳಿತದ ಪಿ.ಡಿ ಖಾತೆಯಲ್ಲಿ 4 ಕೋಟಿ ಅನುದಾನ ಲಭ್ಯವಿದೆ. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಪ್ರತಿ ತಾಲೂಕಿಗೆ 1 ಲಕ್ಷ ತುರ್ತು ಪರಿಹಾರ ಬಿಡುಗಡೆಯಾಗಿದೆ. ಕಲಬುರಗಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರು ರಾಯಚೂರು ಜಿಲ್ಲೆಗೆ ಒಟ್ಟು 11 ಕೋಟಿ ಜಿಲ್ಲೆಗೆ ಘೋಷಣೆ ಮಾಡಿದ್ದು, ಈಗಾಗಲೇ ಮೊದಲ ಕಂತು 5 ಕೋಟಿ ಬಿಡುಗಡೆಯಾಗಿದೆ. ಉಳಿದ ಹಣ ಬಿಡುಗಡೆ ಮಾಡಲಾಗುತ್ತದೆ ಎಂದರು.

ಜಿಲ್ಲೆಯ ಸಿಂಧನೂರು, ಮಾನ್ವಿ, ಭಾಗಶಃ ರಾಯಚೂರು ತಾಲ್ಲೂಕು ತುಂಗಭದ್ರಾ ನೀರಾವರಿ ಪ್ರದೇಶಕ್ಕೆ ಒಳಪಟ್ಟಿದ್ದು, ಈಗಾಗಲೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಮುಂಗಾರು ಹಂ<ಗಾಮಿಗೆ 90 ದಿನಗಳ ನೀರು ಹರಿಸಲು ತೀರ್ಮಾನಿಸಲಾಗಿದೆ. ಅದರಂತೆ ಜಿಲ್ಲೆಯ ಲಿಂಗಸುಗೂರ, ದೇವದುರ್ಗ ತಾಲ್ಲೂಕುಗಳು ಕೃಷ್ಣಾ ನೀರಾವರಿಗೆ ಒಳಪಡಲಿದ್ದು, ಈ ಮಾಸಾಂತ್ಯದಲ್ಲಿ ಅವರಿಗೂ ಕಾಲುವೆ ನೀರು ಹರಿಸಿದರೆ ಒಂದಷ್ಟು ರೈತರಿಗೆ ಪರಿಹಾರ ದೊರೆತಂತಾಗುತ್ತದೆ ಎಂದರು.

ನಗರ ಶಾಸಕ ಡಾ.ಶಿವರಾಜ ಪಾಟೀಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್, ಎಂಎಲ್ ಸಿ ಎ.ವಸಂತಕುಮಾರ, ಜಿಲ್ಲಾಧಿಕಾರಿ ಪೂವಿತಾ ಎಸ್, ಜಿ.ಪಂ ಸಿಇಒ ಈಶ್ವರ ಕುಮಾರ ಕಾಂದು, ಎಸ್ ಪಿ ಅರುಣಾಂಗ್ಷುಗಿರಿ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು. ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು.



ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಜನ್ಮ ದಿನಾಚರಣೆಯ ಸ್ಮರಣಾರ್ಥ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರನ್ ಫಾರ್ ರಾಜೀವ್ 5ಕೆ ಮ್ಯಾರಥಾನ್‌ನ 2ನೇ ಆವೃತ್ತಿ ನಡೆಯಿತು

## ಸನ್ಮಾನ ಗೆಳೆಯರ ಬಳಗ ಹಾಗೂ ನಾರಾಯಣ ಸೇವಾ ಸಂಸ್ಥೆ ಸಹಯೋಗ

# ಮಾಡ್ಯುಲರ್ ಕೃತಕ ಕೈ-ಕಾಲಿನ ಅಂಗಗಳ ಅಳವಡಿಕೆಯ ಮಾಪನದ ಉಚಿತ ಶಿಬಿರ-ಲಕ್ಷ್ಮಿಕಾಂತರೆಡ್ಡಿ

**ಬಳ್ಳಾರಿ, ಆ.16.**ಬಳ್ಳಾರಿ ನಗರದ ಸನ್ಮಾನ ಗೆಳೆಯರ ಬಳಗ ಹಾಗು ನಾರಾಯಣ ಸೇವಾ ಸಂಸ್ಥೆ ಸಹಯೋಗದಲ್ಲಿ ನಗರದ ಕ್ಲಾಸಿಕ್ ಪಂಕ್ಷನ್ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ಮಾಡ್ಯುಲರ್ ಕೃತಕ ಕೈ ಕಾಲಿನ ಅಂಗಗಳ ಅಳವಡಿಕೆಯ ಮಾಪನದ ಉಚಿತ ಶಿಬಿರದಲ್ಲಿ ದೇಶದ ವಿವಿಧಡೆಯಿಂದ ಬಂದಿದ್ದ 1500 ಕ್ಕು ಹೆಚ್ಚು ವಿಕಲಚೇತನರು ಪಾಲ್ಗೊಂಡಿದ್ದರು. ಅಪಘಾತ, ಗ್ಯಾಂಗರಿನ್ ಮೊದಲಾದ ಕಾರಣಗಳಿಂದ ಕೈ ಕಾಲು ಕಳೆದ ಕೊಂಡ ದೇಶದ. ಗೋವಾ, ರಾಜಸ್ಥಾನ, ಅಸ್ಸಾಂ, ಮಹಾರಾಷ್ಟ್ರ, ಬಿಹಾರ್,ತೆಲಂಗಾಣ ಆಂದ್ರಪ್ರದೇಶ ರಾಜ್ಯಗಳ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಜನರು ಆಗಮಿಸಿದ್ದರು.



ಬೆಳಗಿನಿಂದಲೇ ಉದಯಪುರದಿಂದ ಬಂದಿರುವ 30 ಕ್ಕೂ ಹೆಚ್ಚು ವೈದ್ಯ ಸಿಬ್ಬಂದಿ ವಿಕಲಚೇತನರ ಕೈ ಕಾಲುಗಳ ತಪಾಸಣೆ ನಡೆಸಿ. ಅಳತೆ ತೆಗೆದುಕೊಂಡರು.

ಶಿಬಿರದಲ್ಲಿ ಅಳತೆ ತೆಗೆದುಕೊಂಡು ಅರ್ಹರಿಗೆ ಎರೆಡು ತಿಂಗಳನಂತರ ಕೃತಕ ಅಂಗಾಗಳನ್ನು ಅಳವಡಿಸಲಾಗುತ್ತದೆ. ಒಂದೊಂದು ಅಂಗ ಕನಿಷ್ಟ 75 ಸಾವಿರದಿಂದ ಒಂದು ವರೆ ಲಕ್ಷದ ವರೆಗೆ ವೆಚ್ಚದ್ದಾಗಿರುತ್ತವೆ. ಈ ಶಿಬಿರದಲ್ಲಿ ಅಳವಡಿಸುವ ಕೃತಕ ಮಾಡ್ಯುಲರ್ ಕೈ ಕಾಲುಗಳಿಂದ ಸಹಜ ಕೈ ಕಾಲಿನಂತೆ ಚಲನ ವಲನ ಮಾಡಬಹುದು.ಶಿಬಿರಕ್ಕೆ ಬಂದ ಜನರಿಗೆ ಮತ್ತು ಅವರ ಸಹಾಯಕರಿಗೆ ಸ್ಥಳೀಯವಾಗಿ ಸಾರಿಗೆ ಊಟ, ಉಪಹಾರ, ವಸತಿ ವ್ಯವಸ್ಥೆ ಮಾಡಿತ್ತು.

ಶಿಬಿರದ ವೀಕ್ಷಣೆಗೆ ನಗರದ ಮಾಜಿ ಗಾಲಿ ಸೋಮಶೇಖರೆಡ್ಡಿ, ಕುರುಗೋಡಿನ ಮಾಜಿ ಶಾಸಕ ನಾರಾ ಸೂರ್ಯನಾರಾಯಣ ರೆಡ್ಡಿ, ಐಜಿಪಿ ಡಾ. ಹರ್ಷ ಮೊದಲಾದ ಗಣ್ಯರು ಆಗಮಿಸಿ ಈ ಕಾರ್ಯದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸನ್ಮಾರ್ಗ ಗೆಳೆಯರ ಬಳಗದ ಅಧ್ಯಕ್ಷ ಎಚ್ ಲಕ್ಷ್ಮೀಕಾಂತರೆಡ್ಡಿ, ಕಾರ್ಯದರ್ಶಿ ಕಪ್ಪಗಲ್ಲು ಆಚಾರಿ, ಸದಸ್ಯರಾದ ಮಹೇಶ್ ಮೊದಲಾದವರು ಸೇರಿದಂತೆ 200ಕ್ಕೂ ಹೆಚ್ಚು ಜನರು ಶಿಬಿರದಲ್ಲಿ ಮಾರ್ಗದರನ ನೀಡುತ್ತಿದ್ದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡಿಸಿಕೊಂಡ ಎಲ್ಲರೂ ಶ್ಲಾಘನೆ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಇನ್ನೂ ಎಚ್ಚಿನ ಇಂತಹ ಕಾರ್ಯಕ್ರಮಗಳು ಮಾಡಲು ಆ ಭಗವಂತ ಇವರಿಗೆ ಶಕ್ತಿಯನ್ನು ಪ್ರಸಾದಿಸಲಿ ಎಂದು ಪ್ರಾರ್ಥಿಸಿದರು.

## ಬಿಜೆಪಿ ಓಬಿಸಿ ಮೋರ್ಚಾವತಿಯಿಂದ ಬಡಮಕ್ಕಳಿಗೆ ನೋಟ್‌ಬುಕ್, ಕಿಟ್ ವಿತರಿಸಿದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ

**ಬಳ್ಳಾರಿ, ಆ.16:** ನಗರದ 11ನೇ ವಾರ್ಡ್ ನ ಮಲ್ಲಿಕಾರ್ಜುನ ದೇವ ಸ್ಥಾನದ ಹತ್ತಿರ ಬಿಜೆಪಿಯ ಓಬಿಸಿ ಮೋರ್ಚಾದಿಂದ ಹಮ್ಮಿಕೊಂಡಿದ್ದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು.

ನಂತರ ಸೋಮಶೇಖರ್ ರೆಡ್ಡಿ ಅವರು ಬಡಮಕ್ಕಳಿಗೆ ನೋಟ್ ಬುಕ್ ಕಿಟ್ ವಿತರಿಸಿದರು.

ಈ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯ ಓಬಿಸಿ ಮೋರ್ಚ ಕಾರ್ಯಕಾರಣಿ ಸದಸ್ಯ ಯಾಳ್ಪಿ ಎಚ್ ತಿಪ್ಪಣ್ಣ ಆಯೋಜಿಸಿದ್ದರು.

ಪಾಲಿಕೆ ಸದಸ್ಯ ಮೋತ್ಕರ್ ಶ್ರೀನಿವಾಸ್, ಎನ್.ಗೋವಿಂದ ರಾಜುಲು, ಹೇಮಣ್ಣ, ವೀರಶಂಕರ್ ರೆಡ್ಡಿ, ಸ್ವಂತ ಗಿರಿ, ಕೆಎಂ ಗುರುಬಸಯ್ಯ ಸ್ವಾಮಿ, ರಮಣ, ಕೆಎಂ ಶಿವಪ್ರಸಾದ್, ತೇಜಸ್, ಗೋವರ್ಧನ್, ಕಾಂಡ್ರಾ ಬಾಬು, ತಿಲಕ್ ರಾಮ್, ಇದ್ದರು.




# ಸುಗಮ ವ್ಯವಹಾರಕ್ಕೆ ಸಂಪೂರ್ಣ ಸಹಕಾರ: ಉಪ ಆಯುಕ್ತೆ ಶಾಲೂ




**ಕಲಬುರಗಿ, ಆ. 16:** ಹೋಟೆಲ್ ಉದ್ಯಮಿಗಳು ಕಾನೂನು ಚೌಕಟ್ಟಿನಲ್ಲಿ ಸುಗಮವಾಗಿ ವ್ಯಾಪಾರ ವಹಿವಾಟು ನಡೆಸಲು ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ಪೊಲೀಸ್ ಉಪ ಆಯುಕ್ತೆ (ಕಾನೂನು ಮತ್ತು ಭದ್ರತೆ ಡಿಸಿಪಿ) ಶಾಲೂ ಹೇಳಿದರು.

ನಗರದ ಸಾರ್ವಜನಿಕ ಉದ್ಯಾನ ವನದ ಯಾತ್ರಿಕ ನಿವಾಸ ಸಭಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲಾ ಹೋಟೆಲ್, ಬೇಕರಿ ಮತ್ತು ವಸತಿಗೃಹ ಮಾಲೀಕರ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ವಸತಿಗೃಹದಲ್ಲಿ ಸಿಸಿ ಕ್ಯಾಮರಾ, ನೋಂದಣಿ ಪುಸ್ತಕ ಮತ್ತು ಗ್ರಾಹಕರ ಆಧಾರ್ ಕಾರ್ಡ್ ಕಡ್ಡಾಯ ಹೊಂದಿರ ಬೇಕು.

ಜೂಜಾಟ, ವೇಶ್ಯಾವಾಟಿಕೆ ಸೇರಿ ಅಕ್ರಮ ಚಟುವಟಿಕೆಗಳಿಗೆ ವಸತಿಗೃಹ ನೀಡಿದರೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಹೋಟೆಲ್ ಅಸೋಸಿಯೇಷನ್ ಉಪಾಧ್ಯಕ್ಷ ಸತ್ಯನಾಥ ಶೆಟ್ಟಿ ಅವರು ಹೋಟೆಲ್ ಗಳಲ್ಲಿನ ಸಮಸ್ಯೆಗಳತ್ತ ಗಮನ ಸೆಳೆದರು. ಉದ್ಯಮಿಗಳಿಗೆ ಯಾವುದೇ ರೀತಿಯಲ್ಲಿ ಕಿರುಕುಳ ನೀಡದಂತೆ ಪೊಲೀಸರಿಗೆ ಸಲಹೆ ನೀಡಲಾಗುವುದು. ಆಧಾರ್ ಕಾರ್ಡ್, ಸಿಸಿ ಕ್ಯಾಮರಾ ಸೇರಿ ಸೂಕ್ತ ದಾಖಲೆಪತ್ರ ಇಟ್ಟು ಕೊಳ್ಳುವಂತೆ ಶಾಲೂ ಸಲಹೆ ನೀಡಿದರು.

ಅಧ್ಯತೆ ವಹಿಸಿದ್ದ ಅಸೋಸಿಯೇಷನ್ ಜಿಲ್ಲಾಧ್ಯ ನರಸಿಂಹ ಮೆಂಡನ್ ಮಾತನಾಡಿ, ಉದ್ಯಮಿಗಳು ಮತ್ತು ಪೊಲೀಸ್ ಇಲಾಖೆ ಮಧ್ಯೆ ಸಹಕಾರ ನಿರಂತರವಾಗಿರಲಿ ಎಂದು ಹೇಳಿದರು.

ಸಂಘದ ವಸತಿ ವಿಭಾಗದ ಉಪಾಧ್ಯಕ್ಷ ಗಿರಿಧರ ಭಟ್, ಬೇಕರಿ ವಿಭಾಗದ ಉಪಾಧ್ಯ ಮೊಯಿನುದ್ದೀನ್, ಹೋಟೆಲ್ ವಿಭಾಗದ ಉಪಾಧ್ಯಕ್ಷ ಶರಣು ಪಾಟೀಲ್ ಸೇರಿ 50ಕ್ಕೂ ಹೆಚ್ಚು ಉದ್ಯಮಿಗಳು ಪಾಲ್ಗೊಂಡಿದ್ದರು.

ಅಸೋಸಿಯೇಷನ್ ಕಾರ್ಯದರ್ಶಿ ಮಹಾಕೀರ್ತಿ ಶೆಟ್ಟಿ ಸ್ವಾಗತಿಸಿ ನಿರೂಪಣೆ ಮಾಡಿದರು. ಕೋಶಾಧಿಕಾರಿ ಸುನೀಲ್ ಶೆಟ್ಟಿ ವಂದಿಸಿದರು. ಹೋಟೆಲ್ ಅಸೋಸಿಯೇಷನ್‌ಗೆ ಮೊದಲ ಬಾರಿಗೆ ಆಗಮಿಸಿದ ಡಿಸಿಪಿಯವರಿಗೆ ಸ್ಮರಣಿಕೆ ಹಾಗೂ ಹೂಗುಚ್ಛ ನೀಡಿ ಸನ್ಮಾನ ಮಾಡಲಾಯಿತು.

# ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ ಸ್ಥಳ ಶುದ್ಧೀಕರಣ ಕಾರ್ಯಕ್ರಮ ಖಂಡಿಸಿ ಕಾಂಗ್ರೆಸ್ ಧರಣಿ ಸತ್ಯಾಗ್ರಹ



**ಬಳ್ಳಾರಿ ಆ 16**. ಬಳ್ಳಾರಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಇರುವ ಮಹಾತ್ಮಾಗಾಂಧೀಜಿಯವರ ಪುತ್ತಳೆಯ ಎದುರುಗಡೆ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿತ್ತು.

ಉತ್ತರಖಂಡ ಹಲದ್ವಾನಿ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷರು ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮ ಮುಗಿದ ನಂತರ ಬಿ.ಜೆ.ಪಿ ಕಾರ್ಯಕರ್ತರು ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದ ಸ್ಥಳವು ಅಶುದ್ಧಗೊಂಡಿದೆ ಎಂಬ ಅಸಂವಿಧಾನಿಕ ಹೇಳಿಕೆ ನೀಡಿ, ಆ ಸ್ಥಳವನ್ನು ಶುದ್ಧೀಕರಣ ಎಂಬ ಕಾರ್ಯಕ್ರಮವನ್ನು ನಡೆಸಿರುವುದನ್ನು ಖಂಡಸಿ ಧರಣಿ ಸತ್ಯಾಗ್ರಹ ಮಾಡಲಾಯಿತು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಅಲ್ಲಂ ಪ್ರಶಾಂತ್, ಮಹಾಪೌರ ಪಿ. ಗಾದೆಪ್ಪ, ರಾಜ್ಯ ಲಿಡ್ಕರ್ ಅಧ್ಯಕ್ಷರು ಮುಂಡ್ರಿಗಿ ನಾಗರಾಜ್, ಡಿ.ಸಿ.ಸಿ. ಕಾರ್ಯಾಧ್ಯಕ್ಷರು ಬೋಯಪಾಟಿ ವಿಷ್ಣುವರ್ಧನ್, ಎಸ್ಸಿ ಸೆಲ್ ಅಧ್ಯಕ್ಷರು ಎರುಕುಲಸ್ವಾಮಿ, ರಾಜ್ಯ ಕ್ರೈಸ್ತರ ಅಭಿವೃದ್ಧಿ ಮಂಡಳಿ ನಿರ್ದೇಶಕರು ಜಿ.ಜೆ. ರವಿಕುಮಾರ್, ಓಬಿಸಿ ಸೆಲ್ ಅಧ್ಯಕ್ಷರು ಸರಗು ನಾಗರಾಜು, ಯುವ ಕಾಂಗ್ರೆಸ್ ಅಧ್ಯಕ್ಷರು ಶ್ರೀಕಾಂತ್, ಅಸಂಘಟಿತ ಕಾರ್ಮಿಕ ಅಧ್ಯಕ್ಷರು ಅಲಿವೇಲು ಸುರೇಶ್, ಹಿರಿಯ ನಾಯಕರು ಮಾನಯ್ಯ, ಎಲ್. ಮಾರೆಣ್ಣ, ಯತಿಂದ್ರ, ಬಿ.ಎಂ. ಪಾಟೀಲ್, ವೀರೇಂದ್ರ ಕುಮಾರ್, ಶಿವರಾಜ್, ಗಂಗಾಧರ್, ಗ್ಯಾರಂಟಿ ಅಧ್ಯಕ್ಷರು ಚಿದಾನಂದಪ್ಪ ಯಾದವ್, ಸೇವಾದಳ ಅಧ್ಯಕ್ಷರು ಅತಾವುಲ್ಲಾ, ಮಲ್ಲೇಶ್ವರಿ, ರಾಹುಲ್ ಗಾಂಧಿ ಬ್ರಿಗೇಡ್ ಅಧ್ಯಕ್ಷರು ಅಖಿಲ್ ಅಹ್ಮದ್, ವಿಜಯ್ ಕುಮಾರ್, ಕಾರ್ಮಿಕ ಅಧ್ಯಕ್ಷರು ಮಂಜುನಾಥ್, ಸಾಮಾಜಿಕ ಜಲಾತಾಣ ಅಧ್ಯಕ್ಷರು ಅಫಾಕ್ ಅಹ್ಮದ್, ಗೌಸಿಯಾ, ಒಬಿಸಿ ಉಪಾಧ್ಯಕ್ಷರು ಲಿಂಗರಾಜ್, ಸ್ಯಾಮ್ಯೂಲ್, ರಾಜೇಶ್, ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಸ್ವಾತಂತ್ರ್ಯೋತ್ಸವ -'ವಂದೇ ಮಾತರಂ'ಗೆ 150ರ ಸಂಭ್ರಮ

# ಎಬಿವಿಪಿಯಿಂದ 250 ಮೀಟರ್ ಉದ್ದದ ಭವ್ಯ ತಿರಂಗಾ ಯಾತ್ರೆ

**ಬೀದರ್, ಆ. 16:** ದೇಶದ 80ನೇ ವರ್ಷದ ಐತಿಹಾಸಿಕ ಸ್ವಾತಂತ್ರ್ಯ ದಿನಾಚರಣೆ ಹಾಗೂ ರಾಷ್ಟ್ರೀಯ ಗೀತೆ 'ವಂದೇ ಮಾತರಂ' ರಚನೆಯಾಗಿ 150 ವರ್ಷ ಪೂರೈಸುತ್ತಿರುವ ಸುಸಂದರ್ಭದ ಹಿನ್ನೆಲೆಯಲ್ಲಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಬೀದರ್ ಘಟಕದ ವತಿಯಿಂದ ನಗರದಲ್ಲಿ 250 ಮೀಟರ್ ಉದ್ದದ ಬೃಹತ್ ಹಾಗೂ ಭವ್ಯ 'ತಿರಂಗಾ ಯಾತ್ರೆ' ಜರುಗಿತು.



ರಾಷ್ಟ್ರೀಯ ಹಬ್ಬದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಈ ಬೃಹತ್ ಪಾದಯಾತ್ರೆಯು ಗಡಿನಾಡು ಬೀದರ್ ಜಿಲ್ಲೆಯಲ್ಲಿ ಸಂಪೂರ್ಣ ದೇಶಪ್ರೇಮದ ರಂಗನ್ನು ಉಂಟುಮಾಡಿತು.

ದೇಶಪ್ರೇಮದ ಸಾರಿದ ವಿದ್ಯಾರ್ಥಿ ಸಮೂಹ: ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಈ ಬೃಹತ್ ತಿರಂಗಾ ಯಾತ್ರೆಯಲ್ಲಿ ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಮತ್ತು ಯುವಜನರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. 250 ಮೀಟರ್ ಉದ್ದದ ಬೃಹತ್ ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದು ಸಾಗಿದ ವಿದ್ಯಾರ್ಥಿಗಳ ದೇಶಪ್ರೇಮದ ಘೋಷಣೆಗಳು ಮುಗಿಲು ಮುಟ್ಟಿದ್ದವು. ಭಾರತಾಂಬೆಯ ಭಾವಚಿತ್ರಕ್ಕೆ ಗೌರವ ಸಲ್ಲಿಸುವ ಮೂಲಕ ಆರಂಭವಾದ ಈ ರಾಲಿಯುದ್ದಕ್ಕೂ 'ಭಾರತ್ ಮಾತಾ ಕೀ ಜೈ' ಮತ್ತು 'ವಂದೇ ಮಾತರಂ' ಎಂಬ ದೇಶಭಕ್ತಿಯ ಘೋಷಣೆಗಳು ಮೊಳಗಿದವು.

ಮುಂದಿನ ಪೀಳಿಗೆಗೆ ರಾಷ್ಟ್ರೀಯತೆಯ ಸಂದೇಶ: ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಮಹನೀಯರನ್ನು ಸ್ಮರಿಸುವುದು ಹಾಗೂ 'ವಂದೇ ಮಾತರಂ' ಗೀತೆಯ 150 ವರ್ಷಗಳ ಐತಿಹಾಸಿಕ ಗೌರವವನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುವುದು ಈ ಮಹತ್ವದ ಯಾತ್ರೆಯ ಪ್ರಮುಖ ಆಶಯವಾಗಿದೆ. ಗಡಿನಾಡಿನ ಯುವ ಜನತೆಯಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಜಾಗೃತಗೊಳಿಸಲು ವಿದ್ಯಾರ್ಥಿ ಪರಿಷತ್ ಇಂತಹ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಎಬಿವಿಪಿ ಸಂಘಟನೆಯ ಪ್ರಮುಖರು ಈ ಸಂದರ್ಭದಲ್ಲಿ ಹಂಚಿಕೊಂಡಿದ್ದಾರೆ. ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಸಾರ್ವಜನಿಕರು ಪುಷ್ಪವೃಷ್ಟಿ ಮಾಡುವ ಮೂಲಕ ವಿದ್ಯಾರ್ಥಿಗಳ ಈ ದೇಶಪ್ರೇಮದ ನಡಿಗೆಯನ್ನು ಶ್ಲಾಘಿಸಿದರು.

## ಆಗಸ್ಟ್ 15ರಿಂದ ಸೆಪ್ಟೆಂಬರ್ 15ರವರೆಗೆ ವಿಶೇಷ ಅಭಿಯಾನ

# ಸಕ್ರಿಯ ಕುಟುಂಬಗಳ ಭಾಗವಹಿಸುವಿಕೆ ಹೆಚ್ಚಿಸಲು ಮನೆ-ಮನೆಗೆ ಭೇಟಿ

**ವಿಜಯಪುರ,ಆ.15:** ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಹೆಚ್ಚಿಸಿ, ಗ್ರಾಮೀಣ ಕುಟುಂಬಗಳಿಗೆ ಸ್ಥಳೀಯವಾಗಿಯೇ ಜೀವನೋಪಾಯದ ಭದ್ರತೆ ಒದಗಿಸುವ ಉದ್ದೇಶದಿಂದ ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಆಜೀವಿಕ ಮಿಷನ್ ಯೋಜನೆ ಯಡಿ ರಾಜ್ಯಾದ್ಯಂತ ಆ.15ರಿಂದ ಸೆ.15ರವರೆಗೆ ಒಂದು ತಿಂಗಳ ಕಾಲ 'ಜಾಬ್ ಕಾರ್ಡ್ ಮೇಳ" ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಬರ ಪರಿಸ್ಥಿತಿ ಹಾಗೂ ಕೃಷಿ ಚಟುವಟಿಕೆಗಳಲ್ಲಿ ಕುಂಠಿತತೆ ಉಂಟಾಗಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಜನರಿಗೆ ಸ್ವಗ್ರಾಮದಲ್ಲೇ ಅಕುಶಲ ಉದ್ಯೋಗ ಒದಗಿಸುವ ಮೂಲಕ ಅವರ ಆದಾಯ ಮತ್ತು ಜೀವನೋಪಾಯವನ್ನು ಬಲಪಡಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

# ಹಬ್ಬದ ಋತುವಿನನಲ್ಲಿ ಗ್ರಾಹಕರಿಗೆ ಸಕ್ಕರೆ ದರ ಏರಿಕೆ ಶಾಕ್

**ಕಲಬುರಗಿ, ಆ. 16:** ತಿಂಗಳ ಹಿಂದೆ ಕೆಜಿಗೆ 40 ರೂ ಇದ್ದ ಸಕ್ಕರೆ ಬೆಲೆ ಈಗ 50 ರೂಗಳಿಗೆ ಏರಿದೆ! ಉತ್ಪಾದನೆ ಕುಸಿತ ಸೇರಿ ವಿವಿಧ ಕಾರನಗಳನ್ನು ಹೇಳಿ ಸಕ್ಕರೆ ದರವನ್ನು ಹೆಚ್ಚಿಸುವ ಮೂಲಕ ಹಬ್ಬಕ್ಕೆ ಸಿಹಿ ಬದಲಾಗಿ ಬೆಲೆ ಏರಿಕೆಯ ಶಾಕ್ ನೀಡಲಾಗಿದೆ. ಹಬ್ಬದ ಸೀಸನ್‌ನಲ್ಲಿ ಬರುತ್ತಿರುವ ಹೊತ್ತಲ್ಲೇ ಈ ರೀತಿ ಸಕ್ಕರೆ ದರ ದಿಢೀರ್ ಹೆಚ್ಚಳವಾಗಿರುವುದರಿಂದ ಗ್ರಾಹಕರ ಪಾಲಿಗೆ ಸಕ್ಕರೆ ಕಹಿಯಾದಂತಾಗಿದ್ದು, ಅಡುಗೆ ಮನೆಯಲ್ಲಿ ತಲ್ಲಣ ಶುರುವಾಗಿದೆ. ತಿಂಗಳ ಹಿಂದೆ ಪ್ರತಿ ಕೆಜಿ ಸಕ್ಕರೆಗೆ 40 ರೂ.ಇತ್ತು. ಇದೀಗ 50 ರಿಂದ 52ರೂ. ಗಡಿ ದಾಟಿದೆ. ಇನ್ನು ಚಿಲ್ಲರೆಯಾಗಿ 55 ರೂ. ಮೇಲ್ಪಟ್ಟು ಮಾರಾಟ ಮಾಡಲಾಗುತ್ತಿದೆ. ಮಾರುಕಟ್ಟೆಯಲ್ಲಿ ನಿರಂತರ ಸಕ್ಕರೆ ಬೆಲೆ ಏರಿಕೆಯಾಗುತ್ತಿದ್ದು, ಉತ್ಪಾದನೆಯಲ್ಲಿ ಉಂಟಾಗಿರುವ ಕುಸಿತ, ಹವಾಮಾನ ವೈಪರೀತ್ಯ ಹಾಗೂ ಹಬ್ಬದ ಸೀಸನ್‌ನಲ್ಲಿ ಹೆಚ್ಚುತ್ತಿರುವ ಬೇಡಿಕೆ ಪ್ರಮುಖ ಕಾರಣಗಳಾಗಿವೆ ಎಂದು ವರ್ತಕರು ಹೇಳುತ್ತಾರೆ.



**ಸಕ್ಕರೆಗೆ ಹೆಚ್ಚಿದ ಬೇಡಿಕೆ:** ಹಿಂದೂಗಳ ಪಾಲಿಗೆ ಪವಿತ್ರವಾದ ಶ್ರಾವಣ ಮಾಸ ಹಬ್ಬಗಳು ಆರಂಭವಾಗಿವೆ. ಈ ಮೂಲಕ ಸರಣಿ ಹಬ್ಬಗಳ ಸೀಸನ್ ಆರಂಭವಾಗುತ್ತಿರುವುದರಿಂದ ಸಕ್ಕರೆಗೆ ಬೇಡಿಕೆ ಗಣನೀಯವಾಗಿ ಹೆಚ್ಚಾಗಿದೆ. ಸಿಹಿ ತಿಂಡಿ, ಬೇಕರಿ ಉತ್ಪನ್ನಗಳು ಸೇರಿ ವಿವಿಧ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಸಕ್ಕರೆಯ ಬಳಕೆ ಹೆಚ್ಚಾಗುವುದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಏರಿಕೆಯಾಗಿದೆ. ಬೇಡಿಕೆ ಹೆಚ್ಚಾಗಿ ಪೂರೈಕೆ ಸೀಮಿತವಾದಾಗ ಸಹಜವಾಗಿಯೇ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗುತ್ತದೆ. ಇದು ಕೂಡ ಬೆಲೆ ಹೆಚ್ಚಳಕ್ಕೆ ಕಾರಣ ಎಂದು ವರ್ತಕರು ಹೇಳುತ್ತಿದ್ದಾರೆ. ಪರಿಣಾಮ ಇನ್ಮುಂದೆ ಮಾರುಕಟ್ಟೆಯಲ್ಲಿ ಸಿಹಿ ಪದಾರ್ಥಗಳ ದರ ಕೂಡ ಹೆಚ್ಚಳವಾದರೂ ಕೂಡ ಅಚ್ಚರಿ ಪಡಬೇಕಿಲ್ಲ.


**ರಾಜ್ಯದಲ್ಲಿ ಉತ್ಪಾದನೆ ಕುಸಿತ:** ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಸಕ್ಕರೆ ಉತ್ಪಾದನೆ ಪ್ರಮಾಣ ಕುಸಿತ ಆಗುತ್ತಿರುವುದು ಕೇಂದ್ರ ಸರ್ಕಾರದ ಅಂಕಿ ಅಂಶಗಳಿಂದ ತಿಳಿದು ಬರುತ್ತಿದೆ. 2022-23ರಲ್ಲಿ ರಾಜ್ಯದಲ್ಲಿ 5.93 ದಶಲಕ್ಷ ಟನ್ ಆಗಿತ್ತು. ಆದರೆ, ವರ್ಷದಿಂದ ವರ್ಷಕ್ಕೆ ಇಳಿಯುತ್ತ ಬಂದು ಕಳೆದ ಆರ್ಥಿಕ ವರ್ಷದಲ್ಲಿ 4.81 ದಶಲಕ್ಷ ಟನ್‌ಗೆ ಇಳಿಕೆಯಾಗಿದೆ. ಇದು ರಫ್ತು ಹಾಗೂ ಸ್ಥಳೀಯ ಬೇಡಿಕೆಗಿಂತ ಉತ್ಪಾದನೆ ಕಡಿಮೆಯಾದ ಕಾರಣ ಬೆಲೆ ಏರಿಕೆ ಕಾಣುತ್ತಿದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸುತ್ತಾರೆ. 2022-23ನೇ ಸಾಲಿನಲ್ಲಿ- 5.93 ದಶಲಕ್ಷ ಟನ್, 2023-24ನೇ ಸಾಲಿನಲ್ಲಿ- 4.18 ದಶಲಕ್ಷ ಟನ್, 2024-25ನೇ ಸಾಲಿನಲ್ಲಿ- 4.80 ದಶಲಕ್ಷ ಟನ್, 2025-26ನೇ ಸಾಲಿನಲ್ಲಿ- 4.81 ದಶಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದೆ. ಸಕ್ಕರೆ ಉತ್ಪದನೆ ಕುಸಿತಕ್ಕೆ ಮುಖ್ಯ ಕಾರಣ ಕಬ್ಬಿನ ಇಳುವರಿ ಕುಂಠಿತಗೊಂಡಿರುವುದು ಎನ್ನಲಾ ಗುತ್ತಿದೆ.

**ಕಬ್ಬಿನ ಇಳುವರಿ ಕುಂಠಿತ:** ಸಕ್ಕರೆ ತಯಾರಿಕೆಗೆ ಮುಖ್ಯವಾಗಿ ಬೇಕಾಗುವುದು ಕಬ್ಬು, ಆದರೆ, ಈ ಬಾರಿ ಮಹಾರಾಷ್ಟ್ರ, ಕರ್ನಾಟಕ ಸೇರಿ ಕಬ್ಬು ಬೆಳೆಯುವ ರಾಜ್ಯಗಳಲ್ಲಿ ಹವಾಮಾನ ವೈಪರೀತ್ಯ ಕಂಡು ಬಂದಿದೆ. ಇದರಿಂದ ಕಬ್ಬಿನಲ್ಲಿನ ಇಳುವರಿ ಕೂಡ ಕಡಿಮೆಯಾಗಿದೆ ಎಂದು ರೈತರು ಹೇಳುತ್ತಿದ್ದಾರೆ.

**ಎಥೆನಾಲ್ ಕಡೆ ಕಾರ್ಖಾನೆಗಳ ಚಿತ್ತ:** ಎಥೆನಾಲ್ ಉತ್ಪಾದನೆ ಹೆಚ್ಚು ಲಾಭದಾಯಕ ಎಂದು ಹಲವು ಸಕ್ಕರೆ ಕಾರ್ಖಾನೆಗಳು ಸಕ್ಕರೆ ಉತ್ಪಾದನೆಗಿಂತ ಎಥೆನಾಲ್ ಉತ್ಪಾದನೆಯತ್ತ ಗಮನ ನೀಡುತ್ತಿವೆ ಎಂದು ಮೂಲಗಳು ಹೇಳಿವೆ. ದೇಶದಲ್ಲಿ ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಹೆಚ್ಚಾಗುತ್ತಿದೆ. ಅಲ್ಲದೆ ವಿದೇಶಗಳಿಂದಲೂ ಕೂಡ ಎಥೆನಾಲ್‌ಗೆ ಬೇಡಿಕೆ ಇರುವ ಕಾರಣ ಉತ್ಪಾದನೆ ಹೆಚ್ಚಳ ಮಾಡಲಾಗಿದೆ ಎನ್ನಲಾಗಿದೆ. ಎಥೆನಾಲ್ ಉತ್ಪಾದನೆ ಸಕ್ಕರೆ ಲಭ್ಯತೆಯ ಮೇಲೆ ಪರಿಣಾಮ ಬೀರಿದ್ದು, ಮಾರುಕಟ್ಟೆಗೆ ಲಭ್ಯವಾಗುವ ಸಕ್ಕರೆಯ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ. ಇದು ಬೆಲೆ ಏರಿಕೆಯ ಪ್ರಮುಖ ಕಾರಣವಾಗಿದೆ ಎಂದು ಸಕ್ಕರೆ ಕಾರ್ಖಾನೆಯ ಅಧಿಕಾರಿಯೊಬ್ಬರು ಹೇಳುತ್ತಾರೆ.

# ಎನ್.ಎಂ. ಸ್ವತಂತ್ರ ಪ.ಪೂ. ಕಾಲೇಜಿನಲ್ಲಿ ಮಾಜಿ ಯೋಧರಿಂದ ಧ್ವಜಾರೋಹಣ

**ಬಳ್ಳಾರಿ ಆ 16:** 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವೀರಶೈವ ವಿದ್ಯಾವರ್ಧಕ ಸಂಘದ ಎನ್.ಎಂ. ಸ್ವತಂತ್ರ ಪ.ಪೂ. ಕಾಲೇಜಿನಲ್ಲಿ ಅರ್ಥಪೂರ್ಣವಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.




ದೇಶಕ್ಕಾಗಿ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡ ಮಾಜಿ ಯೋಧರಾದ ಮಾರ್ಕಂಡಯ್ಯ ಅವರು ಧ್ವಜಾರೋಹಣ ನೆರವೇರಿಸಿದರು.

ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಡಾ. ಅರವಿಂದ ಪಟೇಲ್ ಅವರು ಧ್ವಜವಂದನೆ ಸ್ವೀಕರಿಸಿ, ಕಾರ್ಯಕ್ರಮವನ್ನುದ್ದೇಶಿಸಿ 'ಸ್ವಾತಂತ್ರ್ಯ ಎಂದರೆ ಕೇವಲ ಬಂಧನಗಳಿಂದ ಬಿಡುಗಡೆಯಲ್ಲ. ನಮ್ಮಲ್ಲಿ ಪ್ರೀತಿ, ಸಹನೆ, ಸಹಬಾಳ್ವೆ, ಸೌಹಾರ್ದತೆ ಹಾಗೂ ಏಕತೆಯನ್ನು ಬೆಸೆಯುವ ಸೇತುವೆಯೇ ನಿಜವಾದ ಸ್ವಾತಂತ್ರ್ಯ' ಎಂದು ಅವರು ಹೇಳಿದರು. ವಿದ್ಯಾರ್ಥಿಗಳು ಶಿಸ್ತಿನ ಪಥಸಂಚಲನದ ಮೂಲಕ ಧ್ವಜವಂದನೆ ಸಲ್ಲಿಸಿದರು. ಬಳಿಕ ವಿದ್ಯಾರ್ಥಿಗಳು ಒಕ್ಕೊರಲಿನಿಂದ ?ವಂದೇ ಮಾತರಂ? ಹಾಗೂ ರಾಷ್ಟ್ರಗೀತೆಯನ್ನು ಹಾಡಿದರು.

ಧ್ವಜಾರೋಹಣದ ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ದಿನಾಚರಣೆಯ ಮಹತ್ವ ಕುರಿತು ಭಾಷಣ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಎ.ಎಂ.ಪಿ. ವೀರೇಶಸ್ವಾಮಿ ಅವರು ಸದಾಶಯದ ನುಡಿಗಳನ್ನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಡಳಿತ ಮಂಡಳಿಯ ಅಧ್ಯಕ್ಷರಾದ ಮುಂಡಾಸದ ಚೆನ್ನಬಸವರಾಜ್ ಅವರು ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ದೇಶಸೇವೆಯಲ್ಲಿ ತಮ್ಮ ಕರ್ತವ್ಯ ನಿರ್ವಹಿಸಿದ ಮಾಜಿ ಯೋಧರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವಾಣಿಜ್ಯ ವಿಭಾಗದ ಕೆ.ಎಂ. ಮಂಜುನಾಥ ಹಾಗೂ ವಿದ್ಯಾರ್ಥಿನಿಯರು ಪ್ರಾರ್ಥನೆ ಸಲ್ಲಿಸಿದರು. ಶ್ರೀಮತಿ ಪಲ್ಲವಿ ಸ್ವಾಗತಿಸಿದರು. ದೀಪಿಕಾ ಸಿದ್ದಾಪುರ ಅತಿಥಿಗಳನ್ನು ಪರಿಚಯಿಸಿದರು. ಕಾಲೇಜಿನ ಶೈಕ್ಷಣಿಕ ಸಂಯೋಜಕರಾದ ಅಬಿದಲಿ ವಂದಿಸಿದರು. ಆಂಗ್ಲ ಉಪನ್ಯಾಸಕ ವೀರೇಂದ್ರ ಗೌಡ ಕಾರ್ಯಕ್ರಮ ನಿರೂಪಿಸಿದರು.

ವೇದಿಕೆ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪಾಲಕ-ಪೋಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮವನ್ನು ಹೆಚ್ಚಿಸಿದರು.



ನವದೆಹಲಿಯ ಕರ್ನಾಟಕ ಭವನದಲ್ಲಿ 80ನೇ ಸ್ವಾತಂತ್ರ್ಯ ದಿನದಂದು ಅಪರ ನಿವಾಸಿ ಆಯುಕ್ತರಾದ ಆಕೃತಿ ಬನ್ಸಾಲ್ ಅವರು ಧ್ವಜಾರೋಹಣ ನೆರವೇರಿಸಿದರು.ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಧಿಕಾರಿಗಳಾದ ಎಚ್.ಆಂಜನೇಯ ಹಾಗೂ ಅಭಿಜಿತ್‌ಗೌಡ ಹಾಗೂ ಕರ್ನಾಟಕ ಭವನದ ವ್ಯವಸ್ಥಾಪಕರು, ಸಿಬ್ಬಂದಿ ವರ್ಗದವರು ಹಾಜರಿದ್ದರು.



80ನೇ ಸ್ವಾತಂತ್ರ್ಯ ದಿನಾಚರಣೆಯಂದು ನವದೆಹಲಿಯ ಮೂರನೆಯ ಕರ್ನಾಟಕ ಭವನ ಭೀಮಾದಲ್ಲಿ ಸಹಾಯಕ ನಿವಾಸಿ ಆಯುಕ್ತ ಸಿ ಮೋಹನಕುಮಾರ್ ಅವರು ಧ್ವಜಾರೋಹಣ ಮಾಡಿದರು. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಸುನಿಲ್ ಕುಮಾರ್, ನವದೆಹಲಿಯಲ್ಲಿ ಕರ್ತವ್ಯ ನಿಯೋಜಿತ ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಕರ್ನಾಟಕ ಭವನದ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಈಜಿಪ್ಟ್ ಅಧಿಕಾರಿಗಳ ಜತೆ ಹಮಾಸ್ ನಿಯೋಗ ಚರ್ಚೆ

**ಕೈರೋ, ಆ.16:** ಇಸ್ರೇಲ್‌ನ ಉಲ್ಲಂಘನೆ ಹಾಗೂ ಒಪ್ಪಂದದಂತೆ ಗಾಜಾ ಮಾರ್ಗಸೂಚಿಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಹಮಾಸ್‌ನ ಉನ್ನತ ಮಟ್ಟದ ನಿಯೋಗವು ಕೈರೋದಲ್ಲಿ ಈಜಿಪ್ಟ್ ಅಧಿಕಾರಿಗಳೊಂದಿಗೆ ಭಾನುವಾರ ಚರ್ಚೆ ನಡೆಸಿತು ಎಂದು ಪ್ಯಾಲೆಸ್ತೀನ್ ಸಂಘಟನೆ ತಿಳಿಸಿದೆ.



ಈ ಸಭೆಗಳು ಮಧ್ಯಸ್ಥಿಕೆದಾರರೊಂದಿಗೆ ಕೈಗೊಳ್ಳಲಾಗುತ್ತಿರುವ ಸಂಘಟನೆಯ ಸರಣಿ ರಾಜತಾಂತ್ರಿಕ ತೊಡಗುವಿಕೆಗಳ ಭಾಗವಾಗಿದೆ ಎಂದು ಹಮಾಸ್ ವಕ್ತಾರ ಹಜೆಮ್ ಖಾಸೆಮ್ ತಿಳಿಸಿದ್ದಾರೆ.

ಇಸ್ರೇಲ್‌ನ ಉಲ್ಲಂಘನೆಗಳ ಬಗ್ಗೆ ಈಜಿಪ್ಟ್ ಅಧಿಕಾರಿಗಳಿಗೆ ವಿವರಿಸುವುದು ಮತ್ತು ಇಸ್ರೇಲ್ 'ಬೋರ್ಡ್ ಆಫ್ ಪೀಸ್' ಜೊತೆ ಒಪ್ಪಿಕೊಂಡಿರುವ ಮಾರ್ಗಸೂಚಿಗೆ ಬದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಹಮಾಸ್‌ನ ಉದ್ದೇಶವಾಗಿದೆ ಎಂದು ಅವರು ಹೇಳಿದರು. ಹಮಾಸ್ ನಾಯಕ ಖಲೀಲ್ ಅಲ್-ಹಯ್ಯ ನೇತೃತ್ವದ ನಿಯೋಗವು ಗಾಜಾ ಕಟ್ಟುನಿಟ್ಟಿನ ಕಟ್ಟುಪಾಡು/ಕೇಸ್ಫೈರ್ (ಯುದ್ಧವಿರಾಮ) ಅನ್ನು ಬಲಪಡಿಸುವ ಮತ್ತು ಕಾಯ್ದುಕೊಳ್ಳುವ ಪ್ರಯತ್ನಗಳ ಕುರಿತು ಚರ್ಚಿಸಲು ಕೈರೋಗೆ ಪ್ರಯಾಣಿಸಿದೆ ಎಂದು ವರದಿಯೊಂದು ತಿಳಿಸಿದೆ. ಯುದ್ಧವಿರಾಮವನ್ನು ಕಾಪಾಡಿಕೊಳ್ಳಲು ಹಾಗೂ ಅದರ ಅನುಷ್ಠಾನದ ಮೇಲಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಮಧ್ಯಸ್ಥಿಕೆದಾರರು ತಮ್ಮ ಪ್ರಯತ್ನಗಳನ್ನು ಮುಂದುವರಿಸುತ್ತಿರುವ ಬೆನ್ನಲ್ಲೇ ಈ ಚರ್ಚೆಗಳು ನಡೆದಿವೆ. 2023ರ ಅಕ್ಟೋಬರ್‌ನಲ್ಲಿ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ತನ್ನ ಮಿಲಿಟರಿ ದಾಳಿಯನ್ನು ಪ್ರಾರಂಭಿಸಿತ್ತು. ಗಾಜಾದ ಆರೋಗ್ಯ ಸಚಿವಾಲಯದ ಪ್ರಕಾರ, ಸಂಘರ್ಷ ಪ್ರಾರಂಭವಾದಾಗಿನಿಂದ 73,000ಕ್ಕೂ ಹೆಚ್ಚು ಪ್ಯಾಲೆಸ್ತೀನಿಯರು ಕೊಲ್ಲಲ್ಪಟ್ಟಿದ್ದಾರೆ ಮತ್ತು 1,74,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಅಕ್ಟೋಬರ್ 2025ರಿಂದ ಯುದ್ಧವಿರಾಮ ಜಾರಿಯಲ್ಲಿದೆಯಾದರೂ, ಇಸ್ರೇಲ್ ಮಿಲಿಟರಿ ದಾಳಿಗಳು ಮುಂದುವರಿದಿದ್ದು, ಕಟ್ಟುಪಾಡು ಪ್ರಾರಂಭವಾದಾಗಿನಿಂದ ಕನಿಷ್ಠ 1,260 ಜನರು ಮೃತಪಟ್ಟಿದ್ದಾರೆ ಮತ್ತು 4,100 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ಮತ್ತೊಮ್ಮೆ ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆಯಲು ಮತ್ತು ಗಾಜಾ ಮಾರ್ಗಸೂಚಿಯ ಅನುಷ್ಠಾನವನ್ನು ಮುನ್ನಡೆಸಲು ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿರುವ ನಡುವೆಯೇ ಹಮಾಸ್ ನಿಯೋಗದ ಈ ಭೇಟಿ ಸಂಭವಿಸಿದೆ.

ಕೇವಲ ಒಂದು ವಾರದ ಹಿಂದೆಯಷ್ಟೇ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಗಾಜಾಕ್ಕಾಗಿ ಅಮೆರಿಕ ಬೆಂಬಲಿತ ಇತ್ತೀಚಿನ ಶಾಂತಿ ಯೋಜನೆಯನ್ನು ತಿರಸ್ಕರಿಸಿದ್ದರು. ಯಾವುದೇ ಇಸ್ರೇಲಿ ಪಡೆಗಳು ಹಿಂತೆಗೆದುಕೊಳ್ಳುವ ಮುನ್ನ ಹಮಾಸ್ ಸಂಪೂರ್ಣವಾಗಿ ಅಸ್ತ್ರತ್ಯಾಗ ಮಾಡಬೇಕೆಂದು ಅವರು ಆಗ್ರಹಿಸಿದ್ದರು.

ಟ್ರಂಪ್ ಅವರು ಮಾತುಕತೆಯಲ್ಲಿ ಪ್ರಗತಿ ಸಾಧಿಸಲಾಗಿದೆ ಎಂದು ಘೋಷಿಸಿದ ಹಾಗೂ ಪ್ರದೇಶದಲ್ಲಿ ಶಾಶ್ವತ ಶಾಂತಿ ಸ್ಥಾಪಿಸಲು ಅವರ 'ಬೋರ್ಡ್ ಆಫ್ ಪೀಸ್' ಹೊಸ 15-ಅಂಶಗಳ ಯೋಜನೆಯನ್ನು ಬಿಡುಗಡೆ ಮಾಡಿದ ಒಂದು ವಾರದ ನಂತರ ಈ ಹೇಳಿಕೆಗಳು ಬಂದಿವೆ. ಆದರೆ ಈ ಯೋಜನೆಯನ್ನು ನೇರವಾಗಿ ಉಲ್ಲೇಖಿಸಿ ಮಾತನಾಡಿದ ನೆತನ್ಯಾಹು, "ನಾನು ಇಲ್ಲ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ: ಇಸ್ರೇಲ್ ಈ 15-ಅಂಶಗಳ ದಾಖಲೆಯನ್ನು ತಿರಸ್ಕರಿಸುತ್ತದೆ" ಎಂದಿದ್ದಾರೆ.

"ಹಮಾಸ್ ನಿಜವಾಗಿಯೂ ಸಂಪೂರ್ಣವಾಗಿ ಶಸ್ತ್ರತ್ಯಾಗ ಮಾಡುವವರೆಗೆ ಇಸ್ರೇಲಿ ಮಿಲಿಟರಿ ಹಿಂದೆ ಸರಿಯುವುದಿಲ್ಲ, ಮತ್ತು ನಮ್ಮ ಪಡೆಗಳು ಹಾಗೂ ನಾಗರಿಕರ ವಿರುದ್ಧದ ಬೆದರಿಕೆಗಳನ್ನು ನಿಫಲಗೊಳಿಸುವುದನ್ನು ಮುಂದುವರಿಸುತ್ತದೆ" ಎಂದು ಅವರು ಹೇಳಿದರು."ನಾವು ಈಗ ಅಮೆರಿಕನ್ನರೊಂದಿಗೆ ಇದನ್ನು ಚರ್ಚಿಸುತ್ತಿದ್ದೇವೆ," ಎಂದು ಅವರು ಸೇರಿಸಿದರು. "ಅವರ ಬಳಿ ಕೆಲವು ಕಲ್ಪನೆಗಳಿವೆ, ಅವುಗಳಲ್ಲಿ ಕೆಲವು ನಮಗೆ ಸ್ವೀಕಾರಾರ್ಹವಾಗಿವೆ ಮತ್ತು ಕೆಲವು ಇಲ್ಲ, ಹಾಗೂ ಅಂತಹ ವಿಷಯಗಳನ್ನು ಎದುರಿಸುವುದು ನಮಗೆ ತಿಳಿದಿದೆ." "ನಾನು ಪ್ರಧಾನಿಯಾಗಿರುವಷ್ಟು ಕಾಲ, ಗಾಜಾದಲ್ಲಾಗಲಿ ಅಥವಾ ಪಶ್ಚಿಮ ದಂಡೆಯಲ್ಲಾಗಲಿ ಯಾವುದೇ ಫೆಲೆಸ್ತೀನ್ ರಾಜ್ಯ ಸ್ಥಾಪನೆಯಾಗುವುದಿಲ್ಲ" ಎಂದು ನೆತನ್ಯಾಹು ಪ್ರತಿಪಾದಿಸಿದ್ದಾರೆ.

ಜುಲೈ 31 ರಂದು ಟ್ರಂಪ್ ಅವರ ಪ್ರಕಟಣೆಯ ನಂತರ ಗಾಜಾ ಮೇಲಿನ ಇಸ್ರೇಲಿ ದಾಳಿಗಳು ಹೆಚ್ಚಾಗಿದ್ದವು, ಆದರೆ ಕಳೆದ ಕೆಲವು ದಿನಗಳಲ್ಲಿ ಅವು ಕಡಿಮೆಯಾಗಿವೆ.

# ಹಿಂಸಾಚಾರ ಕೊನೆಗೊಳಿಸಲು ಪೋಪ್ ಲಿಯೋ ಕರೆ

**ರೋಮ್, ಆ.16:** ಆಕ್ರಮಿತ ಪಶ್ಚಿಮ ದಂಡೆಯಲ್ಲಿ ಪ್ಯಾಲೆಸ್ತೀನಿಯರ ವಿರುದ್ಧ ನಡೆಯುತ್ತಿರುವ ಹಿಂಸಾಚಾರವನ್ನು ಕೊನೆಗೊಳಿಸುವಂತೆ 14ನೇ ಪೋಪ್ ಕರೆ ನೀಡಿದ್ದಾರೆ. ಹಾಗೂ ಇಸ್ರೇಲ್-ಪ್ಯಾಲೆಸ್ತೀನ್ ಸಂಘರ್ಷಕ್ಕೆ ದ್ವಿ-ರಾಷ್ಟ್ರ ಪರಿಹಾರವನ್ನು (ಟೂ-ಸ್ಟೇಟ್ ಸೊಲ್ಯೂಷನ್) ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮುಂದುವರಿಸುವಂತೆ ಅಂತಾರಾಷ್ಟ್ರೀಯ ಸಮುದಾಯವನ್ನು ಆಗ್ರಹಿಸಿದ್ದಾರೆ.



ಭಾನುವಾರದ ವಾರಾಂತ್ಯದ 'ಏಂಜೆಲಸ್' ಪ್ರಾರ್ಥನೆಯ ನಂತರ ಮಾತನಾಡಿದ ಪೋಪ್, ಪಶ್ಚಿಮ ದಂಡೆಯ ಪ್ಯಾಲೆಸ್ತೀನ್ ಜನರ ವಿರುದ್ಧ ಮರುಕಳಿಸುತ್ತಿರುವ ಹಿಂಸಾಚಾರದ ಕೃತ್ಯಗಳನ್ನು" ಕೊನೆಗೊಳಿಸುವಂತೆ ಮನವಿ ಮಾಡಿದರು. ನ್ಯಾಯಯುತ ಮತ್ತು ಸುಸ್ಥಿರ ಶಾಂತಿಗಾಗಿ, "ದ್ವಿರಾಷ್ಟ್ರ ಪರಿಹಾರದತ್ತ ಪ್ರಗತಿ ಸಾಧಿಸುವುದನ್ನು ಖಚಿತಪಡಿಸಿಕೊಳ್ಳಲು ಅಂತಾರಾಷ್ಟ್ರೀಯ ಸಮುದಾಯಕ್ಕೆ ಲಿಯೋ ತುರ್ತು ಮನವಿ ಮಾಡಿದರು. ಸುರಕ್ಷಿತ ಮತ್ತು ಅಂತಾರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಗಡಿಗಳನ್ನು ಆಧರಿಸಿದ ದ್ವಿ-ರಾಷ್ಟ್ರ ಪರಿಹಾರವನ್ನು ವ್ಯಾಟಿಕನ್ ಸತತವಾಗಿ ಬೆಂಬಲಿಸಿಕೊಂಡು ಬಂದಿದೆ. ಅಲ್ಲದೆ, ಫೆಲೆಸ್ತೀನಿಯರು ಮತ್ತು ಇಸ್ರೇಲಿಗರ ನಡುವೆ ಶಾಶ್ವತ ಹಾಗೂ ಸಮಾನ ಶಾಂತಿಗೆ ಇದು ಅತ್ಯಂತ ಸೂಕ್ತವಾದ ಮಾರ್ಗ ಎಂದು ಬಣ್ಣಿಸಿದೆ.

ದಕ್ಷಿಣ ಇಟಲಿಯ ತಾರಾಂಟೊ ನಗರದಲ್ಲಿ ಪ್ರಾರಂಭವಾದ ಮೆಡಿಟರೇನಿಯನ್ ಕ್ರೀಡಾಕೂಟದ ಕುರಿತು ಪ್ರಸ್ತಾಪಿಸಿದ ಪಾಪ್, ಈ ಕ್ರೀಡಾಕೂಟವು "ಈ ಪ್ರದೇಶದ ಮತ್ತು ಇಡೀ ವಿಶ್ವದ ಜನರ ನಡುವೆ ಶಾಂತಿ ಹಾಗೂ ಸಹೋದರತ್ವದ ದಿವ್ಯ ಸಂಕೇತವಾಗಲಿ" ಎಂದು ಆಶಯ ವ್ಯಕ್ತಪಡಿಸಿದರು.

# ವನೌಟು ದ್ವೀಪದಲ್ಲಿ 6.1 ತೀವ್ರತೆಯ ಭೂಕಂಪನ

**ಪೋರ್ಟ್‌ವಿಲಾ, ಆ.16:** ವನೌಟು ದ್ವೀಪಗಳಲ್ಲಿ ಭಾನುವಾರ 6.1 ತೀವ್ರತೆಯ ಭೂಕಂಪ ಸಂಭವಿಸಿದ್ದು, ಯಾವುದೇ ಜೀವಹಾನಿ ಅಥವಾ ಆಸ್ತಿಗೆ ಹಾನಿಯಾದ ಬಗ್ಗೆ ತಕ್ಷಣದ ವರದಿಯಾಗಿಲ್ಲ. ಭೂಕಂಪವು 155.1 ಕಿಲೋಮೀಟರ್ (96 ಮೈಲಿ) ಆಳದಲ್ಲಿ ಸಂಭವಿಸಿದೆ ಎಂದು ಜರ್ಮನ್ ರಿಸರ್ಚ್ ಸೆಂಟರ್ ಫಾರ್ ಜಿಯೋಸೈನ್ಸ್ ತಿಳಿಸಿದೆ. ಭೂಕಂಪನದ ನಂತರ ಯಾವುದೇ ಸುನಾಮಿ ಎಚ್ಚರಿಕೆ ನೀಡಿಲ್ಲ. ಭೂಕಂಪನದ ಕೇಂದ್ರಬಿಂದುವು ಆರಂಭದಲ್ಲಿ 14.52 ಡಿಗ್ರಿ ದಕ್ಷಿಣ ಅಕ್ಷಾಂಶ ಮತ್ತು 167.23 ಡಿಗ್ರಿ ಪೂರ್ವ ರೇಖಾಂಶದಲ್ಲಿದೆ ಎಂದು ಪತ್ತೆಹಚ್ಚಲಾಗಿದೆ. ವಾನೌಟು ಪ್ರದೇಶವು ಭೂಕಂಪನ ಸಕ್ರಿಯವಾಗಿರುವ ಪೆಸಿಫಿಕ್ ವಲಯದಲ್ಲಿದ್ದು, ಪ್ರಮುಖ ಟೆಕ್ಟಾನಿಕ್ ಪ್ಲೇಟ್ ಗಡಿಗಳ ಉದ್ದಕ್ಕೂ ಇರುವುದರಿಂದ ಆಗಾಗ್ಗೆ ಭೂಕಂಪಗಳನ್ನು ಎದುರಿಸುತ್ತದೆ.

ಯಾವುದಾದರೂ ಹಾನಿ ಅಥವಾ ಪ್ರಕಂಪನಗಳಿವೆಯೇ ಎಂದು ಪರಿಶೀಲಿಸಲು ಅಧಿಕಾರಿಗಳು ಮತ್ತು ಮೇಲ್ವಿಚಾರಣಾ ಸಂಸ್ಥೆಗಳು ಪರಿಸ್ಥಿತಿಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವ ನಿರೀಕ್ಷೆಯಿದೆ.

# ಭೂಕಂಪದ ನಂತರ ತುರ್ತು ಪರಿಸ್ಥಿತಿ ಘೋಷಿಸಿದ ಇಂಡೋನೇಷ್ಯಾ ಸರ್ಕಾರ

**ಜಕಾರ್ತಾ, ಆ.16:** ಆಗಸ್ಟ್ 15ರಂದು ಫ್ಲೋರೆಸ್ ದ್ವೀಪದಲ್ಲಿ ಸಂಭವಿಸಿದ 7.7 ತೀವ್ರತೆಯ ಭೂಕಂಪದ ನಂತರ ಇಂಡೋನೇಷ್ಯಾದ ಪೂರ್ವ ನುಸಾ ತೆಂಗಾರಾ ಪ್ರಾಂತೀಯ ಸರ್ಕಾರವು 14 ದಿನಗಳ ತುರ್ತು ಸ್ಪಂದನಾ ಅವಧಿಯನ್ನು (ಎಮರ್ಜೆನ್ಸಿ ರೆಸ್ಪಾನ್ಸ್ ಪೀರಿಯಡ್) ಘೋಷಿಸಿದೆ ಎಂದು ಪ್ರಾಂತೀಯ ಸರ್ಕಾರದ ಸುಗ್ರೀವಾಜ್ಞೆ ತಿಳಿಸಿದೆ.




ಪೂರ್ವನುಸಾ ತೆಂಗಾರಾ ಗವರ್ನರ್ ಮೆಲ್ಕಿ ಲಾಕಾನಾ ಸಹಿ ಮಾಡಿದ ಆದೇಶದಂತೆ, ಈ ತುರ್ತು ಸ್ಪಂದನಾ ಅವಧಿಯು ಆಗಸ್ಟ್ 15 ರಿಂದ ಆಗಸ್ಟ್ 28 ರವರೆಗೆ ಜಾರಿಯಲ್ಲಿರುತ್ತದೆ. ಭೂಕಂಪನದ ಕೇಂದ್ರಬಿಂದುವು ನಾಗೇಕಿಯೊ ರೇಜನ್ಸಿಯ ಎಂಬಾಯ್ನಿಂದ ಈಶಾನ್ಯಕ್ಕೆ ಸುಮಾರು 30 ಕಿ.ಮೀ ದೂರದಲ್ಲಿ, 15 ಕಿ.ಮೀ ಆಳದಲ್ಲಿದೆ ಎಂದು ತಿಳಿಸಿದೆ.

ಇಂಡೋನೇಷ್ಯಾದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯು ಭೂಕಂಪ ಮತ್ತು ಅದರ ನಂತರ ಸಂಭವಿಸಿದ 341 ಪ್ರಕಂಪನಗಳಿಂದ 51 ಜನರು ಮೃತಪಟ್ಟಿದ್ದು, 113 ಜನರು ಗಾಯಗೊಂಡಿದ್ದಾರೆ ಎಂದು ವರದಿ ಮಾಡಿದೆ.

ಸಾವಿರಾರು ನಿವಾಸಿಗಳು ನಿರಾಶ್ರಿತರಾಗಿದ್ದು, ಸಿಕಾದಲ್ಲಿ 3,356 ಜನರು, ಮಂಗರಾಯಿಯಲ್ಲಿ 2,078 ಜನರು ಮತ್ತು ನಾಗೇಕಿಯೊದಲ್ಲಿ 500 ಜನರು ಆಶ್ರಯ ಪಡೆದಿದ್ದಾರೆ. ಬಿಮಾ ಮತ್ತು ಸೆಲಾಯಾರ್ ಪ್ರದೇಶಗಳಲ್ಲೂ ಇತರರು ಸ್ಥಳಾಂತರಗೊಳ್ಳಲು ನಿರ್ಬಂಧಿತರಾಗಿದ್ದಾರೆ.

ಭೂಕಂಪದಿಂದಾಗಿ 914 ಮನೆಗಳು ತೀವ್ರವಾಗಿ ಹಾನಿಗೊಳಗಾಗಿದ್ದರೆ, 126 ಮನೆಗಳಿಗೆ ಸಾಧಾರಣ ಹಾಗೂ 317 ಮನೆಗಳಿಗೆ ಸಣ್ಣಪುಟ್ಟ ಹಾನಿಯಾಗಿದೆ. ಅಲ್ಲದೆ, 93 ಶಿಕ್ಷಣ ಸಂಸ್ಥೆಗಳು, 36 ಆರೋಗ್ಯ ಕೇಂದ್ರಗಳು ಮತ್ತು 38 ಸರ್ಕಾರಿ ಕಚೇರಿಗಳು ಹಾನಿಗೊಳಗಾಗಿವೆ ಎಂದು ವರದಿಯಾಗಿದೆ.

ತುರ್ತು ಪರಿಸ್ಥಿತಿ ಘೋಷಣೆಯು ಸಂತ್ರಸ್ತ ಪ್ರದೇಶಗಳಲ್ಲಿ ವಿಪತ್ತು ಸ್ಪಂದನೆ, ತೆರವು ಕಾರ್ಯಾಚರಣೆ, ಪರಿಹಾರ ಸಾಮಗ್ರಿಗಳ ವಿತರಣೆ ಮತ್ತು ಪುನರ್ವಸತಿ ಯತ್ನಗಳನ್ನು ವೇಗಗೊಳಿಸಲು ಸಹಾಯ ಮಾಡುತ್ತದೆ ಎಂದು ಪ್ರಾಂತೀಯ ಸರ್ಕಾರ ತಿಳಿಸಿದೆ.

# ಆಸ್ಟ್ರೇಲಿಯಾ ವಿರುದ್ಧ ಬಾಂಗ್ಲಾದೇಶಕ್ಕೆ ಐತಿಹಾಸಿಕ ಗೆಲುವು

**ಡಾರ್ವಿನ್, ಆ.16:** ಆಸ್ಟ್ರೇಲಿಯಾ ನೆಲದಲ್ಲಿ ಮೊದಲ ಟೆಸ್ಟ್ ಗೆಲುವು ದಾಖಲಿಸುವ ಮೂಲಕ ಬಾಂಗ್ಲಾದೇಶದ ಪುರುಷರ ಕ್ರಿಕೆಟ್ ತಂಡ ಭಾನುವಾರ ಇತಿಹಾಸ ನಿರ್ಮಿಸಿದ್ದು, ಪ್ರಬಲ ಆಸಿಸ್ ತಂಡವನ್ನು ಮುಜುಗರಕ್ಕೀಡು ಮಾಡಿದ್ದು ಮಾತ್ರವಲ್ಲದೇ ಪಾಕಿಸ್ತಾನಕ್ಕೂ ಬರೆ ಎಳೆದಿದೆ.



ಡಾರ್ವಿನ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾವನ್ನು ಎರಡನೇ ಇನ್ನಿಂಗ್ಸ್‌ನ 284 ರನ್‌ಗಳಿಗೆ ಆಲೌಟ್ ಮಾಡಿದ ಬಳಿಕ ಬಾಂಗ್ಲಾದೇಶಕ್ಕೆ ಗೆಲುವಿಗಾಗಿ 57 ರನ್‌ಗಳ ಗುರಿ ಎದುರಾಯಿತು. ಮೊಮಿನುಲ್ ಹಕ್, ಬ್ಯೂ ವೆಬ್‌ಸ್ಟರ್ ಎಸೆತವನ್ನು ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಬೌಂಡರಿಗೆ ಅಟ್ಟುವ ಮೂಲಕ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಈ ಪಂದ್ಯದಲ್ಲಿ ಅಂಡರ್‌ಡಾಗ್ ಆಗಿ ಕಣಕ್ಕಿಳಿದಿದ್ದ ಬಾಂಗ್ಲಾದೇಶ, ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧ ಪಂದ್ಯದುದ್ದಕ್ಕೂ ಪ್ರಾಬಲ್ಯ ಮೆರೆಯಿತು.

ಗೆಲುವಿನ ಅಂತರ ಕ್ರಿಕೆಟ್ ಜಗತ್ತಿನಲ್ಲಿ ಭಾರೀ ಸಂಚಲನ ಮೂಡಿಸುವಂತಿದೆ. ಆಸ್ಟ್ರೇಲಿಯಾವನ್ನು ಸೋಲಿಸಿದ ಬಾಂಗ್ಲಾದೇಶ, ಆಸ್ಟ್ರೇಲಿಯಾದ ಪರಿಸ್ಥಿತಿಗಳಲ್ಲಿ ಈ ಮಾದರಿಯಲ್ಲಿ ತನ್ನ ಮೊದಲ ಗೆಲುವು ದಾಖಲಿಸಿತು. ಇದಕ್ಕೂ ಮೊದಲು ಬಾಂಗ್ಲಾದೇಶ ಆಸ್ಟ್ರೇಲಿಯಾದಲ್ಲಿ ಎರಡು ಟೆಸ್ಟ್ ಪಂದ್ಯಗಳನ್ನು ಆಡಿದ್ದು, ಎರಡರಲ್ಲೂ ಸೋತಿತ್ತು. ಆದರೆ ಡಾರ್ವಿನ್ನ ಗೆಲುವಿನೊಂದಿಗೆ ಆಸ್ಟ್ರೇಲಿಯಾ ನೆಲದಲ್ಲಿ ಟೆಸ್ಟ್ ಗೆದ್ದ ಅತಿ ವೇಗದ ಏಷ್ಯಾ ತಂಡ ಎಂಬ ಹೆಗ್ಗಳಿಕೆಗೆ ಬಾಂಗ್ಲಾದೇಶ ಪಾತ್ರವಾಗಿದೆ.

**ಅತಿ ವೇಗದ ದಾಖಲೆ:** ಈ ಗೆಲುವಿನ ಮೂಲಕ ಬಾಂಗ್ಲಾದೇಶ ಆಸ್ಟ್ರೇಲಿಯಾ ನೆಲದಲ್ಲಿ ತನ್ನ ಮೊದಲ ಟೆಸ್ಟ್ ಗೆಲುವು ದಾಖಲಿಸಿದ ಅತಿ ವೇಗದ ಏಷ್ಯಾ ತಂಡವಾಗಿದೆ. ಕೇವಲ 3 ಟೆಸ್ಟ್ ಪಂದ್ಯಗಳಲ್ಲೇ ಬಾಂಗ್ಲಾದೇಶ ಈ ಸಾಧನೆ ಮಾಡಿದೆ. ಪಾಕಿಸ್ತಾನ ಆಸ್ಟ್ರೇಲಿಯಾದಲ್ಲಿ ತನ್ನ ಮೊದಲ ಗೆಲುವಿಗಾಗಿ ಏಳು ಪಂದ್ಯಗಳವರೆಗೆ ಕಾಯಬೇಕಾಗಿತ್ತು. ಭಾರತಕ್ಕೆ ಮೊದಲ ಗೆಲುವು 12ನೇ ಟೆಸ್ಟ್‌ಗಳ ಬಳಿಕ ಒಲಿದಿತ್ತು. ಟೆಸ್ಟ್ ಆಡುವ ಇತರ ಏಷ್ಯಾ ರಾಷ್ಟ್ರಗಳ ಪೈಕಿ ಶ್ರೀಲಂಕಾ ಮಾತ್ರ ಆಸ್ಟ್ರೇಲಿಯಾ ನೆಲದಲ್ಲಿ ಇನ್ನೂ ಆತಿಥೇಯರನ್ನು ಮಣಿಸಲು ಸಾಧ್ಯವಾಗದ ತಂಡವಾಗಿದೆ. ಶ್ರೀಲಂಕಾ ಅಲ್ಲಿ ಈವರೆಗೂ 15 ಟೆಸ್ಟ್ ಪಂದ್ಯಗಳನ್ನು ಆಡಿದೆ. ಆದರೆ ಇನ್ನೂ ಒಂದೂ ಗೆಲುವು ಸಾಧಿಸಿಲ್ಲ.

**ಹಲವು ದಾಖಲೆಗಳು:** ಬಾಂಗ್ಲಾದೇಶದ 9 ವಿಕೆಟ್‌ಗಳ ಗೆಲುವು, ವಿಕೆಟ್‌ಗಳ ಅಂತರದಲ್ಲಿ ಅವರ ಎರಡನೇ ಅತಿದೊಡ್ಡ ಟೆಸ್ಟ್ ಗೆಲುವಾಗಿದೆ. 2024ರಲ್ಲಿ ರಾವಲ್ಪಿಂಡಿಯಲ್ಲಿ ಪಾಕಿಸ್ತಾನ ವಿರುದ್ಧ ದಾಖಲಿಸಿದ 10 ವಿಕೆಟ್‌ಗಳ ಗೆಲುವು ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ.

ಆಸ್ಟ್ರೇಲಿಯಾ 1995ರ ಬಳಿಕ ಇದೇ ಮೊದಲ ಬಾರಿಗೆ ಭಾರತವನ್ನು ಹೊರತುಪಡಿಸಿ ಮತ್ತೊಂದು ಏಷ್ಯಾ ತಂಡದ ವಿರುದ್ಧ ತವರಿನಲ್ಲಿ ಟೆಸ್ಟ್ ಪಂದ್ಯವನ್ನು ಸೋತಿದೆ. ಅಂದರೆ ಬರೋಬ್ಬರಿ 31 ವರ್ಷಗಳ ಬಳಿಕ ಆಸ್ಟ್ರೇಲಿಯಾ ಮತ್ತೊಂದು ಏಷ್ಯಾ ತಂಡದ ವಿರುದ್ಧ ತವರಿನಲ್ಲಿ ಸೋಲು ಕಂಡಿದೆ. 2022ರಲ್ಲಿ ಮೌಂಟ್ ಮೌಂಗನುಯಿಯಲ್ಲಿ ನ್ಯೂಜಿಲೆಂಡ್ ವಿರುದ್ಧ ದಾಖಲಿಸಿದ್ದ ಐತಿಹಾಸಿಕ ಗೆಲುವಿನ ಬಳಿಕ, ಎಸ್‌ಇಎನ್‌ಎ ರಾಷ್ಟ್ರಗಳಲ್ಲಿ ಬಾಂಗ್ಲಾದೇಶ ದಾಖಲಿಸಿದ ಎರಡನೇ ಟೆಸ್ಟ್ ಗೆಲುವು ಇದಾಗಿದೆ.

ಮೂರು ಟೆಸ್ಟ್ ಪಂದ್ಯಗಳ ಬಳಿಕ ಬಾಂಗ್ಲಾದೇಶ ಆಸ್ಟ್ರೇಲಿಯಾ ನೆಲದಲ್ಲಿ ತನ್ನ ಮೊದಲ ಟೆಸ್ಟ್ ಗೆಲುವು ದಾಖಲಿಸಿದೆ. ಅಲ್ಲದೆ, 2017ರಲ್ಲಿ ಮಿರ್‌ಪುರದಲ್ಲಿ ಆಸ್ಟ್ರೇಲಿಯಾ ವಿರುದ್ಧ ಸಾಧಿಸಿದ್ದ ಗೆಲುವಿನ ಬಳಿಕ, ಏಳು ಟೆಸ್ಟ್ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ವಿರುದ್ಧ ಬಾಂಗ್ಲಾದೇಶ ದಾಖಲಿಸಿದ ಎರಡನೇ ಗೆಲುವು ಇದಾಗಿದೆ.

# ಸರ್ಕಾರಿ ನೇಮಕಾತಿಯಲ್ಲೂ ಕ್ರೀಡಾಪಟುಗಳಿಗೆ ಶೇ.2 ಮೀಸಲಾತಿ: ಡಿಸಿಎಂ ಜಿ.ಪರಮೇಶ್ವರ್

**ಬೆಂಗಳೂರು, ಆ.16:** ರಾಜ್ಯದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಹಲವು ಮಹತ್ವದ ಕ್ರಮಗಳನ್ನು ಕೈಗೊಂಡಿದ್ದು, ಕರ್ನಾಟಕವನ್ನು ದೇಶದ ಪ್ರಮುಖ ಕ್ರೀಡಾರಾಜ್ಯವನ್ನಾಗಿ ರೂಪಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಉಪಮುಖ್ಯಮಂತ್ರಿಗಳು ಹಾಗೂ ಕ್ರೀಡಾ ಸಚಿವರಾದ ಡಾ. ಜಿ. ಪರಮೇಶ್ವರ ಹೇಳಿದರು.

ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆಯು ಕಂಠೀರವ ಕ್ರೀಡಾಂಗಣದ ಕರ್ನಾಟಕ ಒಲಂಪಿಕ್ ಭವನದಲ್ಲಿ ಭಾನುವಾರ ಆಯೋಜಿಸಿದ್ದ ರಾಷ್ಟ್ರೀಯ ಚಾಂಪಿಯಷ್‌ಗಳಲ್ಲಿ ಸಾಧನೆ ಮಾಡಿದ ಕಿರಿಯ, ಯುವಕರ ಬಾಸ್ಕೆಟ್‌ಬಾಲ್ ತಂಡಗಳನ್ನು ಅಭಿನಂದಿಸಿ ಮಾತನಾಡಿದರು.

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಶೇ.2ರಷ್ಟು ಮೀಸಲಾತಿ ಕಲ್ಪಿಸಲಾಗಿತ್ತು. ತದನಂತರ ಅದನ್ನು ಶೇ.3ಕ್ಕೆ ಹೆಚ್ಚಿಸಲಾಗಿದೆ. ಹಲವು ಕ್ರೀಡಾಪಟುಗಳು ಪಿಎಸ್‌ಐ, ಕಾನ್‌ಸ್ಟೇಬಲ್ ಹುದ್ದೆಗಳಿಗೆ ನೇಮಕವಾಗಿದ್ದಾರೆ. ಪದಕ ವಿಜೇತ ಕ್ರೀಡಾಪಟುಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವ ಪದ್ಧತಿಯನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು. ಸರ್ಕಾರ 72,000 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಿದ್ದು, ಈ ನೇಮಕಾತಿಗಳಲ್ಲಿಯೂ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ ಸೌಲಭ್ಯ ಸಿಗಲಿದೆ. ದೇಶದ ಎಲ್ಲ ರಾಜ್ಯಗಳಲ್ಲೂ ಇಂತಹ ಅವಕಾಶವಿಲ್ಲ. ಕರ್ನಾಟಕದಲ್ಲಿ ಕ್ರೀಡಾಪಟುಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

**ಪ್ರೋತ್ಸಾಹಧನ:** ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಭಾಗವಹಿಸಿದ ಎಲ್ಲಾ ಕ್ರೀಡಾಪಟುಗಳಿಗೆ ತಲಾ 5 ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗಿದೆ. ಪದಕ ವಿಜೇತರಿಗೆ 15 ಲಕ್ಷ ರೂ. ಪ್ರೋತ್ಸಾಹಧನ ನೀಡಲು ಕ್ರಮ ಕೈಗೊಳ್ಳಲಾಗುವುದು. ಪ್ಯಾರಾ ಒಲಿಂಪಿಕ್‌ನಲ್ಲಿ ಮೈಸೂರು ಮೂಲದ ಶಿಲ್ಪಾ ಅವರು ಭಾಗವಹಿಸಿ ಕಂಚಿನ ಪದಕ ಗೆದ್ದಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಸರ್ಕಾರ ಹಾಗೂ ಕ್ರೀಡಾ ಸಂಸ್ಥೆಗಳು ಪ್ರೋತ್ಸಾಹ ನೀಡುವುದು ಒಂದು ಭಾಗವಾಗಿದ್ದು, ಅದಕ್ಕೆ ಪೂರಕವಾಗಿ ಕ್ರೀಡಾಪಟುಗಳು ಶ್ರದ್ಧೆ, ಪರಿಶ್ರಮ ಮತ್ತು ಬದ್ಧತೆಯಿಂದ ತಮ್ಮನ್ನು ತಾವು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು. ಶ್ರದ್ಧೆಯಿಂದ ಪ್ರಯತ್ನಿಸಿದರೆ ಯಾವುದೇ ಕ್ಷೇತ್ರದಲ್ಲೂ ಸಾಧನೆ ಮಾಡಬಹುದು. ಒಬ್ಬ ಕ್ರೀಡಾಪಟುವಿನ ಬದ್ಧತೆ ಇಡೀ ತಂಡಕ್ಕೆ ಸ್ಫೂರ್ತಿಯಾಗಲಿದೆ ಎಂದು ಕಿವಿಮಾತು ಹೇಳಿದರು.

**60 ಎಕರೆಯಲ್ಲಿ ಸ್ಪೋರ್ಟ್ಸ್ ಸಿಟಿ ನಿರ್ಮಾಣಕ್ಕೆ ಯೋಜನೆ:** ರಾಜ್ಯದಲ್ಲಿ ಕ್ರೀಡೆಗೆ ಉತ್ತೇಜನ



ನೀಡಲು ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಉತ್ತಮ ತರಬೇತಿ ಪಡೆಯಲು ಕ್ರೀಡಾಪಟುಗಳನ್ನು ವಿದೇಶಗಳಿಗೆ ಕಳುಹಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ. ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಕಾರ್ಯಕ್ರಮವೂ ಕ್ರೀಡಾಪಟುಗಳಿಗೆ ಉತ್ತಮ ವೇದಿಕೆಯನ್ನು ಒದಗಿಸುತ್ತಿದೆ. ದೇವನಹಳ್ಳಿ ಸಮೀಪ ಸುಮಾರು 60 ಎಕರೆ ಪ್ರದೇಶದಲ್ಲಿ ಸ್ಪೋರ್ಟ್ಸ್ ಸಿಟಿ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ವಿವಿಧ ಕ್ರೀಡೆಗಳನ್ನು ಒಂದೇ ಸಮಗ್ರ ಕ್ರೀಡಾ ಮೂಲಸೌಕರ್ಯದಲ್ಲಿ ನಡೆಸಲು ಅನುಕೂಲವಾಗುವಂತೆ ನೀಲನಕ್ಷೆ ಸಿದ್ಧಪಡಿಸಲಾಗಿದೆ. ಕರ್ನಾಟಕವನ್ನು ದೇಶದ ಪ್ರಮುಖ ಕ್ರೀಡಾ ರಾಜ್ಯವಾಗಿ ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಪರಮೇಶ್ವರ್ ತಿಳಿಸಿದರು.

**ಕಂಠೀರವ ಕ್ರೀಡಾಂಗಣ ಮೇಲ್ದರ್ಜೆಗೆ:** ಕ್ರೀಡಾಪಟುವಾಗಿ ಮತ್ತು ಕ್ರೀಡಾ ಸಚಿವನಾಗಿ ರಾಜ್ಯದ ಕ್ರೀಡಾ ಅಭಿವೃದ್ಧಿಗೆ ನನ್ನದೇ ಆದ ದೂರದೃಷ್ಟಿ ಇಟ್ಟುಕೊಂಡು, ನೀಲಿನಕ್ಷೆ ರೂಪಿಸಿದ್ದೇನೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲು ಯೋಜನೆ ರೂಪಿಸಲಾಗಿದ್ದು, ಸುಮಾರು 5,000 ಕೋಟಿ ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿಗೆ ಗಮನ ಹರಿಸಲಾಗುವುದು ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದರು.

ಬಾಸ್ಕೆಟ್‌ಬಾಲ್ ಕ್ರೀಡೆಯ ಅಭಿವೃದ್ಧಿಗಾಗಿ ಸರ್ಕಾರ 5 ಎಕರೆ ಜಾಗವನ್ನು ನೀಡಿದೆ. ಕತಾರ್‌ನಲ್ಲಿ ವಿಶ್ವಕಪ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ಗಾಗಿ ಎಂಟು ಕ್ರೀಡಾಂಗಣಗಳನ್ನು ನಿರ್ಮಿಸಿದ್ದಾರೆ. ಎಲ್ಲವೂ ಅತ್ಯುತ್ತಮ ಗುಣಮಟ್ಟದ ಮೂಲಸೌಕರ್ಯವನ್ನು ಹೊಂದಿವೆ. ಅದೇ ರೀತಿಯ ಆಧುನಿಕ ಮೂಲಸೌಕರ್ಯವನ್ನು ಕರ್ನಾಟಕದಲ್ಲಿಯೂ ನಿರ್ಮಿಸಿದರೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಚಾಂಪಿಯನ್‌ಶಿಪ್‌ಗಳನ್ನು ರಾಜ್ಯದಲ್ಲಿ ಆಯೋಜಿಸಲು ಸಾಧ್ಯವಾಗಲಿದೆ ಎಂದರು.

**ಕಾಮನ್ವೆಲ್ತ್ ಕ್ರೀಡಾಕೂಟಕ್ಕೆ ಸಿದ್ಧತೆ:** ಗುಜರಾತ್ನ ಅಹಮದಾಬಾದ್‌ನಲ್ಲಿ ಕಾಮನ್ವೆಲ್ತ್ ಗೇಮ್ಸ್ ನಡೆಯಲಿದ್ದು, ಈವೇಳೆ ಕಂಠೀರವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲು ಸಾಧ್ಯವಾದರೆ ಕೆಲವು ಕ್ರೀಡಾ ಸ್ಪರ್ಧೆಗಳನ್ನು ಬೆಂಗಳೂರಿನಲ್ಲಿ ಆಯೋಜಿಸುವ ಅವಕಾಶ ದೊರೆಯಲಿದೆ. ಇದರಿಂದ ಕರ್ನಾಟಕದ ಕ್ರೀಡಾ ಸಾಮರ್ಥ್ಯವನ್ನು ದೇಶ-ವಿದೇಶಗಳಿಗೆ ಪರಿಚಯಿಸಲು ಸಾಧ್ಯವಾಗಲಿದೆ ಎಂದರು.

ಕರ್ನಾಟಕದಲ್ಲಿ ಕ್ರೀಡಾಪಟುಗಳಿಗೆ ಉತ್ತಮ ತರಬೇತಿ, ಮೂಲಸೌಕರ್ಯ, ಉದ್ಯೋಗದಲ್ಲಿ ಮೀಸಲಾತಿ ಹಾಗೂ ಆರ್ಥಿಕ ಪ್ರೋತ್ಸಾಹ ಸೇರಿದಂತೆ ಅಗತ್ಯ ಎಲ್ಲ ರೀತಿಯ ನೆರವು ಒದಗಿಸುವ ಮೂಲಕ ರಾಜ್ಯವನ್ನು ದೇಶದ ಪ್ರಮುಖ ಕ್ರೀಡಾ ಕೇಂದ್ರಸ್ಥಾನವಾಗಿ ರೂಪಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಸಂಪೂರ್ಣ ಸಮಯ ಮತ್ತು ಶ್ರಮವನ್ನು ಗೋವಿಂದರಾಜ್ ಅವರು ಮೀಸಲಿಟ್ಟು ಕೆಲಸ ಮಾಡುತ್ತಿದ್ದಾರೆ. ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಅದನ್ನು ಪ್ರಾಮಾಣಿಕವಾಗಿ ಮತ್ತು ಸಂಪೂರ್ಣವಾಗಿ ಮಾಡದಿದ್ದರೆ ಅವರಿಗೆ ಸಮಾಧಾನವಿರುವುದಿಲ್ಲ. ಕರ್ನಾಟಕದಲ್ಲಿ ಬ್ಯಾಸ್ಕೆಟ್ಬಾಲ್ ಕ್ರೀಡೆ ಬೆಳೆದಿರುವುದಕ್ಕೆ ಗೋವಿಂದರಾಜ್ ಅವರ ಹಲವು ವರ್ಷಗಳ ನಿರಂತರ ಪ್ರಯತ್ನ ಮತ್ತು ಪರಿಶ್ರಮ ಇದೆ ಎಂದರು.

ಬಾಸ್ಕೆಟ್‌ಬಾಲ್ ಕ್ರೀಡೆಯನ್ನು ಉತ್ತೇಜಿಸುವ ಉದ್ದೇಶದಿಂದ ಒಳಾಂಗಣ ಕ್ರೀಡಾಂಗಣ ಸೇರಿದಂತೆ ಅಗತ್ಯ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಅವರ ಮನವೊಲಿಸಿ ರಾಜ್ಯದಲ್ಲಿ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಯ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಒಲಂಪಿಕ್ ಸಂಸ್ಥೆಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಕೆ. ಗೋವಿಂದರಾಜು, ಕ್ರೀಡಾ ಇಲಾಖೆಯ ಆಯುಕ್ತ ಎಂ.ಎನ್.ಅನುಚೇತ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.